ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳು

ಸಂಶೋಧನ ವಿದ್ಯಾರ್ಥಿ

ಸಂಪದಾ. ಸಿ. ಕೆರಿಮನಿ

ಮಾರ್ಗದರ್ಶಕರು :

ಪ್ರೊ. ಡಿ. ಲಿಂಗಯ್ಯ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು - 2008

260

260

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪದವಿಯ ಸಂಪ್ರಬಂಧ

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳು

ಸಂಶೋಧನ ವಿದ್ಯಾರ್ಥಿ

ಸಂಪದಾ. ಸಿ. ಕೆರಿಮನಿ

ಮಾರ್ಗದರ್ಶಕರು :

ಪ್ರೊ. ಡಿ. ಲಿಂಗಯ್ಯ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು - 2008

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006-2007ನೇ ಸಾಲಿನ ಎಂ.ಫಿಲ್. ಪದವಿಗಾಗಿ "ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳು" ಎಂಬ ಸಂಪ್ರಬಂಧವನ್ನು ಪ್ರೊ. ಡಿ.ಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ದಿನಾಂಕ : 10-11-2008

ಸ್ಥಳ : ಬೆಂಗಳೂರು

(ಸಂಪದಾ. ಸಿ. ಕೆರಿಮನಿ)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2006-2007ನೇ ಸಾಲಿನ ಎಂ.ಫಿಲ್. ಪದವಿಗಾಗಿ "ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳು" ಎಂಬ ಸಂಪ್ರಬಂಧವನ್ನು ಸಂಪದಾ. ಸಿ. ಕೆರಿಮನಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ದಿನಾಂಕ : 10-11-2008

ಸ್ಥಳ : ಬೆಂಗಳೂರು

(ಪ್ರೊ. ಡಿ. ಲಿಂಗಯ್ಯ)



ಅನುಪಮ ಚರಿತ
ಪೂಜ್ಯ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ-1

ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ

ಸಂಶೋಧನೆಯ ಉದ್ದೇಶದಲ್ಲಿ ಎರಡು ಮಹತ್ವದ ಮೈಲುಗಲ್ಲುಗಳೆಂದರೆ ಒಂದು ಜ್ಞಾನದ ಕ್ಷಿತಿಜವನ್ನು ವಿಸ್ತರಿಸುವುದು ಮತ್ತೊಂದು ಸಮಾಜ ಸುಧಾರಣೆಯನ್ನು ಮಾಡುವುದು ಕವಿಯ ಸಮಗ್ರ ಜೀವನದ ಮೇಲೆ ಬೆಳಕು ಚೆಲ್ಲಿದಾಗ ಅದೆಷ್ಟೋ ಸಂಗತಿಗಳು ಕಾಲ ಪುರುಷನ ತುಳಿತಕ್ಕೆ ಒಳಗಾಗಿ ಮಾಸಿಹೋಗಿರುತ್ತವೆ. ಆದರೂ ಆ ವ್ಯಕ್ತಿಯು ರಚಿಸಿದ ಕೃತಿಗಳ ಮತ್ತು ಆ ವ್ಯಕ್ತಿಯನ್ನು ಕುರಿತು ರಚಿಸಿದ ಇತರ ವ್ಯಕ್ತಿಗಳ ಕೃತಿಗಳು ಮತ್ತು ಬಿಡಿಲೇಖನಗಳಿಂದ ಅವರ ವ್ಯಕ್ತಿತ್ವಕ್ಕೆ ಸ್ವಲ್ಪಾದರೂ ಬೆಳಕು ಚೆಲ್ಲಲು ಅನುಕೂಲವಾಗುತ್ತದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪಾರಲೌಕಿಕ ವಿಷಯಗಳನ್ನು ಅಥವಾ ತತ್ವ ಜ್ಞಾನ ವಿಷಯಗಳನ್ನು ಕಾವ್ಯದಲ್ಲಿ ಅಭಿವ್ಯಕ್ತಿಸಿದ ತತ್ವಪದಕಾರದಲ್ಲಿ ಶ್ರೀ ಬಾಲ ಲೀಲಾ ಮಹಾಂತ ಶಿವಯೋಗಿಗಳು ಅಗ್ರ ಗಣ್ಯರಾಗಿದ್ದಾರೆ.

ಇವರ ಕೈವಲ್ಯ ದರ್ಪಣ ಗ್ರಂಥ ಕೈವಲ್ಯ ಚಿಂತಕರಿಗೆ ಹೊಸ ಹೊಳಹುಗಳನ್ನು ನೀಡುತ್ತಿದೆ. ಅವರ ಹಿಂದಿನ ತತ್ವಪದಕಾರರ ಚಿಂತನೆಯ ಸಾರಾಂಶವನ್ನು ಹೀರಿಕೊಂಡು ಮುಂದಿನ ತತ್ವಪದಕಾರರಿಗೆ ಪ್ರೇರಣೆಯಾಗುವಂತೆ ಮಹಾಂತ ಶಿವಯೋಗಿಗಳ ಬದುಕು ಮತ್ತು ಪದಗಳು ವಿಶಿಷ್ಠತೆಯನ್ನು ಕಾಯ್ದುಕೊಂಡಿದೆ, ಮಹಾಂತ ಶಿವಯೋಗಿಗಳು ಅಪರೂಪದ ಶಿವಭಕ್ತರಾಗಿರುವುದರಿಂದ ಅವರ ಹಾಡು ಸಂಪೂರ್ಣವಾಗಿ ಶಿವಮಯವಾಗಿದೆ. ಇಂತಹ ತಾತ್ವಿಕ ಯೋಗಿಯ ಚಿಂತನೆಗಳ ಅಧ್ಯಯನ ಈ ಸಂಪ್ರಬಂಧ ಉದ್ದೇಶವಾಗಿದೆ.

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಪದಗಳನ್ನು ಅಭ್ಯಸಿಸುತ್ತಾ ಹೋದಹಾಗೆ ಅವರ ಸಮಗ್ರ ಜೀವನದ ಮೇಲೆ ಹೊಸಬೆಳಕು ಮೂಡಿಬರುತ್ತದೆ. ಅವರ ಕೈವಲ್ಯ ದರ್ಪಣವನ್ನು ಅನೇಕ ವ್ಯಕ್ತಿಗಳು ಓದಿ ಹೊಸಹೊಸ ವಿಚಾರಗಳನ್ನು ಕುರಿತಂತೆ ಬರೆದಿರುವುದು ಕಂಡು ಬರುತ್ತದೆ. ಶಿವಯೋಗಿಗಳು ತಮ್ಮ ವೈಯಕ್ತಿಕ

ಬದುಕಿನ ಬಗೆಗೆ ಯಾವ ವಿಷಯವನ್ನು ತಿಳಿಸಿರುವುದಿಲ್ಲ. ಅವರು ಶಿವಯೋಗಿಗಳು ಆಗುವ ಪೂರ್ವದಲ್ಲಿರುವ ಸಂಗತಿಗಳು ಕೂಡಾ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಅವರ ಒಟ್ಟು ಕೃತಿಯಿಂದ ಜ್ಞಾನದ ಕ್ಷಿತಿಜ ಬೆಳೆಯುವುದಲ್ಲದೆ ಸಮಾಜ ಸುಧಾರಣೆಯು ಕೂಡಾ ಆಗುತ್ತದೆ, ಅವರು ಬರೆದಿರುವ ಕೃತಿಯ ಮೇಲೆ ಹಾಗೂ ಇನ್ನುಳಿದವರು ಬರೆದಿರುವ ಗ್ರಂಥಗಳ ಮೇಲಿಂದ ಪ್ರಾಮಾಣಿಕ ಸಂಶೋಧನೆಯನ್ನು ಮಾಡಿದಾಗ ಅವರ ಜೀವನವನ್ನು ಕುರಿತಂತೆ ಹೊಸಬೆಳಕು ಮೂಡುತ್ತದೆ. ಆದರೆ ಅವರ ಅಂತರಂಗದ ಆಶೆ ಏನಿತ್ತು ಎಂಬುದೇ ಸ್ಪಷ್ಟವಾಗಿ ತಿಳಿಯುತ್ತಿಲ್ಲ. ಅವರ ಬದುಕು ಹಾಗೂ ಬರಹಕ್ಕಿರುವ ಸಾಮ್ಯತೆಯಲ್ಲಿ ಹೇಳುವುದೇ ನನ್ನ ಉದ್ದೇಶವಾಗಿದೆ.

ನಮ್ಮ ಶರಣರು ಎಲೆ ಮರೆಯ ಹೂವಿನಂತಿದ್ದು ಮಿಂಚಿ ಮರೆಯಾದ ಅಪ್ಪಟ ಸಮಾಜ ಸುಧಾರಕರಾದ ಶರಣಜೀವಿಗಳು ಅದೇ ಸಾಲಿನಲ್ಲಿ ಶಿವಯೋಗ ನಿಷ್ಠರು ಆದ ಗದಗ ಜಿಲ್ಲೆಯ ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಸಂಪೂರ್ಣ ಪರಿಚಯವನ್ನು ಅಧ್ಯಯನ ಮಾಡುವುದೇ ಸಂಪ್ರಬಂಧದ ಉದ್ದೇಶವಾಗಿದೆ. ನಾನು ಅಧ್ಯಯನ ಮಾಡುತ್ತಾ ಹೋದಂತೆ ನನಗೆ ಹೊಸ ಹೊಸ ಅನುಭವಗಳು ಗೋಚರಿಸಿ ಆನಂದ ಉಂಟಾಗುತ್ತದೆ. ಸುಳಿದ ಬಾಳೆಯ ಹಣ್ಣನ್ನು ತಿಂದಷ್ಟು ಕಳೆದ ಸಿಗುರಿನ ಕಬ್ಬಿನ ಹಾಲನ್ನು ಸವಿದಷ್ಟು ಅಳಿದ ವಿಷಯದ ಹಾಲನ್ನು ಸವಿದಷ್ಟು ಆನಂದ ಅವರ ಪದಗಳಲ್ಲಿ ನನಗೆ ಆಗುತ್ತದೆ, ಆದರೆ ಅವರ ವ್ಯಕ್ತಿತ್ವವನ್ನು ಕುರಿತಂತೆ ಬೆಳಕು ಚೆಲ್ಲಲು ಇನ್ನು ಅಸಮರ್ಥರಾಗಿದ್ದೇವೆ ಎಂದೇ ಹೇಳಬೇಕು.

ಈಗಾಗಲೇ ಪ್ರೊ ಎಸ್.ಎಸ್. ಬಸವನಾಳರೂ 1952 ರಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ ಗ್ರಂಥ ಸಂಗ್ರಹಿಸಿ ಧಾರವಾಡದ ಮುರಘಾ ಮಠದಿಂದ ಪ್ರಕಟಿಸಿದ್ದಾರೆ, ಡಾ॥ ಎಸ್.ಎಸ್.ಬೂಸರೆಡ್ಡಿಯವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಂಗದಿಂದ ಬಾಲಲೀಲಾ ಮಹಾಂತ ಶಿವಯೋಗಿಗಳನ್ನು ಕುರಿತಂತೆ ವಿಶೇಷ ಉಪನ್ಯಾಸ ಲೇಖನದಲ್ಲಿ ಪ್ರಕಟಿಪಡಿಸಿದ್ದಾರೆ. ಶ್ರೀ.ಟಿ. ಮಹಾದೇವಯ್ಯನವರಿಂದ ಬಾಲಲೀಲಾ ಮಹಾಂತ ಎಂಬ ಗ್ರಂಥ ಮುಳಗುಂದ ಗವಿಮಠದಿಂದ ಪ್ರಕಟವಾಗಿದೆ.

ಧಾರವಾಡದ ಮುರಾಘಾ ಮಠದಿಂದ ಭಕ್ತಿಗೀತೆಗಳು ಎನ್ನುವ ಗ್ರಂಥವು 2002 ರಲ್ಲಿ ಪ್ರಕಟವಾಗಿದೆ. ಪ್ರೊ ಷಣ್ಮುಖಯ್ಯ ಅಕ್ಕೂರಮಠ ಇವರು ಕೈವಲ್ಯ ದರ್ಪಣ ಗ್ರಂಥವನ್ನು 5ನೇ ಮುದ್ರಣವಾಗಿ 2002 ರಲ್ಲಿ ಪ್ರಕಟಿಸಿದ್ದಾರೆ.

ದ್ಯಾಂಪುರ ಚೆನ್ನಕವಿಗಳಿಂದ ವಿರಚಿತ ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳ ಪುರಾಣವು 2006 ರಲ್ಲಿ ಪ್ರಕಟವಾಗಿದೆ ಈ ಮೇಲಿನ ಗ್ರಂಥಗಳಲ್ಲದೆ ಸಿದ್ದಯ್ಯ ಪುರಾಣಿಕರ 'ಶರಣ ಲೀಲಾಮೃತ" ತಿಪ್ಪೆರುದ್ರಸ್ವಾಮಿಗಳ "ಶರಣ ಕಥಾಮೃತ" ಪ್ರೊ. ಸಿ.ವಿ. ಕೆರಿಮನಿ "ವೀರಶೈವ ಸಾಹಿತ್ಯ ಸಮೀಕ್ಷೆ" ರಾ.ಯ ಧಾರವಾಡಕರವರ "ಹೊಸಗನ್ನಡ ಉದಯ ಕಾಲ" ಮಹಾದೇವ ಬಣಕಾರರವರ ಹೊಸಗನ್ನಡ ಅರುಣೋದಯ ಮಹಾಪ್ರಬಂಧದಲ್ಲಿ ಕರ್ನಾಟಕ ಕವಿಚರಿತೆಯಲ್ಲಿ ಡಾ.ಸಂಗಮೇಶ ಸವದತ್ತಿಮಠವರು ಸಂಪಾದಿಸಿದ ಘನಶ್ರೀ ಗ್ರಂಥದಲ್ಲಿಯ ಪ್ರೊ ಕೆರಿಮನಿಯವರು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಅನುಭಾವ ಪದಗಳು ಹಾಗೂ ಡಾ॥ ಅಯ್ಯನಗೌಡರು ಬರೆದ ಮಹಾಪ್ರಬಂಧದಲ್ಲಿ ಮೈಲಾರ ಬಸವಲಿಂಗ ಶಿವಶರಣ ಒಂದು ಅಧ್ಯಯನದಲ್ಲಿ ಹೀಗೆ ಹಲವಾರು ಸಾಹಿತಿಗಳು ಶಿವಯೋಗಿಗಳನ್ನು ಕುರಿತಂತೆ ಅವರ ಜೀವನ ಪರಿಚಯವನ್ನು ಸಂಕ್ಷೀಪ್ತವಾಗಿ ಸಾಹಿತ್ಯ ಪರಿಚಯವನ್ನು ಮಾಡಿಕೊಡಲಾಗಿದೆ.

ಕೈವಲ್ಯ ಸಾಹಿತ್ಯ ಪ್ರಕಾರದಲ್ಲಿ ಒಬ್ಬ ತತ್ವಪದಕಾರನ ವ್ಯಕ್ತಿತ್ವ ನಿರೂಪಣೆಗೆ ಹೆಚ್ಚಿನ ಸ್ವಾತಂತ್ರ್ಯವುಂಟು, ಏಕೆಂದರೆ ಇಲ್ಲಿ ಆತ ತನ್ನ ಜೀವನಾನುಭವನ್ನು ಮುಕ್ತವಾಗಿ ನಿರೂಪಿಸಬಹುದು, ತನ್ನದೇ ಆದ ಆಳ ವಿಸ್ತಾರಗಳನ್ನು ಹೊಂದಿರುವುದರಿಂದ ಹೊಸಹೊಸ ಪ್ರಯೋಗಗಳನ್ನು ನಡೆಸಿ ಮುಂದಿನ ಪೀಳಿಗೆಯ ಮೇಲೆ ತನ್ನ ವಿಚಾರಗಳ ಪ್ರಭಾವವನ್ನು ಬೀರಲು ಸಾಧ್ಯ ಈ ಗ್ರಂಥದಲ್ಲಿ ಅನೇಕ ಪವಾಡಗಳು ಹಾಗೂ ಸಂಸಾರ ನಶ್ವರ, ಪರಮಾತ್ಮನೊಬ್ಬನೆ ಸತ್ಯ ಎಂಬ ವಿಚಾರಗಳಿಂದೊಡಗೂಡಿದ ಹಾಡುಗಳನ್ನು ಇಲ್ಲಿ ಬರೆಯಲಾಗಿದೆ. ಆದ್ದರಿಂದ ವೀರಶೈವ ಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ, ಒಟ್ಟಾರೆ ಅದರ ಒಳನೋಟಗಳನ್ನು ಅಧ್ಯಯನ ಮಾಡುವುದೇ ಮುಖ್ಯ ಉದ್ದೇಶವಾಗಿದೆ. ಅವರು ಬರೆದ 'ಶಿಶುಗೀತಾ ಅಪೂರ್ವ ಜೋಗುಳ ಹಾಡು

“ ಲಾಲಿ ಲಾಲಿಯು ಪರಬ್ರಹ್ಮನ ಶಿಶುವೇ।

ಮಾಲೆಯ ಧರಿಸುವೇ ಮಲ್ಲಿಗೆ ಹೂವಿನ।   ಪದ 98

ಈ ಜೋಗುಳ ಪದದಲ್ಲಿ ಬಾಲಕನ ಬಾಲಲೀಲಾ ವಿಲಾಸದ ಅಧ್ಬುತ ಕಲ್ಪನೆ ಇದೆ. ಶಿವಯೋಗದ ಪಾರಿಭಾಷಿಕ ಹಿನ್ನಲೆಯಲ್ಲಿ ರಚಿಸಿದ ಕವಿತಾ ಪ್ರತಿಭೆಯಿಂದೊಡಗೂಡಿದ ಭಾವಗೀತೆ ಇದಾಗಿದೆ.

ಶಿವಯೋಗದ ತುತ್ತ ತುದಿಯಲ್ಲಿ ನಿಂತು ಸಕಲ ಜೀವರಾಶಿಗಳನ್ನು ಸಮಭಾವನೆಯಿಂದ ಕಾಣುವ ಭಾವೈಕ್ಯತೆಯ ಮತ್ತೊಂದುಗೀತೆ

ಅವರವರವರ ಬಕುತಿಗೆ ಅವರವರ ಭಾವಕ್ಕೆ।

ಅವರವರ ತೆರನಾಗಿ ಇರುತಿಹನು ಶಿವಯೋಗಿ॥ [1]   ಪದ 71

ಇಂತಹ ಗೀತೆಗಳು ಅವರ ಕೈವಲ್ಯ ದರ್ಪಣದಲ್ಲಿ ಹೇರಳವಾಗಿ ಸಿಗುತ್ತವೆ. ಸರಳವೂ, ಸುಂದರವು, ಮನಸ್ಸಿಗೆ ಮುದನೀಡಬಲ್ಲ ಈ ಪದ್ಯಗಳು ಓದುಗನಿಗೆ ಅದ್ಭುತ ರಸದೌತಣವನ್ನು ನೀಡುತ್ತವೆ. ಮನುಷ್ಯ, ಭಕ್ತಿ, ಜ್ಞಾನ, ವೈರಾಗ್ಯಗಳ ಅರಿವು ಮಾಡಿಕೊಂಡು ಪ್ರಾಮಾಣಿಕ ಬದುಕಿನಲ್ಲಿ ನಡೆಯಲು ಇವರ ಹಿತನುಡಿಗಳು ಹಾಗೂ ಮಾನವೀಯ ಗುಣ ಮೌಲ್ಯಗಳ ಈ ಪ್ರತಿಪಾದನೆ ಅವರ ತತ್ವಪದಗಳಲ್ಲಿ ಕಾಣುತ್ತವೆ. ಸಂಸಾರದಲ್ಲಿದ್ದು ಇಲ್ಲದಂತಿರಬೇಕು, ಎಚ್ಚರವಾಗಿರಬೇಕು, ನಿನ್ನ ಗುರಿಯ ಕಡೆಗೆ ಸದಾ ಗಮನವಿರಬೇಕು, ಬದುಕಿನ ಸಾಕ್ಷರತೆಯನ್ನು ತಿಳಿದುಕೊಳ್ಳಬೇಕು, ಈ ಜಗತ್ತಿನಿಂದ ಓಡಿಹೋಗಬೇಡ ನಿನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಲು ಅಂದರೆ ಮಾತ್ರ ಪರಮಾತ್ಮನ ಕೃಪೆ ನಿನಗಾಗುತ್ತದೆ ಎನ್ನುವ ಭರವಸೆಯ ನುಡಿಗಳನ್ನು ಕೈವಲ್ಯ ದರ್ಪಣದಲ್ಲಿ ನೀಡಿದ್ದಾರೆ.

ಕೈವಲ್ಯ ದರ್ಪಣದಲ್ಲಿ ಅವರ ವಯಕ್ತಿಕ ಜೀವನಕ್ಕಿಂತ ಸಾಹಿತ್ಯಸೇವೆ ಅದಕ್ಕೂ ಹೆಚ್ಚಾಗಿ ಶಿವಯೋಗ ಸಾಧನೆ ಸಂಬಂಧಪಟ್ಟಂತೆ ಅನೇಕ ಸ್ಪಷ್ಟ ಆಧಾರಗಳು ಸಿಗುತ್ತವೆ. ಸಾಮಾನ್ಯರಿಗೆ ಶಿವಯೋಗ ನಿಲುಕುವಂತಹದಲ್ಲ ಯಾರು ಶಿವಚಿಂತನೆಯಲ್ಲಿ ತೊಡಗಿರುತ್ತಾರೋ ಅವರಿಗೆ ತಿಳಿಯುತ್ತದೆ. ಶಿವಾನುಭವ ಮತ್ತು ಲೋಕಾನುಭವಗಳ

ವಿಷಯಗಳನ್ನು ತಮ್ಮ ಪದಗಳಲ್ಲಿ ಸರಳೀಕರಣ ಮಾಡಿದ್ದಾರೆ. ಆಧ್ಯಾತ್ಮವು ಸಂಸಾರಿಕರಿಗೆ ನೀರಸವಾಗಿ ಕಾಣುತ್ತದೆ, ನಿತ್ಯದ ನೂರೆಂಟು ವ್ಯವಹಾರಗಳ ಗೊಂದಲಿನಲ್ಲಿ ಸಿಕ್ಕಿಹಾಕಿಕೊಂಡ ಮನುಜಜನನ್ನು ಆಧ್ಯಾತ್ಮದ ಕಡೆಗೆ ಅವರ ಗಮನ ಸೆಳೆಯಲು ಹದವರಿತು ಸಾಹಿತ್ಯ ಬಳಸಿದ್ದು ಬಹು ಪ್ರಮುಖ ಅಂಶ ಇವರ ಕಾವ್ಯಶೈಲಿ ಸರಳವಾಗಿದೆ. ಭಾಷೆ ಸಾಮಾನ್ಯರನ್ನು ಆಕರ್ಷಿಸುತ್ತದೆ. ಅವರ ನಿರೂಪಣೆ ಸುಂದರ ಶಬ್ದಗಳ ಜೋಡಣೆ ಅರ್ಥವಂತಿಕೆಯಿಂದೆ ಕೂಡಿದೆ, ಸಂದರ್ಭಕ್ಕನುಸಾರವಾಗಿ ನಾನು ಅನುಭವಗಳನ್ನು ಶಿವಯೋಗಿಗಳು ತಮ್ಮ ಗೀತೆಗಳಲ್ಲಿ ಹೇಳಿದ್ದಾರೆ.

12ನೇ ಶತಮಾನದ ಶರಣರು ಹೇಗೆ ಸಮಕಾಲೀನ ಜನರ ಅಭಿರುಚಿಗೆ ತಕ್ಕಂತೆ ವಚನಗಳನ್ನು ಬರೆದರೋ ಹಾಗೆಯೇ ಶಿವಯೋಗಿಗಳು ಕೂಡ ಸಮಾಜದ ಅಂದಂದಿನ ಜನರ ಮಾನಸಿಕ ಸ್ಥಿತಿಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೆಚ್ಚು ಪರಿಣಾಮಕಾರಿಯಾಗಿ ಬರೆದ ಗೀತೆಗಳು ಇಂದಿಗೂ ಕೂಡಾ ಪ್ರಸ್ತುತ.

18 ಮತ್ತು 19ನೇ ಶತಮಾನದಲ್ಲಿ ಸಂತರು ಮಹಾಂತರು ತತ್ವಪದಕಾರರು ಹೀಗೆ ಅನೇಕ ಮಹಾನುಭಾವರು ಜನಿಸಿ ತಮ್ಮ ಅನುಭಾವ ನುಡಿಗಳನ್ನು ಹಿಂದೆ ಬೆಳೆದು ಬಂದ ಸಾಹಿತ್ಯ ಪ್ರಕಾರದಂತೆ ಬರೆಯದೆ ಜನರು ಹತ್ತಿರಕ್ಕೆ ಬಂದು ಅವರಿಗೆ ಮನಗಂಟುವಂತೆ ಹೊಸ ಪ್ರಕಾರಬಂದನ್ನು ಹುಟ್ಟುಹಾಕಿದರು. ಅದೇ ಕೈವಲ್ಯ ಸಾಹಿತ್ಯ ಇವರಲ್ಲಿ ಪ್ರಥಮರು ನಿಜಗುಣ ಶಿವಯೋಗಿಗಳು (15ನೇ ಶತಮಾನದ) ನಂತರ ಮುಪ್ಪಿನ ಷಡಕ್ಷರಿಗಳು ಮೈಲಾರ ಬಸವಲಿಂಗ ಶರಣರು, ಶಿಶುನಾಳ ಶರೀಫರು ಹಾಗೇ ನನ್ನ ಅಧ್ಯಯನದ ಆರಾಧ್ಯ ಮೂರ್ತಿ ಬಾಲಲೀಲಾ ಮಹಾಂತ ಶಿವಯೋಗಿಗಳು.

ವ್ಯಾಪ್ತಿ :–

ಈ ಸಂಪ್ರಬಂಧವು ಏಳು ಅಧ್ಯಾಯಗಳನ್ನು ಪಡೆದಿದೆ, ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ ಅದರ ಸ್ವರೂಪ ವ್ಯಾಪ್ತಿಯನ್ನು ಒಳಗೊಂಡಿದೆ. ಅಧ್ಯಾಯ 2 ರಲ್ಲಿ ಕೈವಲ್ಯ ಸಾಹಿತ್ಯದ ಚಾರಿತ್ರಿಕ ಹಿನ್ನಲೆ ಹಾಗೂ ಅದು ಬೆಳೆದು ಬಂದ ಪರಂಪರೆಯನ್ನು ಸಂಕ್ಷಿಪ್ತವಾಗಿ ಹೇಳಿ ಅದರ ಸ್ವರೂಪ ಲಕ್ಷಣಗಳನ್ನು ಚರ್ಚಿಸಲಾಗಿದೆ. ಅಧ್ಯಾಯ 3 ರಲ್ಲಿ

ಶಿವಯೋಗಿಗಳ ಜೀವನ ಚರಿತ್ರ ಕಾಲ ಸ್ಥಳ ಗುರು ಪರಂಪರೆ ಮತ್ತು ಅವರ ಸಹಪಾಠಿಗಳನ್ನು ಕುರಿತು ಚಿತ್ರಿಸಲಾಗಿದೆ, ಅಧ್ಯಾಯ 4ರಲ್ಲಿ ಆಧ್ಯಾತ್ಮಿಕ, ಸಮಾಜಿಕ ಚಿಂತನೆ, ಮಾನವ ಕಲ್ಯಾಣ, ಸಾಹಿತ್ಯಕಛಂಧೋ ವೈವಿಧ್ಯತೆಯಾಗಿ ವಿಭಾಗಿಸಲಾಗಿದೆ – ಅಲ್ಲಿ

ಆಧ್ಯಾತ್ಮದಲ್ಲಿ – 1) ವಿರಕ್ತಿ 2) ಗುರುಹಂಬಲ 3) ದರ್ಶನ

ಸಮಾಜ ಚಿಂತನೆಯಲ್ಲಿ – 1) ವರ್ಗಭೇದ 2) ವರ್ಣಭೇದ 3) ಲಿಂಗಭೇದ

ಮನು ಕಲ್ಯಾಣದಲ್ಲಿ – 1) ಆತ್ಮಭೋದನೆ 2) ಸಮಾಜಭೋದನೆ 3) ಇತರೆ

ಸಾಹಿತ್ಯಿಕದಲ್ಲಿ – ವಸ್ತು ಮತ್ತು ಛಂದೋವೈವಿದ್ಯತೆಯನ್ನು ಕುರಿತು ಹೇಳಲಾಗಿದೆ.

ಈ ರೀತಿಯಾಗಿ ಉಪಶೀರ್ಷಿಕೆಗಳಲ್ಲಿ ವಿಷಯವನ್ನು ಪ್ರಸ್ತಾಪಿಸಲಾಗಿದೆ.

ಅಧ್ಯಾಯ 5ರಲ್ಲಿ ಕೈವಲ್ಯ ಪದಗಳಲ್ಲಿ ಬರುವ ಪವಾಡಗಳನ್ನು ವಿವರಿಸಲಾಗಿದೆ .ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಶಿವಯೋಗಿಗಳ ಸ್ಥಾನ ಕುರಿತು ಅಧ್ಯಾಯ 6ರಲ್ಲಿವಿವರಿಸಲಾಗಿದೆ ಅಧ್ಯಾಯ 7ರಲ್ಲಿ ಅವರ ಕೈವಲ್ಯ ಪದಗಳಲ್ಲಿಬರುವ ಒಪ್ಪಂದದ ರಸಪಾಕವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ,ಅವರ ಪದಗಳನ್ನು ಕುರಿತಂತೆ ಹಲವು ಬಾರಿ ಓದಿ ಅನುಭಾವಿಗಳ ಜೊತೆ ಚರ್ಚಿಸಿದಾಗಲೂ ಅವರ ಅಂತರಂಗದ ಒಳತೋಟಿಯ ಇನ್ನು ಏನೋ ಇರಬೇಕೆಂದೆನಿಸುತ್ತದೆ,ಅದರೊಂದಿಗೆ ಮುಂದಿನ ತತ್ವಪದ ಕಾರರಲ್ಲಿ ಕೈವಲ್ಯದರ್ಪಣದ ಪ್ರಭಾವ ನಿಚ್ಚಳವಾಗಿರುವುದನ್ನು ಸೂಚಿಸಿದೆ.

****

ಅಧ್ಯಾಯ ೨

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ –ಕೈವಲ್ಯ ಸಾಹಿತ್ಯದ ಚಾರಿತ್ರಕ ಹಿನ್ನಲೆ ಹಾಗೂ ಬೆಳವಣಿಗೆ

ಅಧ್ಯಾಯ – 2

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ – ಕೈವಲ್ಯ ಸಾಹಿತ್ಯದ ಚಾರಿತ್ರಿಕ ಹಿನ್ನಲೆ ಹಾಗೂ ಬೆಳವಣಿಗೆ

ಸಾಹಿತ್ಯದ ಪರಿಕಲ್ಪನೆ ವಿಶಿಷ್ಟವಾದುದಾಗಿದೆ ಇದರ ವ್ಯಾಖ್ಯಾನ ಸರಳವೂ ಹೌದು, ಸೂಕ್ಷ್ಮವೂ ಹೌದು, " ಕವಿವಾಣಿ ಹೂ ಜನವಾಣಿ ಬೇರು" ಎಂಬ ಮಾತಿನಂತೆ ಕನ್ನಡ ಸಾಹಿತ್ಯ ಮುಖ್ಯವಾಗಿ ಜನವಾಣಿ ಮೂಲವಾಗಿ ನಿಂತಿರುತ್ತದೆ. 'ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ", ಈ ಸಾಹಿತ್ಯವನ್ನು ಹಾಡುಗಬ್ಬ, ಓದುಗಬ್ಬ ಎಂದು ವಿಂಗಡಿಸಿದಾಗ 'ಜನಪದ ಮತ್ತು ಮಾರ್ಗವಾಗಿ ಬೆಳೆಯುತ್ತ ಬಂದಿತು. ಪ್ರಾಚೀನ ಕಾಲದಲ್ಲಿ ಗುರುಕುಲದಲ್ಲಿರುವವರಿಗೆ ಮಾತ್ರ ವೇದಾಭ್ಯಾಸದ ಸೌಲಭ್ಯವಿರುವುದರಿಂದ ಅಂಥವರನ್ನು ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಯಾದ ಸಾಹಿತ್ಯ ಎನ್ನಿಸಿಕೊಂಡಿತು. ಶಿಷ್ಟಸಾಹಿತ್ಯ ಅದರಿಂದ ಅದು ಜನಸಾಮಾನ್ಯರಿಗೆ ಕ್ಲಿಷ್ಟವಾಯಿತು ಹಾಗೇ ದೂರ ಸರಿದ ಸಾಹಿತ್ಯವನ್ನು ಮತ್ತೆ ಜನಸಾಮಾನ್ಯರ ಹತ್ತಿರಕ್ಕೆ ತಂದವರು ಜನಪದರು ಮತ್ತು ವಚನಕಾರರು.

ಹೀಗೆ ನೂತನವಾಗಿ ನಿರ್ಮಾಣವಾದ ಶರಣ ಸಾಹಿತ್ಯ ಮನುಕುಲದಲ್ಲಿ ಮತ–ಕುಲ–ವರ್ಣ ಜಾತಿ, ವಯಸ್ಸು, ಅಂತಸ್ತುಗಳಲ್ಲಿ ಮೇಲುಕೀಳನ್ನದೆ ಸರ್ವರು ಸಮಾನರು ಎಂಬ ಧೋರಣೆಯಿಂದ ಬದುಕಿತು.

ಸ್ವಾತಂತ್ರ್ಯ, ಸಮಾನತೆ, ಬಂಧುತ್ವವನ್ನು ಎತ್ತಿಹಿಡಿದು ಮಾನವ ಕಲ್ಯಾಣಕ್ಕಾಗಿ ಹೆದ್ದಾರಿಯನ್ನು ನಿರ್ಮಿಸಿದರು ಆ ಮಾರ್ಗವೇ ಶರಣ ಮಾರ್ಗ, ಶಿವಮಾರ್ಗ ಪ್ರಸಾದ ಮಾರ್ಗವಾಯಿತು.

ಬಸವಾದಿ ಪ್ರಮಥರಿಂದ ಸುದೀರ್ಘವಾಗಿ ಮುಂದುವರೆದ ಈ ಪರಂಪರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯ ಪ್ರಶಿಷ್ಯರಲ್ಲಿ, ಷಣ್ಮುಖ–ಶಿವಯೋಗಿಗಳವರೆಗೂ ಸಾಗಿದೆ. ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದ ಕೈವಲ್ಯಕಾರರ ಮೂಲಕ ಮುಂದುವರೆದು ಹಾಗಲವಾಡಿಯ ಮುದ್ದುವೀರಸ್ವಾಮಿ (1700)ರಲ್ಲಿ ಕೂಡಲೂರೇಶ, (1170–1850), ಕಡಕೊಳದ ಮಡಿವಾಳಪ್ಪ (1780 –1855) ಮೈಲಾರ ಬಸವಲಿಂಗ ಶರಣರು ಬಾಲಲೀಲಾ ಮಹಾಂತ ಶಿವಯೋಗಿಗಳು, ತುಮಕೂರಿನ ನಂಜುಂಡ

ಶಿವಯೋಗಿ, ಕರಿ ವೃಷಬೇಂದ್ರರು, ನಾಕಲಿಂಗಯುತ, ಹೆಳೆವನಕಟ್ಟೆ ಗಿರಿಯಮ್ಮ (18ನೇ ಶಪೂರ್ವ) ಶಿಶುನಾಳ ಶರೀಫರು (1819–1875) ಹೀಗೆ 18 ಹಾಗೂ 19 ನೇಯ ಶತಮಾನದವರೆಗೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೈವಲ್ಯ ಸಾಹಿತ್ಯದ ಬಹುದೊಡ್ಡ ಪರಂಪರೆ ಬೆಳೆಯಿತು ತತ್ವಪದಸಾಹಿತ್ಯ ಅನುಭಾವಿಗಳಲ್ಲಿ ಪಸರಿಸಿ ಹರಿದಾಸರಲ್ಲಿಯೂ ಪ್ರಯೋಗವಾಗಿದೆ. ವ್ಯಾಪಕವಾಗಿ ರಚನೆಗೊಳ್ಳುತ್ತಲೇ ಬಂದಿರುವುದನ್ನು ವಿವರವಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಕನ್ನಡದಲ್ಲಿ ಅನೇಕ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬಂದವು ಅವುಗಳಲ್ಲಿ ಕೈವಲ್ಯ ಸಾಹಿತ್ಯವು ಒಂದು. ಇದಕ್ಕೆ ಇನ್ನೊಂದು ಹೆಸರು ತತ್ವಪದ ಸಾಹಿತ್ಯ, ಈ ಸಾಹಿತ್ಯ ಅನುಭಾವಗೀತೆ, ಸ್ವರವಚನ, ಹೆಸರುಗಳಿಂದ ವಿಪುಲವಾಗಿ ಬೆಳೆಯುತ್ತಾ ಬಂದಿದೆ. ತತ್ವ ಪದಗಳು ಅಂತರಂಗದ ಅರಿವಿನ ಮೂಲಭೂತ ತತ್ವವನ್ನು ಪ್ರತಿಪಾದಿಸುವುದರಿಂದ ಇವು ತತ್ವಪದಗಳೂ ಹೌದು, ಅನುಭಾವ ಗೀತೆಗಳೂ ಹೌದು, ಜೀವ–ಶಿವ–ಹಾಗೂ ಈ ಜಗತ್ತನ್ನು ಕುರಿತ ಭಕ್ತಿ–ಜ್ಞಾನ–ವೈರಾಗ್ಯದ ವಿಷಯಗಳ ವಿವೇಚನೆಯೇ ಕೈವಲ್ಯ ಸಾಹಿತ್ಯ, ಕೈವಲ್ಯ ಅಥವಾ ಮುಕ್ತ ಚಿಂತನೆ ಇದರಲ್ಲಿ ಪ್ರಧಾನ.

ಕೈವಲ್ಯ ಶಬ್ದಕ್ಕೆ ಮೋಕ್ಷ, ಕೈವಲ್ಯ, ನಿರ್ವಾಣ ಎನ್ನುವ ಪರ್ಯಾಯ ಪದಗಳಿವೆ. ಶಿವ ಜೀವರ ಅವಿನಾಭಾವ ಸಂಬಂಧದಿಂದ ಮೂಡಿದ ಅನುಭಾವವನ್ನು 'ಕೈವಲ್ಯ' ವೆಂದು ಕರೆಯುತ್ತಾರೆ. ಈ ಅನುಭಾವಕ್ಕೆ ಕಾರಣವಾದ ಸಾಹಿತ್ಯವನ್ನು ಕೈವಲ್ಯ ಸಾಹಿತ್ಯವೆಂದು ಕರೆದಿದ್ದಾರೆ.

ಕ್ರಿ.ಶ. 15ನೇ ಶತಮಾನದಲ್ಲಿ ನಿಜಗುಣ ಶಿವಯೋಗಿಗಳು ಕೈವಲ್ಯ ಸಾಹಿತ್ಯದ ಆದ್ಯಪ್ರವರ್ತಕರಾದರು ಅವರ ಗ್ರಂಥದಲ್ಲಿ 'ಶಂಭುಲಿಂಗ' ಎಂಬ ಅಂಕಿತವಿದೆ. ಮೈಸೂರು ದಕ್ಷಿಣ ಕೊಳ್ಳೆಗಾಲ ತಾಲ್ಲೂಕಿನ ಶಂಭುಲಿಂಗನ ಬೆಟ್ಟದಲ್ಲಿ ಶಂಭುಲಿಂಗೇಶ್ವರ ಗುಡಿಯೂ ನಿಜಗುಣ ಶಿವಯೋಗಿ ತಪಸ್ಸು ಮಾಡಿದ ಗವಿಯೂ ಇಂದಿಗೂ ಇರುತ್ತದೆ. ಮೊದಲು ಅರಸನಾಗಿದ್ದು ಆ ಮೇಲೆ ವಿರಕ್ತನಾದನೆಂದು ಹೇಳುತ್ತಾರೆ., ಕೈವಲ್ಯ ಪದ್ದತಿ ,

ಪರಮಾನುಭಬೋಧೆ, ಪರಮಾರ್ಥಗೀತೆ, ಅನುಭವಸಾರ , ಅರವತ್ತು ಮೂವರ ತ್ರಿಪದಿ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ ಎಂಬ ಏಳು ಗ್ರಂಥಗಳಲ್ಲಿ 'ಕೈವಲ್ಯ ಪದ್ದತಿಯಲ್ಲಿ' ತತ್ತ್ವೋಪದೇಶ ಪರವಾದ ಮತ್ತು ಶಿವಸ್ತುತಿಯುಳ್ಳ ಹಾಡುಗಳಿವೆ, ಅವುಗಳಲ್ಲಿ ಕಲ್ಪನಾವಿಲಾಸವಿಲ್ಲ, ತಿಳಿಗನ್ನಡದಲ್ಲಿ ಸ್ಪೂರ್ತಿದಾಯಕವಾದ ಬೋಧನೆಯಿದೆ, ಗುರುಭಕ್ತಿ ತುಂಬಿ ತುಳುಕುತ್ತದೆ.

'ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದುನರರಿಗೆ ಮುಕ್ತಿ'

ಶ್ರೀ ಗುರುನೀನೆ ಶರಣಾಗೆನಗೆ ನಿಜ ಸುಖದ ಸಾಗರನೆ ಸಕಲವಿದ್ಯಾ ಗುಣನಿವಾಸ",

"ಗುರುವೇ ನಿಮ್ಮಯ ಕರುಣದೊಳೆನ್ನೆ

ತತ್ತ್ವದಿರವನರಿದು ನಿತ್ಯ ಸುಖಿಯಾದೆ' [1]

ಎಂಬ ಹಾಡುಗಳಲ್ಲಿ ನಿಜಗುಣ ಶಿವಯೋಗಿಗಳ ಭಾವಪೂರ್ಣತೆಯನ್ನು ತಿಳಿಯುತ್ತೇವೆ. ಉಳಿದ ಗ್ರಂಥಗಳಲ್ಲಿ ಸಾಂಗತ್ಯ, ರಗಳೆ, ಛಂದಸ್ಸುಗಳು, ತ್ರಿಪದಿ,ಹಾಗೂ ಶಾಸ್ತ್ರಗದ್ಯಗಳೂ ಕೂಡಾ ಮೂಡಿಬಂದಿವೆ.

'ಕೈವಲ್ಯ ಪದ್ದತಿ' ಯನ್ನು ಸಕಲ ವೇದ ವೇದಾಂತಾಗಮ ಸ್ಮತಿ ಪುರಾಣೇತಿಹಾಸ ಸೂತ್ರಾದಿ ಶಾಸ್ತ್ರಸಂಮತದಿಂ ಪುರಾತನ ಗೀತಾನುಗಣ್ಯವೆನಿಸಿ ಬರೆದುದಾಗಿ ಅವನು ಹೇಳಿದ್ದಾನೆ.

ಒಟ್ಟಾರೆ ಆಧ್ಯಾತ್ಮದ ತತ್ವಗಳನ್ನು ಜನಸಾಮಾನ್ಯರಿಗಾಗಿ ಗೀತೆಗಳ ಮೂಲಕ ಸರಳ ಹಾಗೂ ಸುಲಭರೂಪದಲ್ಲಿ ಭೋದಿಸಿದ್ದಾರೆ. ನಿಜಗುಣ ಶಿವಯೋಗಿಗಳು ತತ್ವಪದಕಾರರಲ್ಲಿ ಪ್ರಮುಥರಾಗಿ ಕನ್ನಡ ಸಾಹಿತ್ಯದಲ್ಲಿ ಕೈವಲ್ಯ ಸಾಹಿತ್ಯ ಹಿರಿಮೆಯನ್ನು ಬೆಳಗಿಸಿದ್ದಾರೆ. ಹಾಡಿನ ಪರಂಪರೆ ನಿಜಗುಣ ಶಿವಯೋಗಿಗಳ ಹಾದಿಯಲ್ಲೇ ಕಾಲತಿಳಿಸಿ ಸಾಗಿ ಮತ್ತೊರ್ವ ಸಮಕಾಲೀನನು ಆದ 15ನೇ ಶತಮಾನದ ಮುಪ್ಪಿನ ಷಡಕ್ಷರಿಗಳು 'ಸುಭೋಧಸಾರ' ಎಂಬ ಗ್ರಂಥವನ್ನು ಬರೆದರು. ಅದೇ ಶಂಬುಲಿಂಗನ ಬೆಟ್ಟದಲ್ಲಿ ತಪಸ್ಸು ಮಾಡಿದರು,

ನಿಜಗುಣ ಯೋಗಿಯಲ್ಲಿ ಜ್ಞಾನಪ್ರಧಾನವಾದ ಭಾವಶಾಂತಿಯಿದ್ದರೆ ಮುಪ್ಪಿನ ಷಡಕ್ಷರಿಯಲ್ಲಿ ಭಕ್ತಿಪ್ರಧಾನವಾದ ಭಾವಕ್ಷೋಭವಿದೆ.

ಸಕಲಕೆಲ್ಲಕೆ ನೀನು

ಅಕಲಂಕ ಗುರುವೆಂದು

ನಿಖಿಲ ಶಾಸ್ತ್ರವು ಪೇಳುತಿರಲರಿದೆನು ॥

ಅವರವರ ದರುಶನಕೆ ।

ಅವರವರ ವೇಷದಲ್ಲಿ ।

ಅವರವರಿಗೆಲ್ಲ ಗುರು ನೀನೊಬ್ಬನೆ ॥

ಅವರವರ ಭಾವಕ್ಕೆ।

ಅವರವರ ಪೂಜೆಗಂ।

ಅವರವರಿಗೆಲ್ಲ ದೇವನಿನೊಬ್ಬನೇ॥ [1]

ಎಂಬ ನುಡಿ ಇದಕ್ಕೆ ಸಾಕ್ಷಿಯಾಗಿದೆ.

ಅವರ ಹಾಡುಗಳಲ್ಲಿ ಹಾಡಿನ ಧಾಟಿಯಲ್ಲಿದ್ದರೂ ಷಟ್ಪದಿಯ ಎಲ್ಲಾ ಪ್ರಕಾರದ ಪದ್ಯರೂಪಗಳು ಕಂಡು ಬರುತ್ತವೆ. ಅನೇಕ ಪದಗಳು ಕುಸುಮ ಮತ್ತು ಭೋಗ ಷಟ್ಪದಿಯಲ್ಲಿವೆ. ಅವರ ಪದಗಳಲ್ಲಿ ಸಮರ್ಪಣಭಾವ ಸತ್ಯಧರ್ಮದರಿವು ಅನುಭಾವದೆತ್ತರ, ಇವು ತಿಳಿತಿಳಿಯಾದ ಮಾತುಗಳಲ್ಲಿ ಮೂಡಿರುತ್ತವೆ. ಕೈವಲ್ಯ ಸಾಹಿತ್ಯದಲ್ಲಿ ಮುಪ್ಪಿನ ಷಡಕ್ಷರಿಗಳ ಸ್ಥಾನವು ಮಹತ್ವದ್ದಾಗಿದೆ.

ಇವರ ತರುವಾಯ ಸರ್ವಭೂಷಣ ಶಿವಯೋಗಿಗಳು (1795–1839) ತಮ್ಮ ತತ್ವಪದಗಳ ಸಂಕಲನ ಕೃತಿಗೆ 'ಕೈವಲ್ಯಕಲ್ಪವಲ್ಲರಿ' ಎಂದು ಕರೆದಿದ್ದಾರೆ. 'ಗುರುಸಿದ್ದ' ಎಂಬ ಅಂಕಿತದಲ್ಲಿ ಹಾಡುಗಳು ಸಂಕಲಿತವಾಗಿವೆ. [(1)]

'ದಯಪಾಲಿಸೆಲೊದೇವ ನೀನೆ

ನಿಶ್ಚಲ ಪದವಿನಿನ್ನಾವ ವರವ ನಾನೊಲ್ಲೆನು'

'ಸಿರಿಯನೆ ಕರುಣಿಸು ನಿನ್ನಯ' ಈ ಪದಗಳನ್ನು ವಿಶೇಷವಾಗಿ ನೆನೆಯಬೇಕು ಈ ತಾತ್ವಿಕ ಮತ್ತು ಭಕ್ತಿಗೀತೆಗಳ ಪರಂಪರೆಯನ್ನು ಮುಂದೆ ಘನ ಮಠದಾರ್ಯರ (1826–1880) ಪದಗಳಲ್ಲಿ ಕಂಡು ಬರುತ್ತವೆ. ನಂತರ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು (1823–59) 'ಕೈವಲ್ಯ ದರ್ಪಣ' ಎಂಬ ಗ್ರಂಥವನ್ನು ಬರೆಯುತ್ತಾರೆ.

ಯೋಗಿಯ ಕಂಡಿರೇನೆ ಪರಶಿವ ಮಹಾ।
ಯೋಗಿಯ ಕಂಡಿರೇನೆ ।
ಆಗಮ ನಿಗಮಾಗೋಚರ ಶಿಶುವಾಗಿ ।
ತೂಗಾಡುತಿಹನು ಭಕ್ತರ ಮನೋಭಾವದೊಳ್॥
'ಜೋಕೆ ಕಂಡ್ಯಾ। ಆತ್ಮಾ ಜೋಕೆ ಕಂಡ್ಯಾ॥
ಕಾಕು ಸ್ತ್ರೀಯರ ಬಳಗವನೇಕ ಬರುತಿಹುದಿಲ್ಲಿ। (2)

ಇಂತಹ ಪದಗಳಲ್ಲಿ ಆಧ್ಯಾತ್ಮ, ಸಾಮಾಜಿಕ, ಮಾನವಿಕ, ಸಾಹಿತ್ಯಕ, ಸಂಗೀತ ಛಂದಸ್ಸು, ಶೈಲಿ ಕಂಡು ಬರುತ್ತದೆ. ಇಂತಹ ಪದಗಳ ಮೂಲಕ ಜನಸಾಮಾನ್ಯರಿಗೆ ಜ್ಞಾನದ ಸುಧೆಯನ್ನು ಉಣಬಡಿಸಿದರು ಅದನ್ನೆ ಶಿಶುನಾಳ ಶರೀಫ ರಂತವರು ಮೊನ್ನೆಯವರೆಗೂ ನಡೆಸಿಕೊಂಡು ಬಂದಿದ್ದಾರೆ. ಇಂತವರು ಕನ್ನಡ ಸಾಹಿತ್ಯದಲ್ಲಿ ಕೈವಲ್ಯ ಸಾಹಿತ್ಯದ ಹಿರಿಮೆ–ಗರಿಮೆಯನ್ನು ಬೆಳಗಿಸುವುದರಲ್ಲಿ ಶಿಖರ ಪ್ರಾಯರಾಗಿದ್ದಾರೆ.

ಅಡಿ ಟಿಪ್ಪಣಿಗಳು :

1 ರಂ. ಶ್ರೀ.ಮುಗಳಿ–ಕನ್ನಡ ಸಾಹಿತ್ಯ ಚರಿತ್ರೆ ಪುಟ, 341, 1990.

2 ಪ್ರೊ.ಶಿ.ಶಿ ಬಸವನಾಳ ಕೈವಲ್ಯದರ್ಪಣ ಪದ 62, 12, ಪುಟ 78, 1952.

****

ಅಧ್ಯಾಯ ೩

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಬದುಕು.

ಅಧ್ಯಾಯ –3

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಬದುಕು

ಭಾರತ ದೇಶವು ಅನಾದಿಕಾಲದಿಂದಲೂ ತಪಸ್ವಿಗಳಿಗೆ ಸಂತರಿಗೆ, ಶರಣರಿಗೆ, ಸಾಧನೆ ಸಿದ್ಧಿಗೈದವರಿಗೆ ಜನ್ಮ ನೀಡಿದೆ, ಭಾರತ ಭೂಮಿಯಲ್ಲಿಯೇ ಕರ್ನಾಟಕದ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಮಠಮಂದಿರಗಳಲ್ಲಿ ಶರಣರು ಮಹಾತ್ಮರೂ ಶಿವ ಯೋಗಿಗಳು ಹುಟ್ಟಿ ತಮ್ಮ ಸಾಧನೆಯ ಮೂಲಕ ತಮ್ಮ ಸುತ್ತಲಿನ ಸಾಮಾನ್ಯರ ಜೀವನ ಉದ್ಧಾರವನ್ನು ಮಾಡಿರುವುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ.

ಸಕಲ ಜೀವರಾಶಿಗಳಿಗೆ ಒಳಿತನ್ನೆ ಬಯಸಿ ಉದಾತ್ತ ಜೀವನವನ್ನು ಹೊಂದಿದ ಬಸವಪೂರ್ವಯುಗದಿಂದ ಇಂದಿನವರೆಗೂ ಅನೇಕ ಶಿವಶರಣರು ಜನಿಸಿ ಸರ್ವಧರ್ಮ ಸಮನ್ವಯ ಮಾಡಿ ಭಾರತೀಯ ಉಚ್ಚ ಸಂಸ್ಕ್ರತಿಯನ್ನು ಮೆರೆದಿದ್ದಾರೆ.

ಸರ್ವೆ ಜನಾಃ ಸುಖಿನೋಭವಂತು ಎಂಬ ವಾಣಿಯು ನಮ್ಮದೇಶದ ಸಂಸ್ಕೃತಿಯನ್ನು ತೋರಿಸುತ್ತದೆ. ಇಂತಹ ಆಧ್ಯಾತ್ಮದ ಹಿನ್ನೆಲೆಯಲ್ಲಿ ಬೆಳೆದು ಬಂದ ಗದಗ ಜಿಲ್ಲೆಯ ಮುಳಗುಂದ ಗ್ರಾಮದ ಗವಿಮಠದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಒಬ್ಬ ಶರಣರು,

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ 19 ನೇ ಶತಮಾನದ ಪೂರ್ವಾರ್ಧವು ಸಾಹಿತ್ಯದ ಬರುಡುಕಾಲ. ಅಂತಹ ಬರಡುಕಾಲದಲ್ಲಿಯೇ ಬೆಳಗಿದವರು ಶಿವಯೋಗಿಗಳು. ಇವರ ಬದುಕು ಉನ್ನತ ಮಟ್ಟದಲ್ಲಿ ಮೆರೆದಿದೆ. ಆ ಕಾಲದ ಸಾಹಿತ್ಯ ಸಮೃದ್ಧಿಯನ್ನು ತಮ್ಮ ಅನುಭಾವದ ನುಡಿಯಿಂದ ಸಾಹಿತ್ಯವನ್ನು ಬೆಳೆಸಿದ್ದಾರೆ. ಅಂತಹ ಶಿವಯೋಗಿಗಳ ಬದುಕನ್ನು ಕುರಿತು ಸ್ಥೂಲವಾಗಿ ಚರ್ಚಿಸೋಣ.

ಗದಗ ಜಿಲ್ಲೆಯ ಮುಳಗುಂದ ಶಿವಯೋಗಿಗಳ ಕಾರ್ಯಕ್ಷೇತ್ರ ಗದಗದಿಂದ 18 ಕಿ.ಮೀಗಳ ದೂರದಲ್ಲಿ ಲಕ್ಷ್ಮೇಶ್ವರದಿಂದ ಸುಮಾರು 20 ಕಿ.ಮೀ ಅಂತರದಲ್ಲಿರುವ ಐತಿಹಾಸಿಕ ಸ್ಥಳ. ಪ್ರಾಚೀನ ಕಾಲದಿಂದಲೂ ಶಾಸನಗಳಲ್ಲಿ ಉಲ್ಲೇಖಗೊಂಡ ಪ್ರಸಿದ್ಧಿ ಇದ್ದಕ್ಕಿದೆ.

"ಮುನಿಪುರ" ಮೃದುಪುರ–ಮುಳ್ಳುಗುಂದ–ಮುಳಗುಂದ ಎಂಬ ವಿಶೇಷತೆಯನ್ನು ತಳೆದು ತನ್ನೆಲ್ಲಗತಕಾಲದ ವೈಭವವನ್ನು ಮರೆತ ಒಂದು ಸಾಮಾನ್ಯ ಊರು ಇವತ್ತಿನ ಮುಳಗುಂದ ಎಂದು ಹೇಳಬಹುದು. ಒಂದು ಕಾಲದಲ್ಲಿ ಲಕ್ಷ್ಮೇಶ್ವರ, ಮುಳಗುಂದ, ಲಕ್ಕುಂಡಿ, ಕೊಪ್ಪಳ, ಅಣ್ಣೀಗೆರಿ, ಇವು ಜೈನರ ಪುಣ್ಯ ಕ್ಷೇತ್ರಗಳಾಗಿದ್ದವು, ಇಲ್ಲಿ ಮುಳಗುಂದದಿಂದ ಪಶ್ಚಿಮ ದಿಕ್ಕಿಗೆ ಚಿಂಚಲಿ ಎಂಬ ಗ್ರಾಮವಿದೆ. ಅದರ ಪಕ್ಕದಲ್ಲಿರುವ ಗುಡ್ಡದಲ್ಲಿ "ಛಾಯಾಚಂದ್ರನಾಥ" ಎಂಬ ಬಸದಿ ಇದೆ. ಊರಿನಲ್ಲಿ 12 ನೇ ಶತಮಾನದ ಆದಿಯಲ್ಲಿ ನಯಸೇನನೆಂಬ ಕವಿ ಮುಳಗುಂದದವನು. ಆತ 'ಧರ್ಮಾಮತ' ವೆಂಬ ಜೈನ ಚಂಪು ಸಾಹಿತ್ಯವನ್ನು ರಚಿಸಿದನು. ಅಂತೆಯೇ ಪ್ರೌಢಕವಿಗಳ ಕೃತಿಗಳಲ್ಲಿಯ "ಮಿಸುಕದ ಸಕ್ಕದ"ದ ವಿರುದ್ಧ ಬಂಡೆಬ್ಬಿಸಿ ಪೊಸಗನ್ನಡದ ಕಹಳೆ ಊದಿದವನು ನಯಸೇನ. ನಂತರ ಇದೇ ಪರಂಪರೆಯಲ್ಲಿ ಮುಂದುವರೆದು. ಕುವೆಂಪುರವರು ಶ್ರೀ ರಾಮಾಯಣದರ್ಶನಂದಲ್ಲಿ ಹೇಳಿದಂತೆ............

" ಜನಮನದ ಬಯಕೇ ಮೇಣವರೆಭೀಪ್ಸೆ ಮಹಾತ್ಮರಂ ಎಮ್ಮಳೆಗೆ ಎಳೆತರ್ಪುದುಕಣಾ" ಎನ್ನುವ ಕವಿಯುಕ್ತಿಯೆಂತೆ – ಕಾಲದ ಕೂಗು, ಜನಾಂಗದ ಅಂತರಂಗದ ಮಿಡಿತನೊಂದವರ ನಿಟ್ಟುಸಿರು ಮಹಾಪುರುಷರ ಬರುವಿಕೆಯನ್ನು ಸೂಚಿಸುತ್ತದೆ. ಸಾಮಾಜಿಕ ಸ್ಥಿತಿಗತಿಗಳು ಸರಿಪಡಿಸಲಾರದ ವೈಪರಿತ್ಯಗಳಿಗಡೆಯಾದಾಗ ಒಂದು ಮಹಾನ್ ಚೇತನ ಹುಟ್ಟಿ ಸಮಾಜದ ಸರ್ವ ಮೌಲ್ಯಗಳಿಗೆ ಹೆಗಲು ಕೊಟ್ಟು ಸುಧಾರಣೆಯ ಸಮಸ್ತ ಹೊಣೆಯನ್ನು ಹೊತ್ತು ನಿಲ್ಲುತ್ತದೆ ಅಂತಹ ಹೊಣೆಯನ್ನು ಹೊತ್ತುಕೊಂಡ ಮಹಾಮಹಿಮರೇ ಶರಣರು – ಶಿವಯೋಗಿಗಳೆಂದು ಹೇಳಬಹುದು. ಈ ಶಿವಯೋಗಿಗಳ ಮಾಲಿಕೆಯಲ್ಲಿ ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಒಬ್ಬರು.

ಶಿವಯೋಗಿಗಳ ಬದುಕನ್ನು ಪರಿಪೂರ್ಣವಾಗ ಅರಿತುಕೊಳ್ಳ ಬೇಕಾದರೆ ಅವರ ಬಹಿರಂಗ ಮತ್ತು ಅಂತರಂಗದ ಅಭ್ಯಾಸ ಪ್ರಮುಖವಾಗಿದೆ. ಬಹಿರಂಗದ ಅಭ್ಯಾಸ ಎಂದರೆ ದೇಶ, ಕಾಲ, ಜನನ, ವಿದ್ಯಾಭ್ಯಾಸ, ಗುರುಪರಂಪರೆ ಮೊದಲಾದ ವಿಷಯಗಳು ಬರುತ್ತವೆ. ಶರಣರ ಆಂತರಿಕ ಜೀವನದ ಅಭ್ಯಾಸ ಎಂದರೆ ಅವರ ಚಾರಿತ್ರ್ಯಕ್ಕೆ ಸಂಬಂಧಿಸಿರುತ್ತದೆ.

ಎಷ್ಟೂ ಸಲ ಅವರ ಜೀವಿತ ಕಾಲದಲ್ಲಿಯೇ ಮಾನಸಿಕ ಒಳತೋಟಿಯನ್ನು ಗುರುತಿಸಲು ಅವರ ಸುತ್ತಲಿದ್ದವರಿಗೆ ಸಾಧ್ಯವಾಗದೆ ಹೋಗುತ್ತದೆ.

ಇನ್ನೂ ಪುರಾಣಕಾರರು ಭಾವನಾತ್ಮಕ ದೃಷ್ಟಿಯಿಂದ ಪವಾಡಗಳನ್ನು ರಚಿಸಿ ಚಾರಿತ್ರಿಕ ಪುರುಷನನ್ನು ಅಲೌಕಿಕ ಸ್ಥರಕ್ಕೆ ಏರಿಸುತ್ತಾರೆ.

ಶಿವಯೋಗಿಗಳ ಸ್ವಂತ ಕೃತಿ 'ಕೈವಲ್ಯದರ್ಪಣ' ದಿಂದ ಅವರ ಆಂತರಿಕ ಬದುಕಿಗೆ ಬೆಳಕು ಚೆಲ್ಲ ಬಹುದಾದರು. ಅವರ ಸ್ವಂತವಾದ ವಿವರಗಳು ಕೈವಲ್ಯದರ್ಪಣದಲ್ಲಿ ಉಲ್ಲೇಖಿಸಿಲ್ಲ. ಅವರ ಕಾಲ, ದೇಶವನ್ನು ಸ್ಥೂಲವಾಗಿ ಅವರ ಕೃತಿಯಿಂದ ಗುರುತಿಸಬಹುದು. ಅವರ ಕೃತಿಯ ಹೆಸರೇ ಸೂಚಿಸುವಂತೆ ಅದು ಅವರ ಆಧ್ಯಾತ್ಮಿಕ ಬದುಕಿಗೆ ಕನ್ನಡಿಯಾಗಿದೆ.

ವೀರಶೈವ ಪರಂಪರೆಯಲ್ಲಿ ಶರಣರ ಜೀವನ ಚರಿತ್ರೆಗಳು ಗುರುದೀಕ್ಷೆಕೊಟ್ಟ ನಂತರದ ಚರಿತ್ರೆಯನ್ನು ಹೇಳುವುದು ಪರಂಪರೆಯಾಗಿರುತ್ತದೆ. ಅವರ ಪೂರ್ವದ ತಂದೆ-ತಾಯಿಗಳ, ಬಗೆಗೆ ಜನ್ಮಸ್ಥಳದ ಬಗೆಗೆ ಹೇಳುವುದೇ ಇಲ್ಲ.

ಲೀಲಾ ಮಾತ್ರವಾಗಿ ಜನಿಸಿ

ಲೀಲಾ ಮಾತ್ರವಾಗಿ ಬೆಳೆದು

ಲೀಲಾ ಮಾತ್ರವಾಗಿ ಮಹಂತಯೋಗಿ ಮೆರೆವನು । **109**

ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ ಕೈವಲ್ಯದರ್ಪಣದಲ್ಲಿ ಸ್ಪಷ್ಟವಾಗಿ ಹಾಡಿಕೊಂಡಿದ್ದಾರೆ. ಇದೇ ಮಾತನ್ನು ಪುರಾಣಕಾರರು ಪುಷ್ಟಿಗೊಳಿಸಿದ್ದಾರೆ. ಲೋಕ ವಿಲಕ್ಷಣರಾಗಿ ಬಾಳಿದ ಮಹಾಪುರುಷರು ಇಡೀ ಮಾನವ ಉದ್ಧಾರಕ್ಕಾಗಿ ಪಾರಮಾರ್ಥಿಕ ಪುಣ್ಯ ಪ್ರಸಾದವನ್ನು ಕರುಣಿಸಿದ ಮಹಾನುಭಾವರು ಶಿವಯೋಗಿ ಶ್ರೇಷ್ಠರ ಮಹಾಪರಂಪರೆಯಲ್ಲಿ ಅಚ್ಚಳಿಯದ ಪ್ರಭಾವವನ್ನು ಮೆರೆದವರು ಲೀಲಾ ಮಾತ್ರದಿಂದ ಜನಿಸಿದ ಕಾರಣಿಕ "ಶಿಶು" ಎಂದು ತಾವೇ ಹೇಳಿಕೊಂಡಿರುವದರಿಂದಲೂ ಹಾಗೂ ಅವರ ಕೃತಿಗಳಲ್ಲಿ ಎಲ್ಲಿಯೂ ವೈಯಕ್ತಿಕ ವಿವರಣೆಗಳ ಸ್ಪಷ್ಟ ಉಲ್ಲೇಖಗಳಿಲ್ಲದೆ ಇರುವುದರಿಂದಲೂ ನಿರ್ದಿಷ್ಟ ನಿಲುಮೆಗೆ ಬರುವುದು ಸರಳ ಸಾಧ್ಯವಾದ ಮಾತಲ್ಲ.

ಅವರ ಚರಿತ್ರೆಗೆ ಸಂಬಂಧಿಸಿದ ಆಕರ ಸಾಮಗ್ರಿಗಳೆಂದರೆ ಶ್ರೀಗಳೇ ರಚಿಸಿದ "ಕೈವಲ್ಯದ ದರ್ಪಣ", "ಬಾಲಲೀಲಾ ಮಹಾಂತ ಶಿವಯೋಗಿಗಳ ಪುರಾಣ" ಜನಪದರ ನಾಲಗೆಯಲ್ಲಿರುವ ದಂತಕಥೆಗಳು, ಪವಾಡಗಳು, ಇತ್ಯಾದಿ. ಇವುಗಳ ಆಧಾರದಿಂದ ಶ್ರೀಗಳು ಜೀವನೀತಿಹಾಸವನ್ನು ಗುರುತಿಸಬಹುದು.

3.1) ಕಾಲ:–

ಕರ್ನಾಟಕ ಕವಿಚರಿತೆಕಾರರು ಬಾಲಲೀಲಾ ಮಹಾಂತ ಶಿವಯೋಗಿಗಳ ಕಾಲ ವಿಚಾರ ಕುರಿತು ಹೀಗೆ ಹೇಳುತ್ತಾರೆ.

1) ಇವನು ಮೈಸೂರಿಗೆ ಹೋಗಿ "ಮುಮ್ಮಡಿ ಕೃಷ್ಣರಾಜನಿಂದ (1799–1868) ಸನ್ಮಾನಿತನಾಗಿ ಅವನಿಗೆ ಬುದ್ಧಿವಾದವನ್ನು ಹೇಳಿದಂತೆ ಈ ಗ್ರಂಥದಿಂದ ತಿಳಿಯುವದರಿಂದ ಕವಿಯ ಕಾಲವು ಸುಮಾರು 1820 ಆಗಬಹುದು ಎಂದಿದ್ದಾರೆ.

2) ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲವು 1794 ರಿಂದ 1868 ಎಂದಿದೆ ಇದರಲ್ಲಿ 1810 ರಿಂದ 1830 ಸ್ವತಃ ರಾಜ್ಯಭಾರ ಮಾಡಿದ ಉಲ್ಲೇಖವಿದೆ. ಆದ್ದರಿಂದ ಅವರ ಜೀವಿತದ ಕೊನೆಯ ಭಾಗದಲ್ಲಿ ಶ್ರೀಗಳ ಆಶೀರ್ವಾದವನ್ನು ಪಡೆದಿರಬೇಕು. ಇದರಿಂದ ಮಹಾರಾಜರ ಸಮಕಾಲೀನರಾಗಿರಬೇಕೆಂಬುದು ಸ್ಪಷ್ಟವಾಗುತ್ತದೆ.[5]

3) ಬಿಜಾಪೂರ ಜಿಲ್ಲೆ, ಮಸೂತಿ ಗ್ರಾಮದಲ್ಲಿ ಸು.ಕ್ರಿ.ಶ 1826 ರಲ್ಲಿ ಅವರು ಜನಿಸಿದರು ಎಂದಿದ್ದಾರೆ. ಬಾಲಲೀಲಾ ಮಹಾಂತ ಶಿವಯೋಗಿಗಳು 1823–1859 ರಲ್ಲಿ ಜೀವಿಸಿದ್ದರೆಂದು.

4. 'ಕೈವಲ್ಯದರ್ಪಣ' ಸಂಗ್ರಹ ಮಾಡಿ ಪ್ರಸ್ತಾವನೆ ಬರೆಯುತ್ತಾ ಬಂದು ದಿನ ಶಾ.ಶಕ 1745 (1823) ನೆಯ ಶುಭನಾಮ ಸಂವತ್ಸರ ಶ್ರಾವಣ ಮಾಸ ಕಡೆಯ ಸೋಮವಾರ ವಾರದ ರಾತ್ರಿ ಮೂರು ಘಂಟೆಯ ಸಮಯಕ್ಕೆ ಮುಳುಗುಂದದ ಮಹಾಂತಲಿಂಗ ದೇಶಿಕವರೇಣ್ಯರು ಆಲಮಟ್ಟಿಯ ಹಿರೇಮಠಕ್ಕೆ ಬಂದು ಆಶೀರ್ವದಿಸಿದ್ದು ಎಂದಿದೆ![1]

ಆಶೀರ್ವಾದವು ಜನನ ಆದ ಮೇಲೆ ಲಿಂಗದೀಕ್ಷಾ ಸಂಸ್ಕಾರವೆಂದಿಟ್ಟು ಕೊಂಡರೆ ಅದೇ ಶ್ರೀಗಳ ಜನನ ಕಾಲವೆಂದು ಗುರುತಿಸಬಹುದು.

ಬಳ್ಳಾರಿ ಜಿಲ್ಲೆಯ ಲಿಂಗನಾಯಕನ ಹಳ್ಳಿಯ ಗುರುಕುಲದಲ್ಲಿ ಮೈಲಾರ ಬಸವಲಿಂಗರು ಸಹಪಾಠಿಗಳೆಂದು ಹೇಳಿಕೊಂಡಿರುವುದರಿಂದ ಶ್ರೀಗಳು ಅವರ ಸಮಕಾಲೀನವರೆಂಬುದು ಸ್ಪಷ್ಟವಾಗುತ್ತದೆ.

ಚರವರ ಮಹಾಂತೇಶ್ವರಂತಾನು ಪೇಳ್ದಂತೆ।

ಮರುದಿನಂ ಮುಂಜಾವಿನೊಳು ಶಿವಾರ್ಚನೆಗೈದು।

ನೆರೆದ ಪೆದಿನೇಳ್ನೂರ ಮೇಲಣೆಂಭತ್ತೊಂದು ಶಾಲಿವಾಹನ ಶಕಕ್ಕೆ

ಸರಿಯಾದ ಸಿದ್ಧಾರ್ಥ ನಾಮ ಸಂವತ್ಸರದೆ।

ವರಮಾಘ ಶುಕ್ಲಪಕ್ಷೇ ತ್ರಯೋದಶಿಯ ಹಿಮ।

ಕರವಾರದೊಳು ಜಯನಮ ಪಾರ್ವತಿಪತೇ ಎಂದು ಶಿವನೊಳೆರೆದನು॥

1781 ಶಾಲಿವಾಹನ ಶಕೆ ಸಿದ್ಧಾರ್ಥಿನಾಮ ಸಂವತ್ಸರ ವರಮಾಘ ಶುಕ್ಲಪಕ್ಷ ತ್ರಯೋದಶಿಯ ಸೋಮವಾರ ಶಿವನೊಳ್ಬೆರೆದನು ಎಂದು ಪುರಾಣದಲ್ಲಿರುವದರಿಂದ ಕ್ರಿ.ಶ. 1859 ಎಂದಾಗುತ್ತದೆ. ಅದಕ್ಕೆ 36 ವರ್ಷ ಹಿಂದಕ್ಕೆ ನಡೆದರೆ 1823 ಎಂದಾಗುತ್ತದೆ. ಇದು ಶ್ರೀಗಳ ಕಾಲವೆಂದು ಹೇಳಬಹುದು. "ಕೈವಲ್ಯದರ್ಪಣ" ಸಂಗ್ರಹಕಾರರಾದ ಪ್ರೋ.ಶಿ.ಶಿ. ಬಸವನಾಳರ ಪ್ರಕಾರ 35 ವರ್ಷವು ಪುರಾಣಿಕರ ಪ್ರಕಾರ 36 ವರ್ಷವು ಬದುಕಿದ ಶಿವಯೋಗಿಗಳು ಕ್ರಿ.ಶ 1822 ಅಥವಾ 1823 ರಲ್ಲಿ ಜನಿಸಿರಬೇಕು. ಮೈಸೂರು ಅರಸರ ಸಂಪರ್ಕ ಮತ್ತು ಮೈಲಾರದ ಶಿವಶರಣರ ಒಡನಾಟದಲ್ಲಿರುವ ಶ್ರೀಗಳು 19ನೇ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದುದು ಸ್ಪಷ್ಟವಾಗುತ್ತದೆ.

3.2) ಜನ್ಮಸ್ಥಳ

"ಮುಳಗುಂದ" ದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳೆಂದೇ ಚಿರಪರಿಚಿತರಾದ ಇವರ ಜನ್ಮಸ್ಥಳದ ಬಗ್ಗೆ ಹಲವು ಚರ್ಚೆಗಳು ಸಾಹಿತ್ಯ ಲೋಕದಲ್ಲಿ ಚಿರಪರಿಚಿತವಾಗಿವೆ.

ನಾಡಿನ ಅನೇಕ ವಿದ್ವಾಂಸರು ಇವರ ಜನ್ಮಸ್ಥಳದ ಬಗ್ಗೆ ಮಾತನಾಡುತ್ತ ವಾದವಿವಾದದ ಸುಳಿಯಲ್ಲಿ ಸಿಕ್ಕು ಮಸೂತಿ, ಆಲಮಟ್ಟಿ ಹಾಗೂ ಯರನಾಳ ಎಂಬ ಮೂರು ಊರುಗಳನ್ನು ಗುರುತಿಸುವದು ಕಂಡು ಬರುತ್ತದೆ. ಆದ್ದರಿಂದಲೇ ಈ ವಿಷಯದಲ್ಲಿ ನಿರ್ದಿಷ್ಟತೆ ಬರುವದು ಕಷ್ಟ. ಈ ಕುರಿತು ವಿದ್ವಾಂಸರ ಉಲ್ಲೇಖಗಳನ್ನು ನೋಡಬಹುದು.

ಈ ಶಿಶುವಿನ ತಂದೆ ತಾಯಿಗಳು ಅಕಾಲ ಮೃತ್ಯುವಿಗೆ ಒಳಗಾಗಿರುವದರಿಂದ ದೇಶಿಕರು ಆ ಶಿಶುವನ್ನು ತಮ್ಮ ಜೋಳುಗೆಯಲ್ಲಿ ಹಾಕಿಕೊಂಡು ಆಲಮಟ್ಟಿಯ ಚನ್ನಮಲ್ಲಿಕಾರ್ಜುನ ಮತ್ತು ಅನ್ನಪೂರ್ಣಾಂಬೆಯ ಆರೈಕೆಯಲ್ಲಿ ಬೆಳೆಸಿದರು ಎಂದಿದೆ.

ಅಲ್ಲದೆ ಬಿಜಾಪುರ ಜಿಲ್ಲೆಯ ಆಲಮಟ್ಟಿ ಅಥವಾ ಯರನಾಳ ಎಂಬ ಗ್ರಾಮವಿದೆ. ಎಂದು ಹೇಳುತ್ತ ಸದ್ಭಕ್ತದಂಪತಿಗಳನ್ನು ಎಬ್ಬಿಸಿ ಕಂಕುಳಲ್ಲಿದ್ದ ಶಿಶುವನ್ನು ಆಶೀರ್ವದಿಸಿದರು. ಹೀಗೆ ಆಶೀರ್ವಾದ ಮಾಡಿದರು ಎಂಬ ಮಾತನ್ನು ಪುಷ್ಟೀಕರಿಸುತ್ತ ಕೈವಲ್ಯದರ್ಪಣದ ಪ್ರಸ್ತಾವನೆಯಲ್ಲಿ ಹೀಗೆ ಬರೆಯುತ್ತಾರೆ. ಕ್ರಿ.ಶ 1823 ನೇಯ ಸುಭಾನುನಾಮ ಸಂವತ್ಸರ ಶ್ರಾವಣಮಾಸ ಕಡೆಯ ಸೋಮವಾರದ ರಾತ್ರಿ ಮೂರು ಗಂಟೆಯ ಸಮಯಕ್ಕೆ ದೇಶ ಪರ್ಯಟನಕ್ಕಾಗಿ ಹೊರಟು ಶಿವಯೋಗಿ ಶ್ರೇಷ್ಠರಾದ ಶ್ರೀ ಮಹಂತಲಿಂಗ ದೇಶಿಕ ವರೇಣ್ಯರು ಆಲಮಟ್ಟಿಯ ಹಿರಿಯ ಮಠಕ್ಕೆ ದಯಮಾಡಿಸಿದರು ಎಂದಿದೆ. ಆಲಮಟ್ಟಿ ಚೆನ್ನಮಲ್ಲಯ್ಯಾ ಮತ್ತು ಅನ್ನಪೂರ್ಣಾಂಬೆಯರು ಧರ್ಮ ಪಾರಾಯಣರಾಗಿದ್ದರು.

ಸೂರ್ಯೋದಯದ ಕಾಲಕ್ಕೆ ಶಿಶು ರೂಪಕ ಶಿವನನ್ನು ಲಾಲಿಸು ಪಾಲಿಸು ಎಂದು ಆಶೀರ್ವದಿಸಿ ಹೋಗುತ್ತಾರೆ. ಹೀಗಿರುವ ವಿದ್ವಾಂಸರ ಅಭಿಪ್ರಾಯವನ್ನೇ ಅವಲೋಕಿಸಿದಾಗ ಶ್ರೀಗಳ ಜನ್ಮಸ್ಥಳ ಆಲಮಟ್ಟಿಯೆಂದು ಹೇಳಬೇಕಾಗುತ್ತದೆ. ಆದರೆ ಯರನಾಳದ ಶಿಶುವನ್ನು ಕಂಕುಳಲ್ಲಿ ತಂದು ಆಲಮಟ್ಟಿಯಲ್ಲಿ ಸದ್ಭಕ್ತ ದಂಪತಿಗಳಿಗೆ ಕೊಡಲಾಯಿತೆಂದ ಮೇಲೆ ಅದು ಯರನಾಳ ಕೂಸೆಂದು ಸಂಶಯ ಉಳಿದುಕೊಳ್ಳುತ್ತದೆ. ಇದಕ್ಕೆ ಪೂರಕವಾಗಿ ಪ್ರೊ.ಶಿ.ಶಿ. ಬಸವನಾಳರು ವಿಜಾಪುರ ಜಿಲ್ಲೆಯ ಮನಗೂಳಿ ಹತ್ತಿರ ಇರುವ ಎರನಾಳ ಗ್ರಾಮವೆಂದು ಪ್ರತೀತಿ ಇದೆ ಎಂದಿದ್ದಾರೆ.

ಮತ್ತು ಶ್ರೀ ಶಿವಯೋಗಿಗಳು ಹುಟ್ಟಿದ ಊರು ವಿಜಾಪುರ ಜಿಲ್ಲೆಯ ಮನಗೂಳಿಯ ಹತ್ತಿರ ಇರುವ "ಎರಿನಾಳ" ಗ್ರಾಮವೆಂದು ಹೇಳಲಾಗುತ್ತದೆ. ಹಾಗೆಯೇ ಮುಂದುವರೆದು ಶೈಶಾವಸ್ಥೆಯಲ್ಲಿರುವಾಗಲೇ ತಾಯಿ – ತಂದೆಗಳನ್ನು ಕಳೆದುಕೊಂಡು ಅನಾಥರಾದರು ಎಂದಿದ್ದಾರೆ. ಮಸೂತಿ ಎಂಬ ಗ್ರಾಮದಲ್ಲಿ ಸುಮಾರು ಕ್ರಿ.ಶ. 1826 ರಲ್ಲಿ ಅವರು ಜನಿಸಿದರು ಎಂದಿದ್ದಾರೆ.

ಯರನಾಳ ಮತ್ತು ಆಲಮಟ್ಟಿಯನ್ನು ಸಮನ್ವಯಗೊಳಿಸುತ್ತಾ ಶಿವಯೋಗಿಗಳು ಮನಗೂಳಿ ಹತ್ತಿರ ಇರುವ ಎರಿನಾಳದಲ್ಲಿ ಜನಿಸಿದರು. ತಂದೆ ತಾಯಿಗಳ ಅಕಾಲ ಮೃತ್ಯುವೀಗೀಡಾಗಿದ್ದರಿಂದ ಸಂಚಾರಾರ್ಥವಾಗಿ ಬಂದ ಮಹಂತಲಿಂಗ ದೇಶಿಕ ವರೇಣ್ಯರು ಕಾರಣಿಕನಾಗಬಹುದಾದ ಆ ಶಿಶುವನ್ನು ಗುರುತಿಸಿ ತಾವೇ ಮಗುವನ್ನೇತ್ತಿ ತಂದು ಅನ್ನಪೂರ್ಣಾಂಬೆಯನ್ನು ಕರೆದು ಇವನೇ ನಿಮ್ಮ ಮಗ, ಇವನ ಲಾಲನೆ ಪಾಲನೆ ಮಾಡಬೇಕೆಂದು ಹೇಳಿ ಹೋದರು. ಎಂದಿದ್ದಾರೆ.

ಸುಮಾರು 1823–59 ರಲ್ಲಿ ಪ್ರಸಿದ್ದರಾಗಿದ್ದು ಶಿವೆಯೋಗಿಗಳು. ಇವರ ಜನನ ಬಾಲ್ಯಗಳ ಬಗೆಗೆ ಖಚಿತರಾಗಿದ್ದು ಕಂಡುಬರುವದಿಲ್ಲ. ಇವನ ಊರು ವಿಜಾಪುರ ಜಿಲ್ಲೆಯ 'ಎರನಾಳ' ಗ್ರಾಮವೆಂದು ನಂಬಲಾಗಿದೆ.[3]

ಈ ಎಲ್ಲಾ ವದಂತಿಗಳನ್ನು ಮುಂದಿಟ್ಟುಕೊಂಡು ಪುರಾಣಿಕರು ತಮ್ಮದೇ ರೀತಿಯಲ್ಲಿ ಶ್ರೀಗಳ ಜನ್ಮ ಸ್ಥಳವನ್ನು ಗುರುತಿಸಿದ್ದಾರೆ.................... ಸುರ

ಮರೆದಿರ್ದನಾಲಮಟ್ಟಿಯನಿಪ್ಪ ಗ್ರಾಮದೊಳು ಪಾರಿಯೆಮಠ ದೋರ್ವ್ವಾರ್ಯನು" ಎನ್ನುತ್ತ ಆ ಸದ್ಭಕ್ತ ದಂಪತಿಗಳಿಗೆ ಆಶೀರ್ವದಿಸಿರುವದರಿಂದ ಕಾರಣಿಕ ಶಿಶು ಆಲಮಟ್ಟಿಯದೇ ಎಂದು ಹೇಳುತ್ತಾರೆ. ಆದರೂ ಲಭಿಸಿದ ಮಾಹಿತಿಗಳು ಮತ್ತು ಸಾಹಿತ್ಯದ ಆಧಾರಗಳಿಂದ ಹೇಳುವದಾದರೆ ಶಿವಯೋಗಿಗಳ ವಂಶಸ್ಥರು ಮೂಲತಃ ಮಸೂತಿಯವರು. ತಾಯಿಯ ಸಂಬಂಧ ಹಿಡಿದು ಹೇಳುವದಾದರೆ ಅವರು ಆಲಮಟ್ಟಿಯಲ್ಲಿ ಜನಿಸಿ ಯರನಾಳ ಮಠಕ್ಕೆ ನೇಮಿಸಲ್ಪಟ್ಟ ನಂತರ ಮುಳುಗುಂದಕ್ಕೆ ತೆರಳಿರಬೇಕು. ಯಾಕೆಂದರೆ ಬಹುತೇಕ ಹೆಣ್ಣು

ಮಕ್ಕಳು ಪ್ರಥಮ ಹೆರಿಗೆಗಾಗಿ ತವರು ಮನೆಗೆ ಹೋಗುವದು ಭಾರತೀಯ ಸಂಪ್ರದಾಯ ಹೀಗೆ ಆಲಮಟ್ಟಿಯಲ್ಲಿ ಜನಿಸಿದ ಮಗು ಮಹಾಂತನು, ತಂದೆ ತಾಯಿಗಳ ಮರಣದಿಂದ ದೊಡ್ಡಮ್ಮನಲ್ಲಿ ಬೆಳೆದಿರಬೇಕು, ಎಂಟು ವರ್ಷಗಳ ನಂತರ ವೈರಾಗ್ಯ ತಾಳಿ ದೇಶ ಸಂಚಾರ ಹೊರಟಿರು. ಬಳ್ಳಾರಿ ಜಿಲ್ಲೆಯ ಲಿಂಗ ನಾಯಕನ ಹಳ್ಳಿಯ ಗುರುಕುಲದಲ್ಲಿ ಶಿವಯೋಗದ ಅಭ್ಯಾಸದಲ್ಲಿ ನಿರತರಾದರು. ಅಲ್ಲಿ ಮೈಲಾರದ ಬಸವ ಲಿಂಗ ಶಿವಶರಣರು ಶಾಂತವೀರ ಸ್ವಾಮಿಗಳು ಸಣ್ಣ ಬರಹದ ರಾಚೋಟಿ ಸ್ವಾಮಿಗಳು ಬನ್ನಿಘಟ್ಟ ಚನ್ನಪ್ಪನವರು ಪೊಳಲಲಿಂಗಪ್ಪನವರು ಸಹಪಾಠಿಗಳಾಗಿದ್ದರು. ಅವರೆಲ್ಲ ತಮ್ಮ ತಮ್ಮ ಮಠಕ್ಕೆ ಸ್ವಾಮಿಯಾಗಿ ಹೋದಾಗ ಮಹಾಂತರಿಗೆ ಯಾವ ಮಠವೂ ಇಲ್ಲದ್ದರಿಂದ ಲೋಕವೇ ನನ್ನ ಮನೆ ಎಂಬ ವಿಶಾಲ ಮನೋಭಾವನೆಯಿಂದ ಜಂಗಮ ಮೂರ್ತಿಯಾಗಿ ಸಂಚಾರ ಹೊರಟರು ಮುಂದೆ ಮುಳಗುಂದಕ್ಕೆ ಆಗಮಿಸಿ ಗವಿಮಠದ ಅಧಿಕಾರಿಯಾಗಿ ಲಿಂಗೈಕ್ಯ ಮಹಾಂತಲಿಂಗ ದೇಶಿಕ ವರೇಣ್ಯರ ಭವಿಷ್ಯ ವಾಣಿಯಂತೆ ಮುಳಗುಂದದ ಕಲ್ಮಠದ ಸ್ವಾಮಿಗಳಾಗಿ ಅಧಿಕಾರ ಸ್ವೀಕರಿಸಿದರು.

3.3 ಗುರುಪರಂಪರೆ :–

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಗುರುಪರಂಪರೆಯನ್ನು ಗುರುತಿಸುವದು ತೊಡಕಿನ ಕೆಲಸವಾಗಿದೆ. ಸ್ವತಃ ಶಿವೆಯೋಗಿಗಳು ಎಲ್ಲಿಯೂ ತಮ್ಮ ಹಾಡುಗಳಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಮುಳಗುಂದದ ಕಲ್ಮಠದ ಗುರುಗಳಾದ ಮಹಾಂತಲಿಂಗ ದೇಶಿಕೇಂದ್ರರು ಕೃಪಾಶೀರ್ವಾದದಿಂದ ಜನಿಸಿ ಅವರ ಭವಿಷ್ಯವಾಣಿಯಂತೆ ಎಂಟನೆಯ ವಯಸ್ಸಿನಲ್ಲಿಯೇ ಅಪಾರ ವೈರಾಗ್ಯ ತಾಳಿದೇಶ ಸಂಚಾರ ಹೊರಟರು. ಲಿಂಗನಾಯಕನ ಹಳ್ಳಿಯಲ್ಲಿ ಯೋಗಾಭ್ಯಾಸ ಮಾಡಿ ಮುಳಗುಂದಕ್ಕೆ ಬರುತ್ತಾರೆ.

ಆರಾಧ್ಯದೈವರಾದ ಗುರುಮಹಂತ ಲಿಂಗ ದೇಶಿಕೇಂದ್ರರು :–

ಕಾರಣಿಕವಾಗಿ ಜನಿಸುವ ಈ ಮಗುವಿಗೆ ಮಹಂತ ಲಿಂಗರ ಕೃಪಾಶೀರ್ವಾದವೇ ಶ್ರೀ ರಕ್ಷೆ, ಅವರ ಹಾಡುಗಳಲ್ಲಿ ಮಹಂತಲಿಂಗ ದೇಶಿಕೇಂದ್ರರು ಎಂಬ ಅಂಕಿತನಾಮವಾಗಿ ಉಳಿದುಕೊಂಡಿದ್ದಾರೆ. ಸದಾ ಶ್ರೀ ರಕ್ಷೆಯಾಗಿ ಇಷ್ಟದೈವವಾಗಿ ಪೂಜೆಗೊಂಡಿದ್ದಾರೆ.

ಪರಿಪೂರ್ಣನಂದ ಪರಾತ್ಪರೂಪನೆ ಮಹಂತಲಿಂಗ।
ಕರಣೇಂದ್ರಿಯಗಳೂ ಲಿಂಗಕಿರಣವಾಗಿರ್ಪನೆ ಮಹಂತಲಿಂಗ ॥ಪ॥ 55

ಎಂದು ಹಾಡಿದ್ದಾರೆ. ಹೀಗೆ ಇಷ್ಟದೈವವಾಗಿ ಅವರ ಕಾವ್ಯಕ್ಕೆ ಅಂಕಿತವಾಗಿ ಉಸಿರಿನಲ್ಲಿ ಉಸಿರಾಗಿ ಕೊನೆಯವರೆಗೆ ಬಾಲಲೀಲಾ ಮಹಾಂತ ಶಿವಯೋಗಿಗಳಿಂದ ಪೂಜ್ಯತೆಗೊಂಡು ಕೊನೆಗೆ ತಾವೇ ಅವರ ಹಂತಕ್ಕೆ ಏರಿದ ವಿಲಕ್ಷಣ ಸ್ಥಿತಿಯನ್ನು ತಲುಪುತ್ತಾರೆ. ಇಷ್ಟ ದೇವರ ಹೆಸರನ್ನೆ ಅಂಕಿತವನ್ನಾಗಿಟ್ಟು ಕೊಳ್ಳುವ ರೂಢಿ ವಚನಕಾರರಿಂದಲೇ ಬಂದಿರುವುದನ್ನು ಕಾಣಬಹುದು.

ಶಿಕ್ಷಾಗುರು :–

ಮಹಂತಲಿಂಗ ದೇಶಿ ಕೇಂದ್ರರ ಭವಿಷ್ಯದಂತೆ ಮಗು ಬೆಳೆಯುತ್ತಾ, ಲೌಕಿಕ ಶಿಕ್ಷಣದ ಕಡೆಗೆ ಆಸಕ್ತಿ ತೋರಿಸುವುದಿಲ್ಲ, ಅಯ್ಯಗಳ ಶಾಲೆಯ ಅಕ್ಷರಾಭ್ಯಾಸ ಅವರಿಗೆ ರುಚಿಸುವದಿಲ್ಲ, ಆದ್ದರಿಂದಲೇ 8ನೇ ವರ್ಷಕ್ಕೆ ವೈರಾಗ್ಯ ತಳೆದು ತಂದೆ–ತಾಯಿಗಳಿಂದ ಬೀಳ್ಕೊಂಡು ನಿಜಗುರುವನರ ಸುತ್ತ ಸಾಗುತ್ತಾರೆ, ಹಾಗೆಯೆ ಲಿಂಗನಾಯಕನ ಹಳ್ಳಿಗೆ ಬಂದು, ಅಲ್ಲಿಯ ಗುರುಕುಲದಲ್ಲಿ ಚೆನ್ನವೀರ ಸ್ವಾಮಿಗಳಿಂದ ಶಿವಯೋಗಾಭ್ಯಾಸ ನಡೆಯುತ್ತದೆ ಎಂದು ತಿಳಿದು ಅವರ ಶಿಷ್ಯತ್ವಕ್ಕಾಗಿ ಬೇಡಿಕೊಳ್ಳುತ್ತಾರೆ. [5]

ದೀಕ್ಷಾಗುರು :–

ವೀರಶೈವ ಪರಂಪರೆಯಲ್ಲಿ ಶಿವಯೋಗ ಸಾಧನೆಗೆ ತೊಡಗುವ ಮುಂದೆ ಯೋಗ್ಯಗುರುಗಳಿಂದ ದೀಕ್ಷಾಕಾರ್ಯ ನೆರವೇರಿಸಬೇಕು, ಇಲ್ಲಿ ಗುರುವಾದವನು ಶಿಷ್ಯನ ನೋಟ ಮಾತ್ರದಿಂದ ಆತನ ಯೋಗಿಯ ಲಕ್ಷಣಗಳನ್ನು ಗುರುತಿಸಿ ಆತನಿಗೆ ದೀಕ್ಷೆಕೊಡಲು ಮುಂದಾಗುತ್ತಾನೆ. ರಹಸ್ಯವಾಗಿ ಹಸಮಸ್ತಕ ಸಂಯೋಗದಿಂದ ಪಂಚಾಕ್ಷರಿ ಮಂತ್ರವನ್ನೊದಿಸಿ ಆತನ ಮಾಯಾ ಶರೀರವನ್ನು ಮಂತ್ರ ಶರೀರವನ್ನಾಗಿ ಮಾಡುತ್ತಾನೆ. ಆತನ ದೇಹಕ್ಕಂಟಿದ ಮಲತ್ರಗಳನ್ನು ಕಳೆಯುತ್ತಾರೆ. ಅಲ್ಲಿಂದ ಆತನ ಸಾಧಕ ಜೀವನ ಮುಂದುವರೆಯುತ್ತದೆ.

ಹೀಗೆ ದೀಕ್ಷೆಯನ್ನು ಕೊಡಮಾಡಿದ ಗುರುವು ಯೋಗಿಕ ಶಕ್ತಿಯನ್ನು ಹೊಂದಿರಬೇಕಾಗುತ್ತದೆ. ಜ್ಯೋತಿ ಸ್ವರೂಪನಾದ ಗುರು ಶಿಷ್ಯನಿಗೆ ಮುಟ್ಟಿಸುವುದರಿಂದ ಅಜ್ಞಾನ ಕಳೆದು ಸುಜ್ಞಾನದ ಬೆಳಕು ಪಸರಿಸುವಂತಾಗಬೇಕು. ಆದ್ದರಿಂದ ಗುರುವು – ಶಿಷ್ಯನು ಸಮಾನವಾದ ಆತ್ಮ ಬಲವನ್ನೇ ಪಡೆದಿರಬೇಕಾಗುತ್ತದೆ.

ಬಾಲಲೀಲಾ ಮಹಾಂತರು ಲಿಂಗನಾಯಕನ ಹಳ್ಳಿಗೆ ಬಂದು ವಿದ್ಯಾಭ್ಯಾಸದ ಅಪೇಕ್ಷೆಯನ್ನು ಚನ್ನವೀರ ಸ್ವಾಮಿಗಳಲ್ಲಿ ನಿವೇದಿಸಿಕೊಂಡಾಗ ಆತನ ಕುಲಾದಿಗಳ ವಿಚಾರವನ್ನೇ ಎತ್ತದೇ ಗೋಸಾವಿ ಗುಡ್ಡದ ಶಾಂತವೀರ ಸ್ವಾಮಿಗಳಿಂದ ದೀಕ್ಷೆಕೊಡಿಸುತ್ತಾರೆ. ವರ್ಣವ್ಯವಸ್ಥೆಯ ಕಪಿಮುಷ್ಟಿಯಲ್ಲಿ ನಲುಗಿದ ವೀರಶೈವ ಸಮಾಜ ಅನೇಕ ಧರ್ಮಗಳ ಜತೆಗೆ ಪೈಪೋಟಿಯನ್ನು ನಡೆಸಬೇಕಾಗಿತ್ತು. ಹಾಗೆಯೇ ಪಾವಿತ್ರವನ್ನು ಕಾಪಾಡಿಕೊಳ್ಳಬೇಕಾಗಿತ್ತು. ಆದ್ದರಿಂದ ತಮ್ಮ ಜಾತಿಯವರಲ್ಲದವರಿಗೆ ದೀಕ್ಷೆಕೊಟ್ಟರೆ ತಮ್ಮ ಸ್ವಾಮಿತ್ವಕ್ಕೆ ಕಳಂಕವಾಗುತ್ತದೆ, ಎಂಬ ತಿಳವಳಿಕೆಯ ವಿಶಾಲವಾಗಿರುವ ದಿನಮಾನಗಳಲ್ಲಿ ಯಾವುದನ್ನು ಲೆಕ್ಕಿಸದೇ ದೀಕ್ಷೆಕೊಟ್ಟಾಗ ಅತ್ಯಂತ ಪೂಜ್ಯತೆಯಿಂದ ಧನ್ಯತೆಯನ್ನು ತಮ್ಮ ಹಾಡುಗಳಲ್ಲಿ ಹೇಳುತ್ತಾರೆ.

ಧನ್ಯನಾದೆನು ವರಶಾಂತವೀರಸ್ವಾಮಿ

ನಿನ್ನ ಪಾದಾರವಿಕಾಸವ ಕಂಡುದ್ದಾರ ॥ಪ॥ 27

ನಿನ್ನ ಕೃಪೆಯಿಂದ ಧನ್ಯನಾದೆನು ಎಂದು ಹೇಳಿಕೊಂಡಿದ್ದಾರೆ ಆಧ್ಯಾತ್ಮ ಸಾಧನೆಗೆ ಗುರುದೀಕ್ಷೆ ಮೊದಲಘಟ್ಟ ಗುರುವಿಲ್ಲದೆ ಮಾಡಿದ ಆಧ್ಯಾತ್ಮ ಸಾಧನೆಯು ಗಂಡನಿಲ್ಲದ ಪ್ರಾಪಂಚಿಕವನ್ನು ನಡೆಸಿದಂತೆ ಎಂದಿದ್ದಾರೆ.

3.4 ಮಾರ್ಗದರ್ಶಕ ಸಹಪಾಠಿಗಳು :–

ಲಿಂಗನಾಯಕನ ಹಳ್ಳಿಯ ಗುರುಕುಲದಲ್ಲಿ ವಿಧ್ಯಾಭ್ಯಾಸಕ್ಕೆ ತೊಡುಗುವಾಗಲೇ ಅಲ್ಲಿ ಶಾಂತವೀರಸ್ವಾಮಿಗಳು ಸಣ್ಣಬರಹದ ರಾಚೋಟಿಸ್ವಾಮಿಗಳು, ಮೈಲಾರ ಬಸವಲಿಂಗ ಶಿವಶರಣರು, ಪೊಳಲ ಲಿಂಗಪ್ಪನವರು ಬನ್ನಿಮಟ್ಟಿ ಚನ್ನಪ್ಪನವರು ಯೋಗಾಭ್ಯಾಸ ಮಾಡುತ್ತಿರುವ ಸಂಗತಿ ವೇದ್ಯವಾಗುತ್ತದೆ, ಅಲ್ಲಿ ಅವರೆಲ್ಲರೂ ಬಾಲಲೀಲಾ ಮಹಾಂತರಿಗೆ ಒಂದರ್ಥದಲ್ಲಿ ಒಡನಾಡಿಗಳಾಗಿ ಮಾರ್ಗದರ್ಶಕರಾಗಿ ಹಿರಿಯ ಉಪದೇಶಕರಾಗಿ ಪರಿಣಮಿಸುತ್ತಾರೆ.

ಹಿರಿಯ ಸಮಕಾಲೀನರಾದ ಮೈಲಾರದ ಬಸವಲಿಂಗರು ಬಾಲಲೀಲಾ ಮಹಾಂತರ ಉಪದೇಶದಂತೆ ಗುರುಕರುಣ ತ್ರಿಪದಿಯನ್ನು ಬರೆದು ಗುರು ಕಟಾಕ್ಷವನ್ನು ಸಂಪಾದಿಸಿದ್ದೇನೆ ಎಂದು ತನ್ನ ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ರಾಚೋಟಿ ಸ್ವಾಮಿಗಳು ಆಧ್ಯಾತ್ಮದ ವಿಷಯದಲ್ಲಿ ಅನೇಕ ಸಲಹೆಗಳನ್ನು ಕೊಡುತ್ತ ಹೆಜ್ಜೆ ಹೆಜ್ಜೆಗೆ ಶಿವಯೋಗಿಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎಂಬುದು ಅವರ ಹಾಡುಗಳಲ್ಲಿ ಕಂಡುಬರುತ್ತದೆ.

ನಾನು ಸಣ್ಣವನಾದರೇನು

ಜ್ಞಾನ ನನ್ನದು ಸಣ್ಣದಲ್ಲ

ನೀನು ಆಡಿಸಿದಂತೆ ಆಡಿದೆ ರಾಚವಟ್ಟೀಶ। 127

ಇದರಿಂದ ರಾಚವಟ್ಟೀಶನ ಕಿರಿಯ ಸಮಕಾಲೀನರಾದ ಬಾಲಲೀಲಾ ಮಹಾಂತ ಶಿವಯೋಗಿಗಳು ರಾಚವಟ್ಟೀಶ ನೀಡಿದ ಜ್ಞಾನಕ್ಕೆ ಬೆರಗಾಗಿದ್ದಾರೆ, ಇವರೇ ಶಾಂತವೀರ ಸ್ವಾಮಿಗಳ ನಂತರ ಚಿತ್ರದುರ್ಗ ಮಠದ ಸ್ವಾಮಿಗಳಾಗುತ್ತಾರೆ, ಮುಳಗುಂದವು ಚಿತ್ರದುರ್ಗ ಮಠದ ಶಾಖಾ ಮಠವಾಗಿರುವುದರಿಂದ ರಾಚವಟ್ಟೀಶ ಮಠ ಪರಂಪರೆಯಲ್ಲಿಯೂ ಗುರುಗಳಾಗಿ ಮುಂದುವರೆಯುತ್ತಾರೆ.

ಮೈಲಾರ ಬಸವಲಿಂಗ ಶಿವಶರಣರ ಗುರು ಚನ್ನವೀರ ಸ್ವಾಮಿಗಳಾದಂತೆ ಬಾಲಲೀಲಾ ಮಹಾಂತ ಶಿವಯೋಗಿಗಳ ಗುರುಗಳು ಯಾರು ಎಂದು ನಿಖರವಾಗಿ ಒಂದೇ ಹೆಸರಿನಲ್ಲಿ ಹೇಳುವದು ಕಷ್ಟಸಾಧ್ಯವಾದ ಮಾತು, ಇವರ ಮನೋ ವೈಶಾಲ್ಯತೆಯಲ್ಲಿ ಸರ್ವ ಪೂಜ್ಯರನ್ನು ಗುರುಗಳೆಂದು ಭಾವಿಸಿ ಹಾಡು ಹೇಳಿದ್ದು ಕಂಡುಬರುತ್ತದೆ.

ಹೀಗೆ ಬಸವಲಿಂಗ ಶಿವಶರಣರು ತಮ್ಮ ಸಹಪಾಠಿಗಳೆಂದು ಒಪ್ಪಿಕೊಂಡು ಅವರ ಸಲಹೆಯಂತೆ ನಾನು 333 ಗುರುಕರಣ ತ್ರಿಪದಿಗಳನ್ನು ಬರೆದು ಅರ್ಪಿಸಿದಾಗ ಅವರ ಸಂಪ್ರೀತಿಯನ್ನು ಸಂಪಾದಿಸಿದ್ದೇನೆ, ಎಂದು ಹೇಳಿರುವದರಿಂದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಮೈಲಾರ ಬಸವಲಿಂಗ ಶರಣರ ಜತೆಗೆ ಚನ್ನವೀರಸ್ವಾಮಿಗಳ ಶಿಷ್ಯತ್ವದಲ್ಲಿ ಬೆಳೆದು ಬಂದಿರುವ ಪರಮ ಶಿವಯೋಗಿ ನಿಷ್ಟರಾಗಿ ಮುಳಗುಂದದ ಪೀಠಪರಂಪರೆಯಲ್ಲಿ ಒಬ್ಬರಾಗಿ ಲೋಕ ವಿಖ್ಯಾತವಾದ ಬಾಲಲೀಲೆಯನ್ನು ಮೆರೆದು ಧಾರ್ಮಿಕ ಜಾಗೃತಿಯನ್ನು

'ಕೈವಲ್ಯದರ್ಪಣ' ಬರೆದು ಸಾಹಿತ್ಯಕ ಜಾಗೃತಿನ್ನುಂಟು ಮಾಡಿದರು ಹೀಗಿರುವ ಅವರ ಮುಳಗುಂದದ ಗುರುಪರಂಪರೆಯನ್ನು ನೋಡಬಹುದು.

ಗವಿ ಮಠದ ಗುರುಪರಂಪರೆ :-

1) ಮಹಂತಲಿಂಗ ದೇಶಿಕೇಂದ್ರರು – ಮೊದಲಗುರು

2) ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು – 1859 ರವರೆಗೆ

3) ಮುಪ್ಪಿನ ಮಹಾಂತ ಸ್ವಾಮಿಗಳು – 1859–1890

4) ಬಸವಲಿಂಗ ಸ್ವಾಮಿಗಳು – 1890 ರಿಂದ 1910

5) ಶಿವಲಿಂಗ ದೇವರು – ಇವರು ಸಣ್ಣವರಿದ್ದ ಕಾರಣ

6) ಮೃತ್ಯುಂಜಯ ಮಹಾಸ್ವಾಮಿಗಳು – ಧಾರವಾಡಕ್ಕೆ ಬಂದ ನಂತರ

7) ಶಿವದೇವ ಸ್ವಾಮಿಗಳು–

8) ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು – 1972 ರಿಂದ ಇವತ್ತಿನವರೆಗೆ

ಈ ಪೀಠ ಪರಂಪರೆಯು ಮಹಾಂತಲಿಂಗ ದೇಶಿಕೇಂದ್ರರಿಂದಲೇ ಪ್ರಾರಂಭವಾಗಿದೆಯೋ ? ಅಥವಾ ಅವರಿಗಿಂತ ಮೊದಲು ಯಾರು ಇದ್ದರು ಎಂಬ ವಿಚಾರಗಳು ತಿಳಿದು ಬಂದಿಲ್ಲ, ಮುಪ್ಪಿನ ಸ್ವಾಮಿಗಳ ತರುವಾಯದಲ್ಲಿ ಶಿವಲಿಂಗದೇವರು ಸಣ್ಣವರಿದ್ದ ಕಾರಣದಿಂದ ಮೃತ್ಯುಂಜಯ ಮಹಾಸ್ವಾಮಿಗಳನ್ನು ಚಿತ್ರದುರ್ಗದ ಜಗದ್ಗುರುಗಳಿಂದ ನೇಮಿಸಲ್ಪಟ್ಟಿತು ಅವರು ಧಾರವಾಡಕ್ಕೆ ಬಂದಾಗ ಶಿವದೇವ ಸ್ವಾಮಿಗಳನ್ನು ಕೆಲಕಾಲ ಅಧಿಕಾರಕ್ಕೆ ಬಿಡಲಾಗಿತ್ತು.ನಂತರ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು 1972 ರಿಂದ ಇವತ್ತಿನವರೆಗೂ ಇದ್ದಾರೆ. 5

19ನೇ ಶತಮಾನದ ಪೂರ್ವಾರ್ದಲ್ಲಿರುವ ಬಾಲಲೀಲಾ ಮಹಾಂತ ಶಿವಯೋಗಿಗಳ ತಂದೆ–ತಾಯಿಗಳ ಹೆಸರು ನಮ್ಮ ಸಂಶೋಧನೆಗೆ ನಿಲಿಕಿಲ್ಲ, ಆದರೆ ಆಲಮಟ್ಟಿಯ ಚೆನ್ನಮಲ್ಲಿಕಾರ್ಜುನ ಮತ್ತು ಅನ್ನಪೂರ್ಣಾಂಬೆಯವರ ಸಾಕು ಮಗನಾಗಿ ಬೆಳೆಯುತ್ತಾರೆ.

ಅಂದು ಆಲಮಟ್ಟಿಯ ಅನ್ನದಾನೇಶ್ವರ ಹಿರೇಮಠವು ಅತ್ಯಂತ ಪ್ರಸಿದ್ಧವಾದ ಆಧ್ಯಾತ್ಮ ಕೇಂದ್ರವಾಗಿತ್ತು, ಪುರಾಣ ಪ್ರವಚನಗಳು ಶ್ರೀ ಮಠದಲ್ಲಿ ನಡೆಯುತ್ತಿದ್ದವು, ಧಾರ್ಮಿಕ ಜಾಗೃತ ಪರಿಸರದಲ್ಲಿ ಶಿವಯೋಗಿಗಳು 8 ವರ್ಷಗಳನ್ನು ಕಳೆದರು ಅಲ್ಲಿಯ ವಾತಾವರಣದಿಂದ ಸಹಜವಾಗಿಯೇ ಧಾರ್ಮಿಕ ಭಾವನೆಗಳು ಅವರ ಮೇಲೆ ಪ್ರಭಾವ ಬೀರಿದವು, ಧಾರ್ಮಿಕ ಹಸಿವು ಹೆಚ್ಚಾದಂತೆ ಅಂತರಂಗದಲ್ಲಿ ವೈರಾಗ್ಯ ಅಂಕುರಿಸಿ ಯೋಗ್ಯ ಗುರುವನ್ನು ಹುಡುಕುತ್ತ ದೇಶ ಸಂಚಾರ ಹೊರಟರು.

ಲಿಂಗನಾಯಕನಹಳ್ಳಿಯ ಗುರುಕುಲಕ್ಕೆ ಬಂದು ಚೆನ್ನವೀರ ಸ್ವಾಮಿಗಳು ಕೃಪೆಯಿಂದ ಶಾಂತವೀರಸ್ವಾಮಿಗಳಿಂದ ದೀಕ್ಷೆ ಆಯಿತು. ಹೀಗೆಯೆ ಶಿವಯೋಗಿಗಳು ತಮ್ಮ ಕೈವಲ್ಯ ದರ್ಪಣದಲ್ಲಿ ಹೇಳಿಕೊಂಡಿರದಿದ್ದರೂ ಗುರುಶಾಂತವೀರ, ಗುರು ಮಹಾಂತಲಿಂಗರಲ್ಲಿ ತಮ್ಮ ಶಿಷ್ಯತ್ವವನ್ನು ಸಮರ್ಪಿಸಿ ಯೋಗದ ತುತ್ತತುದಿ ತಲುಪಿ ಸದ್ಗುಣವುಳ್ಳ ಶಾಂತಕರ ಗದ್ದಿಗೆಯೊಳಗೆ ಮಹಾಂತಲಿಂಗಾಂಗಿ ನಿಂತ ನಿಲುವು ಅವರ ಸಾಧನೆಯ ಮಹತ್ವದ ಮೈಲುಗಲ್ಲಾಗಿದೆ. ಅಲ್ಲಿಂದ ಅವರು ಸಂಚರಿಸುತ್ತ ಮುಳಗುಂದ ಗ್ರಾಮಕ್ಕೆ ಗುರುಗಳ ಮಾರ್ಗದರ್ಶನದಂತೆ ಮುಳಗುಂದಕ್ಕೆ ದಯಮಾಡಿಸಿದ ಅವರು ಅಲ್ಲಿಯ ಪರಿಸರವನ್ನು ಕಂಡು ಈ ರೀತಿ ಪದವನ್ನು ಉದ್ಗರಿಸುತ್ತಾರೆ

"ಎಂತ ಗ್ರಾಮಕ್ಕೆ ಬಂದೆವೋ ಹರಹರ ಕಂತುಮರ್ದನ ಲಿಂಗವೆ" **41**

ಜನಸಾಮಾನ್ಯರಿಗೆ ಆಚಾರ ವಿಚಾರಗಳ ಅರಿವು ಮೂಡಿಸುತ್ತಾ ಪವಾಡಗಳನ್ನು ಮಾಡುತ್ತ ನಾನಾ ತೀರ್ಥಕ್ಷೇತ್ರಗಳನ್ನು ಸಂಚರಿಸುತ್ತಾ ಮೈಸೂರಿಗೆ ಬಂದು ಮಹಾರಾಜರ ಬೆನೆಯನ್ನು ಕಳೆದು ಮುಳಗುಂದಕ್ಕೆ ಬಂದು ನೆಲೆ ನಿಲ್ಲುತ್ತಾರೆ. ತಮ್ಮ ಹೆಸರಿನೊಂದಿಗೆ ಮುಳಗುಂದವನ್ನು ಸೇರಿಸಿಕೊಂಡು ನಾಡಿನ ತುಂಬೆಲ್ಲಾ ಚಿರಪರಿಚಿತರಾಗುತ್ತಾರೆ, ವೀರಶೈವ ಆಚಾರಗಳನ್ನು ಅವುಗಳ ಆಚರಣೆಯ ಲಾಭಾಂಶವನ್ನು ಜನಕೋಟಿಗೆ ತಿಳಿಸುತ್ತಾ ಎಲ್ಲರ ಕಲ್ಯಾಣ ಬಯಸಿದರು, ತಮ್ಮಲ್ಲಿ ವಿಶ್ವಾಸವಿಟ್ಟು ಭಕ್ತರಿಗೆ ಶ್ರೀರಕ್ಷೆಯಾಗಿ ನಿಂತು ಕಾಪಾಡಿದರು, ಶಿವಪೂಜೆ ನಿಷ್ಠರಾಗಿದ್ದು ತ್ರಿಕಾಲ ಸ್ನಾನಪೂಜೆ ನೆರವೇರಿಸುತ್ತಿದ್ದರು, ಪೂಜೆಯ ನಂತರ ಕೆಲವು ಕಾಲ ಪೌಢಾವಸ್ಥೆಯಲ್ಲಿದ್ದು ಬಂದ ಭಕ್ತರ ಜೊತೆಗೆ ಮಾತನಾಡುತ್ತಿದ್ದರೆ ತತ್‌ಕ್ಷಣವೇ ಬಾಲಭಾವದಲ್ಲಿ ಉಳಿದು ಮಕ್ಕಳ ಜೊತೆಗೆ ಆಟ ಆಡುವುದು. ತೊಟ್ಟಿಲಲ್ಲಿ

ಕುಳಿತು ವಿಲಕ್ಷಣ ರೀತಿಯ ಬಾಲಭಾವ ಅವರದಾಗಿತ್ತು. ಅವರೇ ಒಂದು ಕಡೆಗೆ ಹೇಳಿದಂತೆ ನನ್ನ ಜೊತೆಗೆ ಹೇಗಿರಬೇಕು ?

ತೊಟ್ಟಿಲಿಂದಿಳಿಸಿ ಕ್ರೀಯಾ ಜಳಕ ಲಿಂಗಾರ್ಪಿತಗೋಸುಗ ಕರ
ಕೊಂಡು ಹೋಗುವಾಗ್ಗೆ ಬಹುಜನ ಬರಲಾಗದು
ಬಹುಪರಾಕ್ ಅಥವಾ ಬಂದರೆ ಶಬ್ದಜಾಗ್ರತೆ ತಂದರೆ ಶಿವಾನಂದ ಕೆಡುವುದು
ಬಹುದೋಷವು ನೋಡಿ ಬಹುಪರಾಕ್॥ 113

ಶಿವಯೋಗಿಗಳು ಪೂಜೆಗಾಗಿ ತೊಟ್ಟಿಲದಿಂದ ಕೆಳಗಿಳಿದಾಗ ಭಕ್ತರು ಅವರ ಜೊತೆಗೆ ಮಾತನಾಡಬಾರದು, ಹೋಗಬಾರದು, ಅದು ಸೇವೆ ಎಂದು ತಿಳಿದು ಶಬ್ದಜಾಗ್ರತೆ ವಹಿಸಿದರೆ ಶಿವಾನಂದ ಕೆಡುತ್ತದೆ. ಅದರಿಂದ ದೋಷವು ಉಂಟಾಗುತ್ತದೆ ಈ ರೀತಿಯ ಸೂಕ್ಷ್ಮ ಸಂಬಂಧವನ್ನು ಶಿವಯೋಗಿಗಳು ಹೊಂದಿದ್ದರು.

ಶ್ರೀ ಬಾಲಲೀಲಾ ಮಹಾಂತರು ಆಶುಕವಿಗಳು ಸ್ಫೂರ್ತಿ ಬಂದ ತಕ್ಷಣ ಹಾಡು ಹೇಳುತ್ತಿದ್ದರು, ಅಥವಾ ಆ ಮಠದ ತೊಲೆ ಬೋದಿಗೆಗಳ ಮೇಲೆ ಬರೆಯುತ್ತಿದ್ದರಂತೆ, ಅವರ ಒಡನಾಟದಲ್ಲಿರುವ ಮರಿದೇವರು ಎನ್ನುವವರ ಬರಹರೂಪದಲ್ಲಿ ಸಂಗ್ರಹಿಸುತ್ತಿದ್ದರಂತೆ, ಹಾಗೆ ಸಂಗ್ರಹಿಸಿದ ಹಾಡುಗಳೇ ಕೈವಲ್ಯದರ್ಪಣವೆಂದು ಹೆಸರವಾಸಿಯಾಗಿದೆ. ಯಾರು ಶಿವಯೋಗಿ ಸದಾ ಲಿಂಗಲೀಲಾ ವಿಲಾಸದಲ್ಲಿಯೇ ಇರುವುದರಿಂದ ಅವರ ಕೃಪೆಗೆ ಒಳಗಾಗುವುದು ಸಾಮಾನ್ಯ ಮಾತಲ್ಲ ಸದಾ ಅವರೊಟ್ಟಿಗೆ ನಿಂತು ತಂದೆಯಾಗಿ ತಾಯಿಯಾಗಿ ಬಂಧುವಾಗಿ ಅವರ ಮಂಚವನ್ನು ತೂಗಿದ ದಿನಗಳಿಗೆ ಲೆಕ್ಕವಿಲ್ಲ ಇಲ್ಲಿ ಅವರ ಮನೋನಿಗ್ರಹ ಸಂಯವನ ಶಕ್ತಿಯ ಪರೀಕ್ಷೆಗೊಳಗಾಗುತ್ತಿತ್ತು, ಈ ಎಲ್ಲಾ ರೀತಿಯ ಪರೀಕ್ಷೆಯಲ್ಲಿ ಪಾಸಾಗಿರುವದರಿಂದಲೇ ಮರಿದೇವರು ಶಿವಯೋಗಿಗಳ ನೆರಳಾಗಿ ಬಾಳಿದರು .ಶಿವಯೋಗಿಗಳ ಬಾಲಲೀಲೆ ಒಂದು ಪವಾಡ ಬಸಮ್ಮ ಎನ್ನುವ ಹೆಣ್ಣುಮಗಳು ಇವರಿಗೆ ತಾಯಿಯಾಗಿ ಚರಿತ್ರೆಯನ್ನು ಕೈವಲ್ಯದರ್ಪಣದಲ್ಲಿ ಹಾಡಿಕೊಂಡಿದ್ದಾರೆ,

ಶ್ರೀ ಶರಣು ಬಸವಾಂಬಿಕಮಾಲೆ ಗುರುಭಕ್ತಿ
ವಾಸನೆ ಸಮೇತ ಗುರುಕರ ಜಾತೆ ಲಿಂಗಪ್ರೇತೆ,
ಈಶ ನಮ್ಮ ತಂದೆಯ ಬಡತನವದೇ
ಸೂರವೆನಿನ್ನಿಂದ ಸಕಲ ಕಂಡೆ 123

ಈ ಪಲ್ಲವಿಯಲ್ಲಿ ಶಿವಮಾತೆಯಾದ ಬಸಮ್ಮನ ಉಲ್ಲೇಖವಿದೆ ಇದರಿಂದ ಶಿವಯೋಗಿಗಳ ಸಮಕಾಲೀನಳು ಅವರ ಚರಿತ್ರೆಯಲ್ಲಿ ಬೆರತು ಭಾಗ್ಯವಂತಳಾದಳು, ಆಕೆ ಗುರುಭಕ್ತಿಯಿಂದ ಲಿಂಗಕ್ಕೆ ಪ್ರಾಯವಾದಳು, ಮುಮ್ಮಡಿ ಕೃಷ್ಣರಾಜ ಒಡೆಯರ ಆದೇಶದದಂತೆ ಮೈಸೂರಿಗೆ ಹೋಗಬೇಕಾದ ಶಿವಯೋಗಿಗಳ ಜತೆಗೆ ಬಸಮ್ಮ ಹೋಗುತ್ತಾಳೆ. ಮರಳಿ ಬರುವಾಗ ಮಹಾರಾಜರು ಬೆಲೆಬಾಳುವ ಜರೆದ ಪೀತಾಂಬರವೊಂದನ್ನು ಕಾಣಿಕೆಯಾಗಿ ಕೊಡುತ್ತಾರೆ, ಅದನ್ನು ಶ್ರೀಮಂತರ ಮಹಿಳೆಯೊಬ್ಬಳಿಗೆ ಮಾರಿ ಬಂದ ಹಣದಲ್ಲಿ ಗವಿಮಠಕ್ಕೆ ಹೊಂದಿಕೊಂಡಂತೆ ಆರು ಅಂಕಣ ಚಾವಡಿ ವೊಂದನ್ನು ಕಟ್ಟಿಸಿದ್ದಾಳೆ, ಅದು ಇವತ್ತಿಗೂ ಬಸಮ್ಮನ ಬಂಕವೆಂದೇ ಗುರುತಿಸಲ್ಪಟ್ಟು ಬಂದ ಭಕ್ತರ ನೆಮ್ಮದಿಯ ತಾಣವಾಗಿ ಗುರುತಿಸಲ್ಪಟ್ಟು ನಿಂತಿರುವುದನ್ನು ಕಾಣಬಹುದು, ಬಸವಾಂಬಿಕೆಯ ಗದ್ದಿಗೆಯ ಗವಿಮಠದ ಎದುರಿಗೆ ಇರುವುದನ್ನು ಇವತ್ತಿಗೂ ಕಾಣಬಹುದು.

ಭಕ್ತಗಣಂಗಳಪ್ಪನವರು ಗವಿಮಠದ ಸಮೀಪದಲ್ಲಿಯೇ ಚಿಕ್ಕ ಅಂಗಡಿಯನ್ನಿಟ್ಟುಕೊಂಡವರು, ಶಿವಯೋಗಿಗಳ ಮೇಲೆ ಅಪಾರವಾದ ಭಕ್ತಿ, ಶ್ರದ್ಧೆಯನ್ನು ಹೊಂದಿ ಗುರುಲಿಂಗಜಂಗಮ ಸೇವೆಯಲ್ಲಿ ಸದಾ ಪೂಜ್ಯತೆಯನ್ನು ಹೊಂದಿರುವ ಸಂಪನ್ನ ಮನೆತನ ಇವರದಾಗಿತ್ತು, ಶಿವಯೋಗಿಗಳ ಪರಮಭಕ್ತರಾಗಿ ಸದಾ ಅವರ ಸೇವೆಯಲ್ಲಿ ತೊಡಗಿರುತ್ತಿದ್ದರು, ಮೇಲ್ಮಠವು ಸುಡಗಾಡಿನಲ್ಲಿರುವುದರಿಂದ ಶ್ರೀಗಳನ್ನು ಕಲ್ಮಠಕ್ಕೆ ಕರೆತಂದರು.

ಅದು ಸರಿಯಾಗಲಿಕ್ಕಿಲ್ಲವೆಂದು ಭಾವಿಸಿ ಊರೊಳಗೆ ಚಿಕ್ಕ ಕುಟೀರವೊಂದನ್ನು ತಮ್ಮ ಮನೆಯ ಜಾಗದಲ್ಲಿಯೇ ಕಟ್ಟಿಸಿದರು, ಮುಂದೆ ಏಕಾಂತದ ಶಿವಪೂಜೆಗಾಗಿ ಅನುಕೂಲವಾಗಲೆಂದು ಅಲ್ಲಿಯೇ ಗವಿಯೊಂದನ್ನು ಕಟ್ಟಿಸಿದರು . ಅದೇ ಇಂದು ಮೂರಂತಸ್ಥಿನ ಗವಿಮಠವಾಗಿ ಪ್ರಸಿದ್ಧಿ ಪಡೆದು ನಾಡಿನ ಸಕಲ ಭಕ್ತರ ಮನದಲ್ಲಿ ಉಳಿದುಕೊಂಡಿದೆ.

ಸಣ್ಣಬರಹದ ರಾಚೋಟಿ ಸ್ವಾಮಿಗಳು ಸಣ್ಣ ಅಕ್ಷರಗಳನ್ನು ಬರೆಯುವ ನಿಪುಣ ಕಲೆಯನ್ನು ಬಲ್ಲವರಾಗಿರುವುದರಿಂದ ಈ ಅಭಿಧಾನವಿದ್ದರಬೇಕು, ಲಿಂಗನಾಯಕನಹಳ್ಳಿಯ

ಶ್ರೀಚನ್ನವೀರ ಶಿವಯೋಗಿಗಳು ನಡೆಸುವ ಶಿವಾನುಭವ ಕೇಂದ್ರದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ ಹಿರಿಯ ಸಹಪಾಠಿಗಳಾಗಿ ಇದ್ದರು, ಶಾಂತವೀರ ಶಿವಯೋಗಿಗಳು ಲಿಂಗದೊಳಗಾದ ಮೇಲೆ ಚಿತ್ರದುರ್ಗ ಬ್ರಹನ್ಮಠದ ಅಧಿಕಾರಿಯಾಗಿ ಜಗದ್ಗುರುಗಳಾದರು ಶಾಂತವೀರ ಚರಮೂರ್ತಿಯಾಗಿ ಚಿತ್ರದುರ್ಗದಲ್ಲಿದ್ದಾಗ ಆಗಾಗ ದುರ್ಗದ ಆದೇಶಗಳನ್ನು ಹೊತ್ತು ಮುಳಗುಂದಕ್ಕೆ ಬರುತ್ತಿದ್ದರು ಜಗದ್ಗುರುಗಳಾಗಿ ದೊಡ್ಡ ಸ್ಥಳಗಳಲ್ಲಿ ಮೆರೆಯುತ್ತಿರುವುದರಿಂದ ಅವರನ್ನು ಕುರಿತು ಹೀಗೆ ಹೃದಯತುಂಬಿ ಹಾಡಿದ್ದಾರೆ.

ಜ್ಯೋತಿ ಬೆಳಗುತಿದೆ ಹೃದಯ

ಪೂತನ್ನದಾನಿ ರಾಜೋಟೀಶ ಉಭಯ॥ 81

ತಮ್ಮ ಸಹಪಾಠಿಗಳು ಚಿತ್ರದುರ್ಗ ಬ್ರಹನ್ಮಠದ ಚರಮೂರ್ತಿಗಳು ಆದ ರಾಚವಟ್ಟೀಶರನ್ನು ತಮ್ಮ ಹೃದಯ ಕಮಲದಲ್ಲಿ ಬೆಳಗುವ ಜ್ಯೋತಿ ಸ್ವರೂಪದಲ್ಲಿ ಕಂಡಿದ್ದಾರೆ, ನನ್ನ ಶ್ರೇಷ್ಠವಾದ ಹಸ್ತಮನಸೆಯ್ಯೊಯೊಳು ನಿತ್ಯವಾಗಿ ನಿಂತು ದುಷ್ಟ ಕಾಮಕ್ರೋಧಗಳನ್ನು ಹೋಗಲಾಡಿಸಿ ಕಾಪಾಡಿದ್ದಾರೆ, ಎಂದಿದ್ದಾರೆ.

ಹೀಗೆ ಅನೇಕರು ಅವರ ಒಡನಾಟದಲ್ಲಿದ್ದುದು ಅವರ ಹಾಡುಗಳಿಂದಲೇ ತಿಳಿದು ಬರುತ್ತದೆ. ಶಿವಯೋಗಿಗಳ ಎತ್ತರ-ಬಿತ್ತರ ಎಂತಹದಿತ್ತು ಎಂಬುದು ತಿಳಿದು ಬರುತ್ತದೆ.

ಮೈಸೂರು ಮಹಾರಾಜರು :-

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ 1794 ರಿಂದ 1868 ರಲ್ಲಿ ಇದರಲ್ಲಿ 1810 ರಿಂದ 1830 ವರೆಗೆ ಒಡೆಯರು ರಾಜ್ಯಭಾರ ಮಾಡಿದರು ಅವರು ವಾಸಿಯಾಗಲಾರದ ಬೇನೆಯೊಂದರಿಂದ ಬಳಲುತ್ತಿರುವಾಗ ಸಂಚಾರಾರ್ಥವಾಗಿ ಬಂದ ಶಿವಯೋಗಿಗಳು ತೀರ್ಥಪ್ರಸಾದದಿಂದ ರೋಗವಾಸಿಯಾಗುತ್ತದೆ, ಅದಕ್ಕಾಗಿ ಅವರಲ್ಲಿ ಅಪಾರವಾದ ಭಕ್ತಿಯನ್ನು ತಳೆದು ಅರಮನೆಯ ಸಕಲ ಮರ್ಯಾದೆಗಳಿಂದ ಸತ್ಕರಿಸುವ ಅಪೇಕ್ಷೆಯನ್ನು ಹೊತ್ತು ಅವರನ್ನು ಶೋಧಿಸುತ್ತಾರೆ, ಲೀಲಾ ಮೂರ್ತಿಗಳಾದ ಶಿವಯೋಗಿಗಳ ಸುಳಿವು ಸಿಗದೆ ಖಿನ್ನರಾಗುತ್ತಾರೆ.

ಒಮ್ಮೆ ಶಿವಯೋಗಿಗಳ ವೇಷಧಾರಿಯಾದ ಒಬ್ಬ ಭಿಕ್ಷುಕನು ಅರಮನೆಗೆ ಬರುತ್ತಾನೆ. ಅವನಿಗೆ ಕಾಣಿಕೆ ಕೊಡಲು ಹೋದಾಗ ನಿರಾಕರಿಸುತ್ತಾನೆ, ಅವನೇ ಮರುದಿನ ಬಂದು ಭಿಕ್ಷೆ ಕೇಳುತ್ತಾನೆ, ಆಶ್ಚರ್ಯಗೊಂಡ ಮಹಾರಾಜರು ನಿನ್ನೆ ಕೊಡಲು ಬಂದರೆ ನಿರಾಕರಿಸಿದಿ ಇಂದು ನೀನೇ ಬೇಡಲು ಬಂದಿರುವೆಯಲ್ಲ ಸಮಾಚಾರವೇನು? ಎಂದು ಕೇಳಿದಾಗ ಮಹಾರಾಜರೇ ನಾನು ನಿನ್ನೆ ಧನ-ಕನಕಾದಿಗಳನ್ನು ತೃಣ ಸಮಾನವಾಗಿ ಕಂಡು ವೈರಾಗ್ಯಮೂರ್ತಿಯ ವೇಷದಲ್ಲಿದ್ದೆನು, ಆಗ ಏನನ್ನು ಮುಟ್ಟಲಿಲ್ಲ ಅದಕ್ಕಾಗಿ ಇಂದು ಬಂದಿದ್ದೇನೆ ಎಂದು ವಿನಂತಿಸಿಕೊಳ್ಳುತ್ತಾರೆ ಹಾಗಾದರೆ ನೀ ವೇಷಹಾಕಿದ ವೈರಾಗ್ಯಮೂರ್ತಿಗಳು ಎಲ್ಲಿದ್ದಾರೆ ? ಎಂದಾಗ, ಅವರು ಮುಳಗುಂದದ ಗವಿಮಠದಲ್ಲಿದ್ದಾರೆ ಎಂದು ಹೇಳುತ್ತಾರೆ ಆಗ ಮಹಾರಾಜರು ಅರಮನೆಗೆ ಕಳಿಸಿಕೊಳ್ಳಬೇಕೆಂದು ಧೂತರನ್ನು ಅಟ್ಟುತ್ತಾರೆ, ಆಗ ಧೂತರು ಕೇಳಿದಾಗೊಮ್ಮೆ ನಾಳೆ ನಾಳೆ ಎಂದು ಮುಂದೂಡುತ್ತಾರೆ, ಕೊನೆಗೆ ಬಸಮ್ಮ ಹೇಳುವುದರಿಂದ ಹೋಗಲು ತಯಾರಾಗಿ ಬರುತ್ತಾರೆ ಆಗಿನ ಶಿವಯೋಗಿಗಳ ನಿಲುವು ಏನು ಎಂಬುದನ್ನು ಅವರ ಹಾಡುಗಳಲ್ಲಿ ಕಾಣಬಹುದು.

ನೀನೆಲ್ಲಿ ನಿನ್ನ ದೇಶೆಲ್ಲಿ ಕೇಳೆಲೆರಾಜ

ನಾನೆಲ್ಲೆ ನಾನಿರುವ ಸುಡಗಾಡ ಠಾವೆಲ್ಲಿ

ಏನಾಶಪಾಶದಲ್ಲಿ ಬಿಗಿದೆನ್ನ ರೆಟ್ಟದಯಾಕಳ್ಳರನು

ಕಟ್ಟುರೂಡಿ ॥ಪ॥ 134

ಶಿವಯೋಗಿಗಳು ಮೈಸೂರಿಗೆ ದಯಮಾಡಿಸಿದಾಗ ಹೀಗೆ ನುಡಿಯುತ್ತಾರೆ, ನಂತರ ಯಾವ ರಾಜಮರ್ಯಾದೆಯನ್ನು ಅಪೇಕ್ಷಿಸದೆ ಕುಂಬಳ ಬುರುಡೆಯನ್ನು ಮಾತ್ರ ತೆಗೆದುಕೊಂಡು ಬರುತ್ತಾರೆ, ಅದು ಇಂದಿಗೂ ಮುಳಗುಂದದ ಗವಿಮಠದಲ್ಲಿದೆ.

ಇದರಿಂದ ಗೊತ್ತಾಗುವದೇನೆಂದರೆ ಈ ವ್ಯವಹಾರದಿಂದ ಶಿವಯೋಗಿಗಳ ಮತ್ತು ಮಹಾರಾಜರ ಸ್ನೇಹ ಸಂಬಂಧವು ವಿಶ್ವಾಸಪೂರ್ವಕವಾಗಿ, ಭಕ್ತಿಪೂರ್ವಕವಾಗಿ ಬೆಳೆದಿರಬೇಕು, ಎಂಬುದು ಹಲವಾರು ಹಾಡುಗಳಿಂದ ವ್ಯಕ್ತವಾಗುತ್ತದೆ ಶಿವಯೋಗಿಗಳು ಸಹಪಾಠಿಗಳು ಶಿವಯೋಗಿಗಳ ನಿಷ್ಠಾವಂತ ಭಕ್ತರು ಆಗಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಅವರ ಕಾಲಕ್ಕೆ ಇನ್ನು ಹಲವಾರು ಜನರ ಉಲ್ಲೇಖವು ಬರುತ್ತದೆ.

ವೆಂಕಟಪತಿ ನಂಜಾಕ್ಕ ಇತ್ಯಾದಿ ಹೆಸರುಗಳು ಕೇಳಿ ಬರುವುದರಿಂದ ಅವರ ಜೀವನದ ಘಟನಾವಳಿಗಳಿಂದ ಅವರ ಬದುಕಿನ ಕಾಲಘಟ್ಟವನ್ನೇ ಗುರುತಿಸಲು ಸಾಧ್ಯವಾಗುತ್ತದೆ.

ಶಿವಯೋಗಿಗಳ ಆಂತರಿಕ ಬದುಕಿಗೆ ಕನ್ನಡಿಯಂತಿರುವ ಅವರ ಕೈವಲ್ಯದರ್ಪಣವು ಅವರ ಏಕೈಕ ಕೃತಿ ಇದಲ್ಲದೆ ಕೆಲವು ಷಟ್ಪದಿಗಳನ್ನು ಬರೆದಿದ್ದಾರೆ ಎಂಬ ಉಲ್ಲೇಖವು ಇದೆ ಆದರೆ ಷಟ್ಪದಿಗಳು ಈಗ ಉಪಲಬ್ಧವಿಲ್ಲ.

ಶಿವಯೋಗಿಗಳು ನಿತ್ಯ ಪೂಜೆಯಲ್ಲಿಯೇ ಕಾಲಕಳೆಯುತ್ತಾ ಜನ ಸಂಪರ್ಕದಿಂದ ದೂರವೇ ಇದ್ದು ಬಾಲಭಾವದಲ್ಲಿ ಬಾಲಕರೊಂದಿಗೆ ಹೆಚ್ಚು ಕಾಲಕಳೆಯುತ್ತಿದ್ದರು, ಶಿವಪೂಜಾ ಸಮಯದಲ್ಲಿ ಯಾರೂ ಅವರ ಜತೆಗೆ ಮಾತನಾಡಬಾರದು, ಅವರಾಗಿಯೇ ಮಾತನಾಡಿಸಿದರೆ ವರಪ್ರಸಾದವೆಂದು ಸ್ವೀಕರಿಸಬೇಕು.

ಅಂತರಂಗ–ಬಹಿರಂಗ ಒಂದಾಗದ ನರ ನಿರ್ಮಿತ ಪಟ್ಟಾಧಿಕಾರಿಗಳು ಸಮಾಜದ ಪ್ರತಿಷ್ಠೆಗಾಗಿ ಮನಸೋತ ಕೆಲವು ಸ್ವಾಮಿಗಳ ಪ್ರವೃತ್ತಿ ಹೀಗಿದೆ, ಕುದುರೆ ಸತ್ತಿಗೆಯವರ ಕಂಡರೆ, ಹೊರಳಿ ಬಿದ್ದು ಕಾಲಹಿಡಿವರು, ಬಡ ಭಕ್ತರು ಬಂದರೆ ಎಡೆಯಿಲ್ಲ ಅತ್ತ ಸರಿಯೆಂಬರು ಎನ್ನುತ್ತಾರೆ. ರಾಜವೈಭವದಲ್ಲಿ ಬಂದ ಶ್ರೀಮಂತರನ್ನು ವಿಶೇಷ ಮನ್ನಣೆಯಿಂದ ಸತ್ಕರಿಸುವ, ಬಡಭಕ್ತರು ಬಂದರೆ ಹೊರಳಿಯೂ ನೋಡದ ರೀತಿಯಲ್ಲಿ ಕೆಲವು ಮಠಮಾನ್ಯಗಳ ಪದ್ಧತಿಯಾಗಿದೆ.

ಚಿತ್ರದುರ್ಗದ ಬ್ರಹನ್ಮಠದ ಸ್ವಾಮಿಗಳು ಸಹಿತ ತಾಸಗಾಂವ ಸರಕಾರದ ಕೃಪಾಕಟಾಕ್ಷಕ್ಕೊಳಗಾಗಿ ಬಾಲಲೀಲಾ ಮಹಾಂತ ಶಿವಯೋಗಿಗಳನ್ನು ನಿರ್ಲಕ್ಷಿಸಿದ್ದು ಅವರ ಅನೇಕ ಹಾಡುಗಳಲ್ಲಿ ಅದಕ್ಕೆ ನಿರ್ಭಿಡೆಯಿಂದ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಿದ್ದು ಕಂಡು ಬರುತ್ತದೆ. ತಾವು ಕಂಡುಂಡ ಅನುಭವಗಳನ್ನು ಸ್ವರವಚನಗಳ ರೂಪದಲ್ಲಿ ಕೈವಲ್ಯ ದರ್ಪಣದಲ್ಲಿ ಹಾಕಿದ್ದಾರೆ.

ಶಿವಯೋಗಿಗಳು ಎಲ್ಲ ಲೌಕಿಕ ಬಾದೆಗಳಿಂದ ಬೇಸತ್ತು ನಿರಸನಗೊಂಡು, ಲೌಕಿಕ ವ್ಯವಹಾರಗಳಿಂದ ಬಹುದೂರದಲ್ಲಿ ನಿಂತು ಶಿವಯೋಗ ಸಿದ್ದಿಯತ್ತ ಸಾಗುತ್ತಾರೆ ಕೇವಲ 36 ವರ್ಷಗಳ ಕಾಲ ತಮ್ಮ ಬದುಕಿನಿಂದ ಸುತ್ತಮುತ್ತಲಿನ ಭಕ್ತರಿಗೆ ಬೆಳಕಿನ ದಾರಿತೋರಿ ಸನ್ 1859 ರಲ್ಲಿ ಶಾಲಿವಾಹನ ಶಕ 1780 ಸಿದ್ದಾರ್ಥ ಸಂವತ್ಸರದ ಮಾರ್ಗಶುದ್ಧಿ ತ್ರಯೋದಿಗೆ ಸೋಮವಾರದಂದು ಲಿಂಗ್ಯಕ್ಯರಾದರು (ಜನನ – 1823 ಲಿಂಗ್ಯಕ್ಯೆ – 1859)

ಶಿವಯೋಗದ ತುತ್ತ ತುದಿಗೇರಿದ ಪರಮ ಶಿವಜ್ಞಾನಾನಂದ ಶಿವಯೋಗಿಗಳು ತಮ್ಮ ಘನ ವ್ಯಕ್ತಿತ್ವದೊಂದಿಗೆ, ಜನಸಾಮಾನ್ಯರ ಜೊತೆ ಬೆರತು ಶಿವಯೋಗಿಗಳಲ್ಲಿಯೇ ಭಿನ್ನವಾಗಿ ತೋರಿರುವುದಿರಂದ ಅವರ ಬದುಕಿನ ಹಲವಾರು ಘಟನಾವಳಿಗಳು ಪವಾಡ ಸದೃಶ್ಯ ಹಂತಕ್ಕೇರಿ ಜನಮನದ ನಾಲಗೆಯಲ್ಲಿ ನಿಂತಿವೆ.

ಶಿವಯೋಗಿಗಳ ದಿವ್ಯ ಪ್ರಭಾವದ ಪ್ರಸಾರ ಕಾರ್ಯವನ್ನು ನೆರವೇರಿಸದ ಇನ್ನೊಂದು ಮಹತ್ವದ ಗ್ರಂಥವೆಂದರೆ ಪಂಡಿತ ಕವಿರತ್ನ ಚನ್ನಕವಿಗಳು ಬರೆದ ಶ್ರೀಬಾಲಲೀಲಾ ಮಹಾಂತೇಶ್ವರ ಪುರಾಣ ಮುಖ್ಯವಾದುದು, ಶ್ರಾವಣಮಾಸದಲ್ಲಿ ನಾಡಿನಹಲವಾರು ಕಡೆಗೆ ಶ್ರೀಗಳ ಪುರಾಣ ವಾಚನ ನಡೆಯುವುದರಿಂದ ಶ್ರೀಗಳ ಪ್ರಸಾರ ಇವತ್ತಿಗೂ ಬೇರೆ ಬೇರೆ ಪ್ರದೇಶದಲ್ಲಿ ಆಗುತ್ತಿರುವುದನ್ನು ಗಮನಿಸಬೇಕು.

ಸಮಾಜದಲ್ಲಿ ನಡೆಯುವ ಪ್ರತಿಯೊಂದು ಸಾರ್ವತ್ರಿಕ ಕೆಲಸ ಕಾರ್ಯಗಳೆಲ್ಲವು ಒಂದಿಲ್ಲ ಒಂದು ರೂಪದಲ್ಲಿ ಮಾಧ್ಯಮಗಳಾಗಿಯೇ ಕೆಲಸ ಮಾಡುತ್ತವೆ, ಭಜನೆ, ಜಾತ್ರೆ, ಹಬ್ಬ ಹರಿದಿನ, ಜಯಂತಿ, ಆಚರಣೆಯ ಮೂಲಕ ಶಿವಯೋಗಿಗಳ ಪ್ರಸಾರ ಕೆಲಸವು ಸದಾ ನಡದೇ ಇರುತ್ತದೆ.

ಭಜನೆ :– ಇವತ್ತಿಗೂ ಹಳ್ಳಿಗಳ ಹಲವು ಜನ ನಿರಕ್ಷರಿಗಳಿಗೆ ಶಿವಸ್ತುತಿಗೈಯಲು ಭಜನೆ ಒಳ್ಳೆಯ ಮಾಧ್ಯಮ. ನುರಿತ ಹಾಡುಗಾರರು ಸಂಘಗಳನ್ನು ಕಟ್ಟಿಕೊಂಡು ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಭಜನಾ ಹಾಡುಗಳ ಪ್ರದರ್ಶನವನ್ನು ಮಾಡುತ್ತಾರೆ. ಈ ಮೂಲಕ ಶಿವಯೋಗಿಗಳು ಬರೆದ ಭಜನಾ ಹಾಡುಗಳನ್ನು ಹಾಡುತ್ತಾರೆ.

ಧಾರವಾಡದ ಮೃತ್ಯುಂಜಯ ಸ್ವಾಮಿಗಳು ಕೆಲವು ಕಾಲ ಮುಳಗುಂದದ ಪೀಠಾಧಿಕಾರವನ್ನು ವಹಿಸಿಕೊಂಡಿದ್ದರು ಬಾಲಲೀಲಾ ಮಹಾಂತ ಶಿವಯೋಗಿಗಳ ಶತಮಾನೋತ್ಸವನ್ನು ಹಮ್ಮಿಕೊಂಡು ಧಾರವಾಡದ ಮುರಘಾಮಠದ ಒಳಾವರಣದಲ್ಲಿ "ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಶ್ವರ ಗ್ರಂಥಮಾಲೆ" ಯನ್ನು ಸ್ಥಾಪಿಸಿ ಉತ್ತಮ ಗ್ರಂಥಗಳನ್ನು ಪ್ರಕಟಣೆ ಮಾಡುವ ಸತ್‌ಪರಂಪರೆಯೊಂದನ್ನು ಹಾಕಿದರು. [5]

ಹೀಗೆ ಶಿವಯೋಗಿಗಳ ಸಾಹಿತ್ಯದ ಪ್ರಸಾರ ಹಲವೃಂದದಿಂದ ನಡೆದು ಇವತ್ತಿಗೂ ಮರೆಯಾಗದೇ ಉಳಿದಿರುವುದೇ ಅದರ ವಿಶೇಷತೆಯಾಗಿದೆ ನಾಡಿನ ವಿದ್ವಾಂಸರಿಂದ ಲೇಖನ ಬರೆಸಿ ತಂದು "ವೈರಾಗ್ಯದಲರು" (1959ರಲ್ಲಿ) ಸ್ಮರಣ ಸಂಚಿಕೆಯನ್ನು ಮೊಟ್ಟಮೊದಲು ಈ ಗ್ರಂಥಮಾಲೆಯಿಂದಲೇ ಪ್ರಕಟಮಾಡಿದರು, ನಂತರ ಮುಳಗುಂದ ಗವಿಮಠದಿಂದ 'ಮಹಾಂತ ಪ್ರಕಾಶನ' ಹೆಸರಿನಲ್ಲಿ ಸದ್ಯದ ಶ್ರೀಮಲ್ಲಿಕಾರ್ಜುನ ಮಹಾಸ್ವಾಮಿಗಳು ಅನೇಕ ಗ್ರಂಥಗಳನ್ನು ಹೊರತಂದಿದ್ದಾರೆ ಹೀಗೆ ಮುಳಗುಂದ ಗವಿಮಠವು ಒಂದು ಜಾಗ್ರತ ಸ್ಥಳವಾಗಿ ನಿಂತು ಬಂದ ಭಕ್ತರಿಗೂ ಜ್ಞಾನ ದಾಸೋಹವನ್ನು ಮಾಡುತ್ತಾ ನಾಡಿನುದ್ದಗಲಕ್ಕೂ ಕೀರ್ತಿ ಪಸರಿಸಿದೆ.

ಶ್ರೀಗಳು ಬಿಟ್ಟು ಹೋದ ಧಾರ್ಮಿಕ ವಿಚಾರಗಳಲ್ಲಿ ಅಪಾರವಾದ ಶ್ರದ್ದೆಯಿಟ್ಟುಕೊಂಡು ಅದರ ಬಲದಿಂದಲೇ ಅಪಾರ ಭಕ್ತರನ್ನು ಪಡೆದುಕೊಂಡ ನೆರೆಯ ಹಳ್ಳಿಯ " ಗುದ್ದೆಸ್ವಾಮಿ" ಎಂಬ ಸಂತರೊಬ್ಬರು ಕೂಡಿಸಿದ ವಂತಿಗೆ ಹಣದಿಂದ ರಥವನ್ನು ತಯಾರುಮಾಡಿ ಶತಮಾನೋತ್ಸವ ಕಾಲಕ್ಕೆ ರಥೋತ್ಸವವನ್ನು ಜರುಗುವಂತೆ ಮಾಡಿದರು. ಹಾಗೆಯೇ ಪ್ರಾರಂಭವಾದ ಈ ಜಾತ್ರೆ ಮಹೋತ್ಸವವು ಅವರ ಪುಣ್ಯತಿಥಿಯ ದಿನದಂದು ಜರುಗುತ್ತದೆ. ಪ್ರತಿ ವರ್ಷವು ಫೆಬ್ರವರಿಯಲ್ಲಿ ಮಾಘಶುದ್ಧತ್ರಯೋದಶಿ ಇಲ್ಲವೆ ಅವರಾತ್ರಿ ಅಮವಾಸೆ ಆದ 13 ದಿನಕ್ಕೆ ಶಿವಯೋಗಿಗಳ ಜಾತ್ರೆಯು ನಡೆಯುತ್ತದೆ.

ಮೂರು ದಿನದ ಈ ಜಾತ್ರೆಯಲ್ಲಿ ಮೊದಲನೆಯ ದಿನ ಲಘುರಥೋತ್ಸವ ಅಂದರೆ ಪಲ್ಲಕ್ಕಿಯಲ್ಲಿ ಶಿವಯೋಗಿಗಳ ಭಾವಚಿತ್ರ ಮೆರವಣಿಗೆ. ಶಿವಯೋಗಿಗಳ ಪ್ರಭಾವಕ್ಕೆ ಒಳಗಾಗಿ ಅನೇಕ ಜಾನಪದ ಹಾಡುಗಳು ಹುಟ್ಟಿಕೊಂಡವು ಅವುಗಳನ್ನು ಶಿವಯೋಗಿಗಳ ತೊಟ್ಟಿಲು ಹಾಕುವ ವೇಳೆಯಲ್ಲಿ ಹೆಂಗಳೆಯರಿಂದ ಈ ಜೋಗುಳ ಪದಗಳು ಕೇಳಿಬರುತ್ತವೆ.

ಜೋಗುಳ ಪದ

ಜೋ ಜೋ ಜೋ ಜೋ ॥ ಭುವನ ಪಾವನ ಮೂರ್ತಿ ಜೋ ।
ಶಿವನ ಶಿಶುವೆ ಕೀರ್ತಿ ಜೋ ॥
ಕವಿದ ಕತ್ತಲೆ ಕಳೆಯ ಬಂದ ಜ್ಯೋತಿ ಜೋ ಪ್ರೀತಿ ಜೋ ॥
ಇಳೆಯ ಧರ್ಮ ಬೆಳಗು ಬಂದ । ಹೊಳೆವ ಜಗದ ಜ್ಯೋತಿ ಜೋ॥
ನಂದ ಅಂದದ ರೂಪ ಜೋ। ಚೆಂದ ಚೆಲುವ ದೀಪ ಜೋ॥
ಮಂದಹಾಸ ಮಧುರ ನಗೆಯ। ಕಂದ ಬಸಮ್ಮ ತಾಯಿ ಜೋ॥
ಶಾಂತ ಶಕ್ತಿ ಶಶಿಯೇ ಜೋ। ಕಾಂತಿ ಭಾಸುರ ವಿಜಯ ಜೋ॥
ಶಾಂತಿ ಕಾಂತಿ ತುಂಬಿ ಬಂದ। ಶಾಂತ ಮನದ ಶಿವಯೋಗಿ ಜೋ॥

ಜೋ ಜೋ ಶರಣ ಸತಿಯರು ಕೂಡಿ
ಜೊಯೆಂದು ಪಾಡಿರಿ ನಲಿನಲಿದಾಡಿ
ಶರಣ ಬಸಮ್ಮನ ಮಗನ ಮುದ್ದಾಡಿ
ಹಿಂಗ ಜೊಯೊಂದು ಪಾಡಿರಿ ಮಹಾಂತನ
ಕೊಂಡಾಂಡಿ ಜೋ ಜೋ ॥
ಜೋ ಜೋ ಎನ್ನ ಶಿವನಕಂದ ಜೋ ಜೋ

2ನೇ ದಿನ ಸ್ಮರಣೋತ್ಸವ – ಗಡ್ಡಿ ತೇರುನೊಳಗೆ (ದಪ್ಪಗಾಲಿ) ಶಿವಯೋಗಿಗಳು ಲಿಂಗೈಕ್ಯರಾದ ದಿವಸವೆಂದು ಮೆರವಣಿಗೆ ಮಾಡುತ್ತಾರೆ. 3ನೇ ದಿನ ಕಡಬಿನಕಾಳಗ – ಇಲ್ಲಿ ಮಠದ ಅಧಿಪತಿಗಳು ಕುದುರೆಏರಿ ಬೆಲ್ಲದ ಅಚ್ಚು ತೂರುವುದು.

ಹೀಗೆ ಈ ಜಾತ್ರಾ ಮಹೋತ್ಸವ ಘಟಸ್ಥಲ ಧ್ವಜಾರೋಹಣದಿಂದ ಪ್ರಾರಂಭವಾಗಿ ಪ್ರತಿ ದಿವಸವು ನಾಡಿನ ಹಲವಾರು ವಿದ್ವಾಂಸರನ್ನು ಕರೆಸಿಕೊಂಡು ಜ್ಞಾನದಾಸೋಹವನ್ನು ಅನ್ನ ದಾಸೋಹವನ್ನು ಮಾಡುತ್ತಾರೆ. ಈ ದಾಸೋಹದಲ್ಲಿ ಅತ್ಯಂತ ಭಕ್ತಿಯಿಂದ ಹಲವಾರು ಕಡೆಯಿಂದ ಭಕ್ತರು ಬಂದು ಪುಣ್ಯಭಾಗಿಗಳಾಗುತ್ತಾರೆ.

ಮುಂದಿನ ಅಧ್ಯಾಯದಲ್ಲಿ ಕೈವಲ್ಯ ದರ್ಪಣದ ಪದಗಳನ್ನು ಕುರಿತು ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಅಡಿ ಟಿಪ್ಪಣಿಗಳು

1. ಪ್ರೊ.ಶಿ.ಶಿ. ಬಸವನಾಳ (ಸಂ)– ಬಾಲಲೀಲಾ ಮಹಾಂತ ಶಿವಯೋಗಿಗಳ
ಕೈವಲ್ಯ ದರ್ಪಣ ಪ್ರಸ್ತಾವನೆ, ಶಿವಯೋಗಿಶ್ವರ,
ಗ್ರಂಥಮಾಲೆ 1952,ಮುರಘಾಮಠ ಧಾರವಾಡ.

2. ಪ್ರೊ.ಶಿ.ಶಿ. ಬಸವನಾಳ (ಸಂ)– ಕೈವಲ್ಯ ದರ್ಪಣ, ಐದನೇ ಮುದ್ರಣ
ಮುರಘಾಮಠ,1990
ಧಾರವಾಡ.

3. ಡಾ. ತಿಪ್ಪೆರುದ್ರಸ್ವಾಮಿ – ಕನ್ನಡ ವಿಶ್ವಕೋಶ ಸಂಪುಟ 12 ಪುಟ 62,
ಮೈಸೂರು ವಿ.ವಿ.

4. ಡಾ.ರಾ.ಯ.ಧಾರವಾಡಕರ – ಹೊಸಗನ್ನಡ ಸಾಹಿತ್ಯದ ಉದಯಕಾಲ
ಬಾಲಲೀಲಾ ಮಹಾಂತ ಶಿವಯೋಗಿಗಳು
ಪುಟ 133, 1975

5 ಪ್ರೊ. ಬಿ.ಸಿ. ಹದ್ಲಿ – ಬಾಲಲೀಲಾ ಮಹಾಂತ ಶಿವಯೋಗಿಗಳು
ಪುಟ 33–48, 1996

ಅಧ್ಯಾಯ ೪

ಕೈವಲ್ಯ ದರ್ಪಣದ ಅಂತರಂಗ

ಅಧ್ಯಾಯ – 4
ಕೈವಲ್ಯ ದರ್ಪಣದ ಅಂತರಂಗ

" ಶ್ರೀ ಮತ್ಪ್ರಣವ ಸ್ವರೂಪ ಬಾಲಲೀಲಾ
ಮಹಾಂತ ಶಿವಯೋಗಿಗಳಿಂದ ವಿರಚಿತಮಾದ
'ಕೈವಲ್ಯ ದರ್ಪಣವು ಸಮಾಪ್ತವಾದುದು"

॥ ಓಂ ಶಾಂತಿ ॥

ಎಂದು 'ಕೈವಲ್ಯ ದರ್ಪಣ' ಗ್ರಂಥ ಮುಕ್ತಾಯದಲ್ಲಿ ಇರುವುದರಿಂದ ಈ ಗ್ರಂಥವು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ರಚಿಸಿದ್ದಾರೆ ಎಂಬುವುದು ಸ್ಪಷ್ಟವಾಗುತ್ತದೆ. ಉಳಿದ ಯಾವುದೇ ಅವರ ಜೀವನೇತಿಹಾಸವನ್ನು ಹೇಳುವ ಸಂಗತಿಯನ್ನು ಎಲ್ಲಿಯೂ ಗ್ರಂಥಕರ್ತೃಗಳು ಹೇಳಿಕೊಂಡಿಲ್ಲ. ಪ್ರಾರಂಭದಲ್ಲಿ ಗುರುಸ್ತುತಿಯಿಂದ ಆರಂಭಗೊಂಡಿದೆ.

ಮೊದಲು ಘನಮಠದಾರ್ಯರ ಹಾಡುಗಳೊಂದಿಗೆ ಸೇರಿಸಿ ಈ ಕೈವಲ್ಯ ದರ್ಪಣವನ್ನು ಪ್ರಕಟಿಸಿಲಾಗಿದೆ ನಂತರ ಅದನ್ನು ಪರಿಷ್ಕರಣಗೊಳಿಸಿ 1952 ರಲ್ಲಿ ಪ್ರೊ.ಶಿ.ಶಿ. ಬಸವನಾಳರ ಸಂಪಾದಕತ್ವದಲ್ಲಿ ಮುನ್ನುಡಿಯೊಂದಿಗೆ ಅಚ್ಚುಕಟ್ಟಾಗಿ ಧಾರವಾಡದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯಿಂದ ಪ್ರಕಟಿಸಲಾಯಿತು.[1]

ಶಿವಯೋಗಿಗಳ ಕೈವಲ್ಯ ದರ್ಪಣವು ಕೈವಲ್ಯ ಪರಂಪರೆಯಲ್ಲಿ ಒಂದು ಅಪೂರ್ವ ಗ್ರಂಥ, ಹೆಸರೇ ಸೂಚಿಸುವಂತೆ ಕೈವಲ್ಯದರ್ಪಣವೇ ಆಗಿದೆ. ಕೈವಲ್ಯ ಪದ್ಧತಿಯ ನಂತರ ಕೈವಲ್ಯಕಲ್ಪವಲ್ಲ ಎಂದು ಕರೆಯುತ್ತಾರೆ. "ಕೈವಲ್ಯಸ್ಯ ಬಾವಃ ಕೈವಲ್ಯಂ" ಎಂದು ಇದೆ, ಶರಣ ಸಾಹಿತ್ಯದಲ್ಲಿ "ಲಿಂಗಾಂಗ ಸಾಮರಸ್ಯ" ಎಂತಲೂ ಕರೆಯುತ್ತಾರೆ. ಅಮರಕೋಶದಲ್ಲಿ "ಕೈವಲ್ಯೋಪನಿಷತ್" ಎಂಬ ಉಪನಿಷತ್ ಇದೆ. ಇದರಿಂದ ಉಪನಿಷತ್‌ದಷ್ಟು ಪ್ರಾಚೀನತೆ ಈ ಕೈವಲ್ಯಪದಕ್ಕಿದೆ. ಆದುದರಿಂದ ಕೈವಲ್ಯ ಸಾಹಿತ್ಯ ನಿಜಗುಣ ಶಿವಯೋಗಿಗಳಿಂತ ಮೊದಲೇ ಇದ್ದುದು ಸ್ಪಷ್ಟವಾಗುತ್ತದೆ. ಭಾಗವತ ಸಂಪ್ರದಾಯದಲ್ಲಿ 'ವ್ಯಾಸಮ್ನಾಯೆ' ಇದ್ದಂತೆ " ಕೈವಲ್ಯಾನ್ವಯ" ವೀರಶೈವರಲ್ಲಿ ಬಳಕೆಯಾಯಿತು.

ಜೈನರಲ್ಲಿ ಕೈವಲ್ಯತ್ವ ಇದ್ದಂತೆ ವೀರಶೈವರಲ್ಲಿ ಮೋಕ್ಷದ ಮಾರ್ಗವಾಗಿದೆ. ಜೀವತ್ವದಿಂದ ಪಾರಾಗಿ ಶಿವತ್ವವನ್ನು ಕೈಗೆಟಿಕಿಸುವ ಅನುಭವವೇ ಕೈವಲ್ಯನುಭವ. ಇಂತಹ ಅನುಭವಗಳಿಂದ ರೂಪಗೊಂಡ ಸಾಹಿತ್ಯವೇ ಕೈವಲ್ಯಸಾಹಿತ್ಯ. ಸ್ವರವಚನ, ತತ್ವಪದ, ಅನುಭಾವಪದ, ಹೀಗೆ ಪರ್ಯಾಯ ಪದಗಳಿಂದ ಜನಸಾಮಾನ್ಯನಿಗೂ ಈ ಕೈವಲ್ಯ ಸಾಹಿತ್ಯ ಪರಿಚಯವಾಗಿದೆ. ಹರಿದಾಸರು ತಮ್ಮ ಅನುಭಾವದ ಪದಗಳನ್ನು ಭಕ್ತಿರಸಧಾರೆ ಮೂಲಕ ಹರಿಸಿ ತಮ್ಮ ಗುರಿಯನ್ನು ಮುಟ್ಟಿದ್ದರು. ಈ ಕೈವಲ್ಯ ಎಂದರೆ ಮೋಕ್ಷ, ಶಾಶ್ವತ ಸುಖ, ಇದನ್ನು ಮುಕ್ತಿ, ಕೈವಲ್ಯ, ನಿರ್ವಾಣ ಶ್ರೇಯಸ್ಸು, ನಿಶ್ಶ್ರೇಯಸ್ ಅಮೃತಮೋಕ್ಷ ಮತ್ತು ಅಪವರ್ಗ ಎಂಬ 8 ಶಬ್ದಗಳಿಂದ ಗುರುತಿಸಲಾಗಿದೆ. [7]

ಕೈವಲ್ಯ ದರ್ಪಣ 142 ಹಾಡುಗಳ ಸಂಕಲನವಾಗಿದೆ. ಕೈವಲ್ಯ ಸಾಹಿತ್ಯವು ದರ್ಪಣ, ಪದ್ಧತಿ, ಕಲ್ಪವಲ್ಲರಿ ಎಂಬ ಹೆಸರುಗಳಲ್ಲಿ ಬರೆಯಲಾಗಿದೆ. ಕೈವಲ್ಯ ದರ್ಪಣವು ಸಮಾಜ ಮಾನವೀಯ ಮೌಲ್ಯ ಮತ್ತು ಆಧ್ಯಾತ್ಮಿಕ ವಸ್ತುವನ್ನಾಗಿಟ್ಟುಕೊಂಡು ದೇಸಿಯತೆಯ ಸತ್ವವನ್ನು ಮೈಗೂಡಿಸಿಕೊಂಡು ಛಂದಸ್ಸಿನ ದೃಷ್ಟಿಯಲ್ಲಿ ವಿವಿಧತೆಯನ್ನು ಪಡೆಯುವುದರೊಂದಿಗೆ ಜಾನಪದ ಬಳಸಿಕೊಂಡಿರುವುದು ವಿಶೇಷವಾಗಿದೆ, ಸಾಹಿತ್ಯ, ತತ್ವ ಸಂಗೀತದ ಸಂಗಮ ಈ ಗ್ರಂಥ, ಮಾರ್ಗದೇಸಿಯ ಎರಡನ್ನು ಕವಿ ಬಳಸಿಕೊಂಡಿದ್ದಾರೆ. ತನ್ನ ಕಾಲದ ಸಂಪರ್ಕಕ್ಕೆ ಬಂದ ಗುರುಗಳ ವ್ಯಕ್ತಿಗಳ ರಾಜರ ನಿಲುವುಗಳನ್ನು ಶಿವಶರಣರ ಸ್ತುತಿಗಳನ್ನು ವಿವರಿಸುತ್ತಾ ಆತ್ಮ ಸಾಕ್ಷಾತ್ಕಾರದ ಕಡೆಗೆ ಹೊರಟಿದ್ದಾರೆ ವ್ಯಕ್ತಿ ಸಾಧನೆಯ ಜೊತೆಗೆ ಅಂದು ವಿರಸ ರೂಪದಲ್ಲಿದ್ದ ನಿಲುವುಗಳನ್ನು ಕಿತ್ತಿ ಹಾಕುತ್ತ ಸಮಯ ಭೇದಗಳನ್ನು ಬಿಡಿಸಿ ಶಿವಸಮಯಗಳನ್ನು ಬಳಸಿಕೊಂಡು ಅವರವರ ಭಕ್ತಿಗೆ ಭಾವಕ್ಕೆ ವ್ಯಾಪಕವಾಗಿ ಹಬ್ಬಿನಿಂತಿರುವ ಹಲವಾರು ನಿಲುವುಗಳನ್ನು ನಾವು ಇಲ್ಲಿ ಕಾಣುತ್ತೇವೆ.

ನಿಜಗುಣರ ಹಾಡುಗಳು ಬಹಳ ಶಾಸ್ತ್ರೀಯತೆಯ ಸ್ಥೂಲ ಕಟ್ಟುಗಳಲ್ಲಿ ಪಸರಿಸಿದ್ದು ಕಂಡು ಬರುತ್ತದೆ. ಇದರಿಂದಲೇ ಸರ್ಪಭೂಷಣರ 'ಕೈವಲ್ಯ ಕಲ್ಪವಲ್ಲರಿ' ಕೈವಲ್ಯದ ಬಳ್ಳಿಯಾಗಿ ಇಡೀ ವೀರಶೈವ ಸಮಾಜದ ಆಗುಹೋಗುಗಳನ್ನು ಆಚಾರ ವಿಚಾರಗಳನ್ನು ರೂಢಿಗೊಳಿಸುತ್ತಾ ವ್ಯಕ್ತಿ ತನ್ನ ಸಾಧನೆಯಲ್ಲಿರುವಾಗ ಆತನ ಭಕ್ತಿ ಬಳ್ಳಿಯಂತೆ ಬೆಳೆದು ಆಶ್ರಯಿಸಿದ ಜೀವ ಉದ್ದಾರವನ್ನು ಮಾಡುತ್ತದೆ. ಹೀಗೆ ಪಸರಿಸಿ ಅಚ್ಚ ಹಸಿರಾಗಿ ನಿಂತ ಬಳ್ಳಿಯಲ್ಲಿ ಕಾಣಿಸಿಕೊಳ್ಳುವ ಫಲವೇ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯ ದರ್ಪಣ ವೆಂದು ಹೇಳಬಹುದು.

ಶಿವಯೋಗದ ಹಣ್ಣು ತಕ್ಷಣ ತಿಂದು ಸಮಾಧಾನ ಪಟ್ಟುಕೊಳ್ಳುವ ರೀತಿಯಲ್ಲಿ ಅದು ಅತ್ಯಂತ ಸರಳವಾಗಿದೆ, ಬಸವಾದಿ ಶಿವಶರಣರಂತೆ ಕೇವಲದ ಬದುಕನ್ನು ಹಸನಗೊಳಿಸುವ ಸಮಾಜ ಸುಧಾರಣೆಯೊಂದೇ ಅವರ ಹಾಡುಗಳಲ್ಲಿ ಸ್ಥಾಯಿಯಾಗಿದೆ ತಮ್ಮ ದರ್ಶನಕ್ಕೆ ಬಂದ ಅನೇಕ ಪಾಮರ ಜನರನ್ನ ಕಂಡ ಅವರ ರೀತಿ ನೀತಿ ಅನುಸರಿಸಿ ಅವರನ್ನು ಮಾನಸಿಕವಾಗಿ ಪರಿವರ್ತನೆ ಮಾಡಿ ಸನ್ಮಾರ್ಗಕ್ಕೆ ಅಚ್ಚುವುದೇ ಅವರ ಮುಖ್ಯ ಗುರಿಯಾಗಿದೆ.

ಕೈವಲ್ಯ ದರ್ಪಣದ ಹಾಡುಗಳೆಲ್ಲವು ವಸ್ತುನಿಷ್ಟವಾಗಿವೆ. ಶಿವಯೋಗಿಗಳ ಬದುಕು ಅವರ ಹಾಡುಗಳಿಗೆ ಪ್ರೇರಕ ಸಂಗತಿಯಾಗಿರುವುದರಿಂದ ಅವರ ಪದಗಳಲ್ಲಿ ಶಿವಯೋಗಿಗಳ ನೈಜ ಚಿತ್ರಣವೇ ಕಾಣಿಸುತ್ತದೆ. ಒಟ್ಟಿನಲ್ಲಿ ಅವರ ಬದುಕು ಬರಹವಾಗಿ ನಿಂತಿರುವುದರಿಂದ ಅವರ ಹಾಡುಗಳ ಅಭ್ಯಾಸವೇ ಅವರ ಅಭ್ಯಾಸವೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ ಹೀಗಿರುವ ಹಾಡುಗಳನ್ನು ಅಭ್ಯಾಸದ ಅನುಕೂಲಕ್ಕೆ ತಕ್ಕಂತೆ ವಸ್ತು ಪ್ರಾಧ್ಯಾನತೆಯಲ್ಲಿ ಅವುಗಳ ಅಭ್ಯಾಸವನ್ನು ಮಾಡಬಹುದು.

ಶಿವಯೋಗಿಗಳು ಲಿಂಗನಾಯಕನ ಹಳ್ಳಿಯಲ್ಲಿ ಯೋಗಾಭ್ಯಾಸವನ್ನು ಕೈಕೊಂಡಾಗಿನಿಂದಲೂ ತಾವು ಅನುಭವಿಸಿದ ಮಾನಸಿಕ ತಳಮಳ ಗೊಂದಲ ಇತ್ಯಾದಿಗಳನ್ನು ತಮ್ಮ ಪದಗಳ ಮೂಲಕ ಹೊರಹಾಕಿದ್ದಾರೆ, ಸಾಧಕನ ಭಕ್ತಸ್ಥಿತಿಯಲ್ಲಿ ಶಿವೋಪಾತನೆಯನ್ನು ಕೈಕೊಂಡು ಅಷ್ಟಾವರಣಗಲ್ಲಿ ನಿಂತುಪಂಚ ಆಚಾರಗಳನ್ನು ನಿಷ್ಠೆಯಿಂದ ಆಚರಿಸಿ ಷಟಸ್ಥಲ ಮಾರ್ಗವಾಗಿ ಸಾಗಿ ಐಕ್ಯಸ್ಥಿತಿಗೆ ಏರಬೇಕಾಗುತ್ತದೆ. ಮಾರ್ಗ ಮಧ್ಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸುತ್ತಾನೆ. ಆ ತೊಂದರೆಗಳನ್ನು ಅನುಭವಿಸುವಾಗಿನ ಭಕ್ತನ ಮಾನಸಿಕ ಸ್ಥಿತಿಯೇ ಅವರ ಅನೇಕ ಹಾಡುಗಳಿಗೆ ವಸ್ತುವಾಗಿರುವದನ್ನು ಕಾಣುತ್ತೇವೆ.

ಕೈವಲ್ಯದರ್ಪಣದ ಪದ್ಯಗಳು ಆತ್ಮ ಸುಧಾರಣೆಯಿಂದ ಹಿಡಿದು ಸಾಮಾಜಿಕ ಬದುಕಿನ ಕಾಳಜಿಯೊಂದಿಗೆ ಸಾಗಿ ಪರಮಾತ್ಮನ ಅನುಸಂಧಾನದವರೆಗೆ ಕೈಚಾಚುತ್ತವೆ. ಆದ್ದರಿಂದ ನಿಜಗುಣರ ಕೈವಲ್ಯ ಪದ್ಧತಿಯಂತೆ ಪಂಚಸ್ಥಲದಡಿಯಲ್ಲಿ ವಿಂಗಡಿಸಿ

ವಿಶ್ಲೇಷಿಸುವುದು ಕಷ್ಟ ಸಾಧ್ಯ, ಏಕೆಂದರೆ ಕೈವಲ್ಯ ಪರಂಪರೆಯ ಕೊನೆಯ ಕೊಂಡಿಯಾದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ನಿಜಗುಣರನ್ನು ಕರಾರುವಕ್ಕಾಗಿ ಅನುಸರಿಸಿಲ್ಲ, ಸಾಂಧರ್ಬಿಕ ಪ್ರತಿಕ್ರಿಯೆಗಳೆಂಬಂತೆ ಈ ಹಾಡುಗಳು ರಚನೆಗೊಂಡಿರುವುದರಿಂದ ಅವುಗಳಲ್ಲಿ ಕ್ರಮಬದ್ಧತೆಯನ್ನು ಕಂಡುಕೊಳ್ಳುವುದು ಸಾಧ್ಯವಿಲ್ಲ, ಆದ್ದರಿಂದ ವಸ್ತುವನ್ನು ಪ್ರಧಾನ್ಯವಾಗಿಟ್ಟುಕೊಂಡ ಆಧ್ಯಾತ್ಮ, ಸಮಾಜಚಿಂತನೆ ಮನು ಕಲ್ಯಾಣ, ಸಾಹಿತ್ಯಿಕ ವಿಭಾಗಗಳಾಗಿ ವಿವರಿಸಲಾಗಿದೆ.

4.1 ಆಧ್ಯಾತ್ಮ :– ಭಕ್ತನ ಸಾಧಕ ಜೀವನದ ಒಟ್ಟು ಹೋರಾಟದ ಚಿತ್ರಣವೇ ಇಲ್ಲಿ ಚರ್ಚಿತವಾಗುವ ವಿಷಯವಾಗಿದೆ ಅದನ್ನು ಬಿಟ್ಟು ಮೂರು ಘಟ್ಟಗಳಲ್ಲಿ ವಿಂಗಡಿಸಿ ನೋಡಲಾಗಿದೆ.

1) ವಿರಕ್ತಿ 2) ಗುರುಹಂಬಲ 3) ದರ್ಶನ, ಈ ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ, ವಿರಕ್ತಿಯಲ್ಲಿ ಈ ಹೇಯ ಪ್ರಪಂಚದಿಂದ ವಿರಕ್ತಿಹೊಂದುವುದು ಶಿವನಲ್ಲಿ ಒಂದಾಗುವ ಆಶೆಯೇ ಹಂಬಲ ಅವನಲ್ಲಿ ಬಂದಾಗಿ ಬೆರೆಯುವುದೇ ದರ್ಶನ ಅಥವಾ ಸಾಕ್ಷಾತ್ಕಾರದ ನಿಲುವು ಇವುಗಳನ್ನು ಕುರಿತು ಶಿವಯೋಗಾನಂದದ ಹಾಡುಗಳಲ್ಲಿ ವ್ಯಕ್ತವಾಗಿರುವ ಮಾತುಗಳನ್ನು ನೋಡಬಹುದು

4.1.1 ವಿರಕ್ತಿ :–

ಹೆಣ್ಣು, ಹೊನ್ನು, ಮಣ್ಣು ಮಾಯೆಯೆಂದು ತಿಳಿದು ಅವುಗಳಿಂದ ಮುಕ್ತರಾಗಲು ಬಯಸುತ್ತಾರೆ, ಅವೆಲ್ಲವೂ ಕ್ಷಣಿಕವಾದ ತೃಣಮಾತ್ರದಿಂದ ಸುಖಾಪೇಕ್ಷೆಯನ್ನು ಉಂಟುಮಾಡಿ ಶಾಶ್ವತವಾದ ಪರಶಿವನ ಸನ್ನಿಧಾನವನ್ನೇ ತಪ್ಪಿಸುತ್ತವೆ. ಎಂದು ತಿಳಿದು ತಮ್ಮ ಸಾಧನೆಯ ಮಾರ್ಗದಲ್ಲಿ ಮೊಟ್ಟ ಮೊದಲಿಗೆ ಆ ಭಾವನೆಗಳನ್ನು ವಿರಕ್ತಿ ಮಾಡಿಕೊಳ್ಳುತ್ತಾರೆ.

ಎಲೆ ಮಾನವನೇ ಕೇಳು ಸ್ಥಿರವೆಂದು ಸಂಸಾರ।

ಮಲ ದೇಹವನು ಮೆಚ್ಚಿಕೆಡಬೇಡ ಬರಿದೆ। 4

ಸಂಸಾರ ಲೋಲುಪ್ತರನ್ನು ಬಡಿದೆಬ್ಬಿಸಲು ಕಾರಣ ಅವರು ಸಹ ವಿರಾಗಿಯಾಗಿದ್ದದ್ದು ಎಲ್ಲ ಮತಧರ್ಮದವರು ಅಜ್ಞಾನ ದುಃಖ ಮರವೆಗಳನ್ನು ಕಂಡವರು ಮರಗಿದ್ದಾರೆ, ಬಾಲಲೀಲಾ ಮಹಾಂತ ಶಿವಯೋಗಿಗಳು ದೃಷ್ಟಿ ತುಂಬಾ ವಿಶಾಲವಾದದ್ದು ಸರ್ವವ್ಯಾಪಕವಾದದ್ದು ಧರ್ಮದ ಎತ್ತರವಾದ ವೇದಿಕೆಯ ಮೇಲೆ ನಿಂತು ಇಡೀ

ಮಾನವನತೆಯನ್ನೇ ಒಟ್ಟಾಗಿ ನೋಡಬಲ್ಲ ನಿಲುವು ಇವರದು,ಆದ್ದರಿಂದ ಮಹಾಮಾನವನ ಹಂತಕ್ಕೆ ಏರಲು ಕ್ಷಣಿಕವಾದ ಸಂಸಾರ ನೆಚ್ಚಿ ಕೆಡಬೇಡ, ಇದು ನಾಶವಾಗತಕ್ಕದು ಎಂದು ಹೇಳುತ್ತಾ ಇನ್ನೊಂದು ಕಡೆಗೆ ನುಡಿಯುತ್ತಾರೆ

ನಾರಿ ನಿನ್ನವಳಲ್ಲ ಹೇಮ ನಿನ್ನದು ಅಲ್ಲ !

ಧೀರ ಪುತ್ರಾಪ್ರರುಗಳಾರಾರು ಅಲ್ಲ

ಸಾರಿ ಹೇಳುವೆನೀಗ ತಿಳಿಯದುದು ಮುಂದೆ ನೀ

ಘೋರ ನರಕಾರ್ಣವನೆ ಬೀಳ್ವಾಗ ತಿಳಿವೆ ॥ 4

ಸಂಸಾರದ ವ್ಯಾಮೋಹಕ್ಕೆ ಒಳಗಾದ ಜೀವಿಯು ನನ್ನದೆಂಬಬ್ರಮೆಯಲ್ಲಿ ಇರುತ್ತಾನೆ, ಎಲ್ಲವು ಅನಿಶ್ಚಿತ ಈ ಜಗತ್ತಿಗಿದ್ದ ಮಾಯೆ ಎನ್ನುತ್ತಾನೆ. ಜೀವಿತದ ಬಹುಕಾಲವನ್ನು ಕಳದೆಯಾದರೆ ಘೋರನರಕಕ್ಕೆ ಬೀಳುತ್ತಿ ಎಂದು ಎಚ್ಚರಿಸುತ್ತಾರೆ.

ಮಾಯೆ, ಮೋಸ, ಯಕ್ಷಿಣಿ ವಿದ್ಯೆ, ಗಾರುಡಿ, ಬ್ರಾಂತಿ, ಪ್ರೀತಿ ಎಂಬ ಅರ್ಥ ವ್ಯವಸ್ಥೆಯನ್ನು ಪಡೆದರೂ ವೀರಶೈವ ಪಾರಿಭಾಷಿಕದಲ್ಲಿ ವಿಶೇಷವಾದ ಅರ್ಥವಂತಿಕೆಯನ್ನು ಪಡೆದಿದೆ, ಸಾಧಕನಿಗೆ ಹಂತ ಹಂತವಾಗಿ ಕಂಟಕವಾಗಿ ನಿಂತು, ದಾರಿ ತಪ್ಪಿಸುವ ವಿಶಿಷ್ಟ ಶಕ್ತಿಯಾಗಿದೆ, ಆದ್ದರಿಂದ ಮಾಯಾ ಸಂಹಾರ ಮಾಡಿದಲ್ಲದೆ ಮಹಾಂತ ಪ್ರಿಯನೊಳ್ ಬೆರೆಯಲು ಸಾಧ್ಯವಿಲ್ಲ, ಎಂದು ಮುಕ್ತಿ ಎಂಬ ಅಂಗನೆಯ ದೊರೆಯಲಾರಳು ಎಂದು ಹೇಳಲಾಗಿದೆ.

ಮಾಯೆಯನ್ನು ಗೆಲ್ಲುವದಕ್ಕಾಗಿ ಮನಸ್ಸು ತಳಮಳಗೊಂಡು ಚಿಂತನೆಗೊಳಗಾಗುತ್ತದೆ. ಆದ್ದರಿಂದಲೇ ಹೀಗೆ ನುಡಿಯುತ್ತಾರೆ,

ಎಂತು ಜೈಸುವೆ ಲಿಂಗವೇ ದುರು।

ಳಾಂತಕಾಂಗಜ ಮಾಯೆಯೆ॥ 9

ಸಾಧಕನ ಆರಂಭದ ತೃಪೆ ಕಡಿಮೆಯಾಗಿ ಆತ್ಮಬಲ ಹಿಗ್ಗಾಮುಗ್ಗಾ ಜಗ್ಗಾತಿಡಿದಂತಾಗಿ ಮಾಯೆಯ ಶಕ್ತಿ ಮಿಗಿಲಾದಾಗ ಅದನ್ನು ಜೈಸುವ ಪ್ರಶ್ನೆ ದೊಡ್ಡದಾಗಿ ಬೆಳೆಯುತ್ತಲೇ ಹೋಗುತ್ತದೆ. ಮಾಯೆಯ ಉಪಟಳದಿಂದ ಭಕ್ತನ ಆತ್ಮಬಲ ಕರಗಿ ಮನವು ವಿಷಯಾದಿಗಳಲ್ಲಿ ಲೋಲುಪ್ತವಾದರೆ ಪ್ರಪಾತಕ್ಕೆ ಬೀಳುತ್ತಾನೆ ಆದ್ದರಿಂದ ಹೀಗೆ ಹೇಳುತ್ತಾರೆ.

ಕ್ಷಿತಯೊಳಿಹ ಅತಿಶಯದ ಮಹಿಮರು

ಮತಿಯ ಮಸಣಿಸಿ ಪೋದರು 9

ಯತಿನಮಿತ ಪ್ರತಿರಹಿತವಾದ ಯತಿ, ಮುನಿಗಳೆಲ್ಲ ಈ ಮಾಯೆಯನ್ನು ಗೆಲ್ಲಲು ಸಾಧ್ಯವಾಗದೆ ನಾಶವಾಗಿದ್ದಾರೆ, ಈ ಮಾಯಾವಿಯ ಕಾಟದಿಂದ ನಿಮ್ಮನ್ನೂ ಧ್ಯಾನಿಸದಂತೆ ಆಗಿದೆ,

ಸಾಧಕನು ನಿತ್ಯ ವೀರಶೈವಾಚಾರಣೆಯ ಮೂಲಕ ಸದಾ ಸಂಪನ್ನನಾಗಿ ಶಿವಧ್ಯಾನದಲ್ಲಿ ಇರುವಾಗ ಮಾಯೆಯ ಜತೆಗೆ ಸೆಣಸಾಡಿ ಮನಕ್ಕಂಟಿದ ಮಲತ್ರಯಗಳನ್ನು ಕಳೆದುಕೊಂಡು ಶಿವನಲ್ಲಿ ಒಂದಾಗಬೇಕಾಗುತ್ತದೆ, ಆದ್ದರಿಂದ ಹೀಗೆ ನುಡಿಯುತ್ತಾರೆ

॥ ಬಂಗಭವ ಮಹಂತೇಶನ ಲಿಂಗನ

ಸಂಗ ಶರಣರು ಪೂರ್ವದಿ ಹ್ಯಾಂಗೆಗೆದ್ದರು

ಅಂಗ ಗುಣಗಳ ಹಾಂಗೆ ಪೇಳುನೀ ಮಾಜದೆ॥ 9

ಭಕ್ತನು ಆರಂಭ ಶೂರನಾಗಿದ್ದರೆ ಮಾನಸಿಕ ದೃಢತೆಯನ್ನು ಹೊಂದಿಸಿ ಆಡಂಭರಕ್ಕಾಗಿ ಸಾಧನ ಕೈಕೊಂಡಿದ್ದರೆ ಈ ಮಾಯೆಯ ಉಪಟಳಕ್ಕೆ ಹೆದರಿಭವಿಯಾಗಿ ಜೀವಿಸುತ್ತಾನೆ, ಮಹಾಂತ ಶಿವಯೋಗಿ ಡಂಬಾಚಾರಿಯಲ್ಲಿ ಹೇಗಾದರೂ ಮಾಡಿ ಮಾಯೆಯನ್ನು ಗೆಲ್ಲಲೇಬೇಕು ಎಂಬ ಛಲವುಳ್ಳವನು ಆದ್ದರಿಂದ ಪೂರ್ವಿಕರು ಹೇಗೆ ಗೆದ್ದರು ಹೇಳು ಎಂದು ಕೇಳುತ್ತಾರೆ.

ಇಂದ್ರಿಯಗಳ ಬಾದೆಯನ್ನು ಹೋಗಲಾಡಿಸಲು ಶಿವನಲ್ಲಿ ಮೊರೆ ಇಡುತ್ತಾರೆ

" ಕಾಲಕರ್ಮದ ಗೆದ್ದ ಫಾಲಲೋಚನ ಲಿಂಗ।

ತಾಳ ಬಾಧೆಯ ಕರಣಾದಿಗಳ।

ಜಾಳು ಮಾಡಿಯೇ ಎನ್ನ ಬಾಳಗೊಡವುದೇವ।

ಲಾಲಿಸೆವೈ ನಿಮ್ಮ ಮೂಲ ಪಂಚಾಕ್ಷರವ। 6

ಕಾಲವನ್ನು ಗೆದ್ದವನು ಪಾಲಲೋಚನೆ (ಶಿವ) ಲಿಂಗವೇ ಇಂದ್ರಿಯ ಬಾಧೆಯಿಂದ ಬಾಳಲಾರೆನು ದೇವ ನಿಮ್ಮಮೂಲ ಮಂತ್ರವಾದ ಪಂಚಾಕ್ಷರಿಯನು ಹೇಳದಂತೆ ಮಾಡಿದೆ, ಈ ರೀತಿಯ ಇಂದ್ರಿಯಗಳಿಂದ ಪಾರಾಗಲು ಬಸವಣ್ಣ ಇನ್ನೊಂದನ್ನು ನೋಡದಂತೆ

ಇನ್ನೊಂದನ್ನು ಕೇಳದಂತೆ ಕುರುಡನ, ಕಿವುಡನ, ಹೆಳವನ ಮಾಡಯ್ಯ ಎಂದು ಪರಿತಪಾಸಿದ್ದನ್ನು ನೆನಪಿಸಿಕೊಳ್ಳಬಹದು,

ತಂದೆ ಶ್ರೀ ಗುರು ಮಹಾಂತ ಲಿಂಗವೇ

ಬಂದಿಲ್ಲ ಸುಗುಣ ನಿಮ್ಮೊಲಿಸುವರೆನ್ನೊಳು

ಬಂದು ಮರೆಹೊಕ್ಕನು ಧರ್ಮದಿಂಪಾಲಿಸೇ। 6

ಎನ್ನುವಲ್ಲಿ ಗುರುವಿಗೆ ಸಂಪೂರ್ಣವಾಗಿ ಶರಣಾಗತನಾಗಿದ್ದಾನೆ, ಗುರುಕಾರುಣ್ಯ, ಸ್ಥಳದಲ್ಲಿ ಹಲವು ಹಂತದ ತಳಮಳಗಳನ್ನು ನೀಗಿಕೊಂಡ ಮೇಲೆರುವದಕ್ಕಾಗಿ ಗುರುವಿನಲ್ಲಿ ಅನನ್ಯವಾಗಿ ಬೇಡಿಕೊಳ್ಳುತ್ತಾನೆ. ಗುರುದೀಕ್ಷೆಯ ನಂತರ ಪೂರ್ವಾಶ್ರಮದ ಎಲ್ಲ ಸಂಬಂಧಗಳನ್ನು ಗುರುವಿನಲ್ಲಿಯೇ ಕಾಣಬಯಸಿದ ಭಕ್ತನಿಗೆ ಗುರುವೇ ತಂದೆಯಾಗಿ, ತಾಯಿಯಾಗಿ ಸರ್ವನೂ ಆಗಿ ರಕ್ಷಿಸುತ್ತಾನೆ, ಆದ್ದರಿಂದ ಗುರುವೆ ನನ್ನಲ್ಲಿ ಸುಗುಣ ಒಂದಿಲ್ಲ ಕರಣಾದಿಗಳ ಉಪಟಳದಿಂದ ಶಕ್ತಿಯೆಲ್ಲವೂ ಹರಣಗೊಂಡಿದೆ ತಂದೆ ದೊರೆಹೊಕ್ಕಿದ್ದೇನೆ ರಕ್ಷಿಸು ಪಾಲಿಸು ಎಂದು ಆರ್ತತೆಯಿ ಬೇಡಿಕೊಳ್ಳುತ್ತಾನೆ. [7]

ತನ್ನನ್ನು ತಾನು ಎಚ್ಚರಿಸಿಕೊಂಡು ಹೊಯ್ದಾಟದ ನಡೆಯನ್ನು ತಿದ್ದಿಕೊಳ್ಳುತ್ತಲೇ ಭಕ್ತನು ಸಾಗಬೇಕಾಗುತ್ತದೆ ಆದ್ದರಿಂದ ಹೀಗೆ ಹಾಡಿಕೊಂಡಿರಬೇಕು.

" ಎರಗದಿರು ಮನವೇ ನೀತನುವರ್ಣವನು ನೋಡಿ।

ತೆರೆಯ ಹುಳುಕುಂಟು ಗುಣವಿಲ್ಲ ನಾರಿಯೊಳು॥ 5

ದೈಹಿಕ ಆಕರ್ಷಣೆ ಸಲ್ಲದು ವಿರಕ್ತರಾದ ಈ ಸಾಧಕರಿಗೆ ಸ್ತ್ರೀಲಾವಣ್ಯ ತರವಲ್ಲ ಅದು ಮಲ, ಮೂತ್ರ ತುಂಬಿ ತುಳುಕುವ ಕೊಡ ಮಾತ್ರವಾಗಿದೆ, ಅದನ್ನು ಮೆಚ್ಚಿ ಭವಕಿಳಿಯಬೇಡ ಎಂಬ ಎಚ್ಚರಿಕೆಯನ್ನು ಕೊಡುತ್ತಾರೆ.

ವೈರಾಗ್ಯ ಕೆಲವು ಜನರಿಗೆ ಸಂದರ್ಭಜನ್ಯವಾಗಿ ಮೂಡಿನಿಲ್ಲುತ್ತದೆ, ಅದು ನಿಜವಾದ ಸಹಜವಾದ ವೈರಾಗ್ಯವಲ್ಲ ನಿಜಗುಣರು ಹೇಳಿದಂತೆ ಪ್ರಸೂತಿ ವೈರಾಗ್ಯ ಸ್ಮಶಾನ, ವೈರಾಗ್ಯ ಪುರಾಣ, ವೈರಾಗ್ಯಗಳಲ್ಲಿ ಅವರು ಬೇಡಿದ್ದು ಶಾಶ್ವತ ವೈರಾಗ್ಯ, ಮನಸ್ಸು ಬೇರೊಂದಕ್ಕೆ ಎಳಸದಂತೆ ಸದಾ ನಿನ್ನ ಕರುಣೆ ಇರಲಿ ಎಂದು ಬೇಡಿಕೊಂಡಿದ್ದಾರೆ.

ವಿರತನೆಂದೆ ನಿಸೆನ್ನನು। ಸ್ಮರನ ಸುಖ।

ವಿರಹಕೆಳಸದೆ ಗುರುವರ ಮಹಂತಲಿಂಗ ವಿರತನೆಂದನಿಸೆನ್ನನು। 3

ಕರುಣಾದಿಗಳನ್ನು ಕಳೆದು ರಕ್ಷಿಸು ಎಂದು ಎಲ್ಲಾ ಹಂತಗಳಲ್ಲಿಯೂ ಬೇಡಿಕೊಂಡಿದ್ದಾರೆ

1) ಕರಣ– ಗುಣಗಳುರವಣಿಯನು ತಾಳೆ।

ಪೊರೆಯೊ ಬೇಗನೆ ॥ 11

2) ಹೊರಗೆ ಕಳ್ಳರ ಬಾದೆ ಒಳಗೆ ಜೇಳಾವುಮದ ।

ಕರಿನಿಕರ ಬಾಧೆಯನು ತಾಳಲಾರೆ॥

ನರಿ ಶಾರ್ದೂಲನ ಬಾಧೆ। ಕರಡಿ ಮೃಗಗಳ ಬಾಧೆ।

ಪರಿಪರಿಯ ಬಾಧೆಗಳನೇಕ ಶಿವನೆ । 14

3) ಅರಿಗಸುರಲಿ ಬಾನುಭವ ಬಾಧೆಗಳ ನಿನ್ನು।

ಮರಾರಿ ಶರಣರುಗಳೆಲ್ಲೆಲ್ಲ ಕಾಣಿಸರು॥ 14

4) ಮನವೆಂಬ ಮರ್ಕಟವು ಲಂಘಸುವದೇನೆಂದೆ।

ಘನ ವಿಷಯದಿಂದ್ರಯದ ಶಾಖೆಶಾಖೆಯೊಳು॥

ವನಿತೆಯರ ಕನಕಾಂಗದಾರಣ್ಯದೊಳುಚಲಿಸಿ।

ಕುಣಿವುದ ಶಿಸ್ತಿನ ಶಿಖರಗಳ ನಡಲಿ ಬಿಡದೆ। 15

ಹೀಗೆ ಇನ್ನು ಹಲವಾರು ಕಡೆಗೆ ಈ ಕರುಣಾದಿಗಳ ಬಾಧೆಯಿಂದ ತಳಮಳಗೊಂಡ ಭಕ್ತನ ಮನಸ್ಸು ಮಹಂತಲಿಂಗನಲ್ಲಿ ಮರಿದುಂಬಿಯಾಗಲು ಬಯಸದೆ, ಮಲಗಳ ಬಾಧೆಯಿಂದ ಅಜ್ಞಾನ ತುಂಬಿ ಅರುವುನಾಶವಾಗಿದೆ, ಒಳಹೊರಗೆ ನಾನಾ ರೀತಿಯ ವ್ಯಸನಗಳು ಕಾಡು ಮೃಗಗಳೋಪಾದಿಯಲ್ಲಿ ಕಾಡುತ್ತಲಿವೆ, ರಕ್ಷಿಸು, ಶಿವನೇ ಎನ್ನುತ್ತಾರೆ ಮನವು ಮರ್ಕಟನಂತೆ ಹಾರಾಟ ಚೀರಾಟ ನಡೆಸಿದೆ ರಾಕ್ಷಸರು ಕಾಮನಬಾಧೆ ತಾಳಲಾರೆನು ಶಿವನೇ ರಕ್ಷಿಸು ಎಂದು ಬೇಡಿಕೊಳ್ಳುತ್ತಾರೆ.

ಕಾಡು ಕಾಡ್ಯೆ ಶಿವನೆ ಕಾಡದಿರ್ದರೆ ನೀನು।

ಖೋಡಿ ಮನ ಕಾಡೆನ್ನ ಬುದ್ಧಿ ಕೆಡಿಸುವುದು॥ 26

ಹೀಗೆ ಕಾಡಿ ನಿನ್ನಡಿಗೆ ಹೊಂದಿಸಿಕೋ ಎಂದೆನ್ನುತ್ತಲೇ ಲೋಕ ದೃಷ್ಟಾಂತಗಳನ್ನು ಮಾತು ಸುಳ್ಳಲ್ಲ ಆದ್ದರಿಂದ ಈ ಭವಿಗಳಿಗೆಲ್ಲ ತಂದೆಯಾದ ನೀನು ಬಡಿದು ಕಾಡಿ ಸನ್ಮಾರ್ಗಕ್ಕೆ ಹೆಚ್ಚು ಎನ್ನುವ ಭಾವ ಇಲ್ಲಿದೆ, ಮರೆತು ಭಾವಕ್ಕೆ ತಂದೆಯಾದರೆ ನನ್ನಾಣೆಯಾಗಿದೆ

ಇದರಿಂದ ನನಗಾಗುವುದರ ಕೇಡು ನಿನಗೂ ತಪ್ಪಿದ್ದಲ್ಲ ತ್ರೈಲೋಕಪತಿಯೋ ಎಚ್ಚರವಿರಲಿ ಎಂದು ಸೂಚನೆಯನ್ನು ಕೊಡುತ್ತಾರೆ.

ಬೇಡುವೆವರವ ನಿಮ್ಮೊಂದ ಕೊಡೋ

ರೂಡಿಗೀಶನೆ ಇದು ಚೆಂದ ॥ಪ॥

ಬೇಡ ನೀ ಕೊಡು, ಫಲಪದವ ನಾನೊಲ್ಲೆ

ಮಾಡದೆವರ ಮುಕ್ತಿ ಕೊಡುವ ಸುಗುಣವ ॥ ಅನುಪಲ್ಲ॥ 18

ತಾಪತ್ರಯಗಳನ್ನು ಪರಿಹರಿಸಿಕೊಂಡು ಒಂದು ಸ್ಥಿತಿಗೆ ಮುಟ್ಟಿದಾಗ ಶಿವನಲ್ಲಿ ಬೇಡಿಕೊಂಡು ಮುಕ್ತಿಯನ್ನು ಪಡೆಯುವ ಹಂಬಲ ಹೆಚ್ಚಾಗುತ್ತದೆ. ಆದ್ದರಿಂದ ಭಕ್ತನಾದವನು ವರವ ಕೊಡೋ ಬೇರೆ ಯಾವ ಪದವಿಯನ್ನು ನಾನೊಲ್ಲೆ ಎಂಬ ಇತ್ಯಾದಿ ಭಾವನೆಗಳ ತೀವ್ರತೆಯು ಕಂಡು ಬರುತ್ತದೆ. [2]

ಸಾಧನೆಯ ಹುಚ್ಚು ಹಿಡಿಯುವ ಮೊದಲು ಜನಸಾಮಾನ್ಯರಂತೆಯೇ ಇರುತ್ತಾನೆ. ಒಮ್ಮೆ ದೇವರನ್ನು ಕಾಣಲು ಪ್ರಯತ್ನಿಸಿ ಸಾಗಿದರೆ ಅನಂತ ಪರಿತಾಪಗಳಿಗೆಡೆಯಾಗುತ್ತಾನೆ. ಒಮ್ಮೆ ಹತ್ತಿದ ಆಧ್ಯಾತ್ಮದ ಹುಚ್ಚು ಬಿಡುವಂತೆಯೂ ಇಲ್ಲ ಒಂದು ವಿಚಿತ್ರ ಸ್ಥಿತಿಗೆ ನಮ್ಮನ್ನು ಈಡುಮಾಡುತ್ತದೆ. ಆದ್ದರಿಂದಲೇ ಕವಿ ಮಧುರ ಚೆನ್ನರು ಹೀಗೆ ಹೇಳಿದ್ದಾರೆ.

ಹರೆಯ ಬಾರದ ಮುನ್ನ ಹಾಗೂ ಹೀಗೂ ಇದ್ದೆ

ಕರುಳು ಹಸಿಯದ ಮುನ್ನ ಕೆರಳದಿದ್ದೆ

ಕರುಣವಿಲ್ಲದ ಬೆಂಕಿ ಕರುಳು ಕೆದರಿತು

ಮುಂದೆ ಮಂಜುಳಿದು ಮಳೆ ನೀರಿಗಾಶೆಗೈದೆ

ಆದ್ದರಿಂದ ಚಿಕ್ಕಂದಿನಿಂದಲೇ ಆಧ್ಯಾತ್ಮದ ಗೀಳು ಹತ್ತಿಸಿಕೊಂಡ ಬಾಲಬ್ರಹ್ಮಿಯಾದ ವಿರಾಗಿಯ ಕರುಳು ಹಸಿದಿದೆ, ಶಿವನನ್ನು ಕಾಣುವ ಹಂಬಲ ತೀವ್ರ ತರವಾಗಿದೆ. ಹತ್ತಿರ ಬೆಂಕಿಯೂ ಆರುವಂತೆಯೂ ಇಲ್ಲ. ಆದ್ದರಿಂದ ಈಗ ಪ್ರಾರಂಭಿಕ ಸಾಧನೆಯಿಂದ ಮನಸ್ಸಿನ ವಿರಾಟಗಳನ್ನು ಜಯಿಸಿ ನಂತರದ ತೃಪ್ತಿಗಾಗಿ ಹಂಬಲಿಸಿದೆ, ಮಂಜಿನ ನೀರಿನಲ್ಲಿಯೇ ಸಮಧಾನಿಯಾಗದೆ ಮಳೆ ನೀರಿಗಾಗಿ ಹಂಬಲಿಸಿ ಶಿವನಲ್ಲಿ ಒಂದಾಗಲು ಪಟ್ಟ ಪಾಡು ಸ್ತುತಿಸಿದ ಸ್ತುತಿ ಒಂದಲ್ಲ, ಎರಡಲ್ಲ ಅನಂತವಾಗಿವೆ. ಆ ಎಲ್ಲ ಅನುಭವಗಳನ್ನು ಹೊತ್ತ ಅವರ ಹಾಡುಗಳ ಚರ್ಚೆಯನ್ನು ಗುರುಹಂಬಲ ಎಂಬ ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

4.1.2 ಗುರು ಹಂಬಲ :-

ಶಿವನನ್ನು ಕಾಣುವ ಹಂಬಲ ಅತೀತವಾಗಿ ಹಚ್ಚಿ ನಿಲ್ಲುತ್ತದೆ. ಇದು ಗುರೋಪದೇಶದ ರೂಪದಲ್ಲಿರುವುದು ಆಧ್ಯಾತ್ಮಿಕ ಮಾರ್ಗದಲ್ಲಿ ಗುರುವಿನ ಮಹತ್ವವನ್ನು ಪರಿಣಾಮಕಾರಿಯಾಗಿ ಎತ್ತಿಹಿಡಿಯುತ್ತದೆ. ಮುಂದೆ ಗುರುಕೇಂದ್ರದ ಶಕ್ತಿಯಾಗಿ ಆತನ ಕಾರುಣ್ಯಕ್ಕಾಗಿ ಶಿವಸ್ತುತಿ, ಶಿವತ್ವದ ಪರಿಭಾವನೆ ಮತ್ತು ಆಶಕ್ತಿಯ ಕಾರುಣ್ಯಕ್ಕಾಗಿ ಹಾರೈಸಿ ಹಂಬಲಿಸಿ ತನ್ನನ್ನು ಅರ್ಪಿಸಿಕೊಳ್ಳುತ್ತಾನೆ.

ಶಿವಯೋಗಿಯೇ ಶಿವನಾಗಿ ಮಂಗಲಮಯ ಜಪಮಾಲೆಯನ್ನು ಧರಿಸಿ ಅಂಗರೂಪದಲ್ಲಿ ಚರಜಂಗಮವಾಗಿ ಜಗದೇಕಪ್ರಭುವಾಗಿ ಸಂಚರಿಸುತ್ತಾನೆ. ಅಂಗತ್ರಯಗಳ ಮಹಾ ಘನಲಿಂಗತ್ರಯದಲ್ಲಿ ಬೆರೆದು ಲಿಂಗಾಂಗ ಸಾಮರಸ್ಯದಿ ಇರುವ ಮಹಾಲಿಂಗವೇ ತಾನಾಗಿರುವ ಸಾಂಬ ಹರಹರ ಶಂಭೋ ಎಂದು ಕೊಂಡಾಡಿ ಶಿವನ ಸರ್ವಾಂತರ್ಯಾಮಿತ್ವಕ್ಕೆ ಒಳಗಾಗಿ ಆತನನ್ನು ಕೂಡುವ ಹಂಬಲದಿಂದ ಬಿರುದಾವಳಿಯ ಮೂಲಕ ಸ್ತುತಿ ಮುಂದುವರೆಯುತ್ತದೆ.

ಸ್ವಾಮಿನ್ ಶ್ರೀ ಪಶ್ಚಿಮದೆಳದೇಕ ಸಿಂಹಾಸನ ಸದಾರೂಢಂ।

ನಾಮರೂಪ ಕ್ರಿಯಾತೀತಂ।

ಕಾಮಿತ ಫಲದಾಯಕ ಮಹಾಂತ ಕೃತಕೃತ ಝಣಕೃತ।

ಝೇಂಕೃತ ಸ್ವಾಮಿನ್। 72

ಹೀಗೆ ಮಹಾಂತ ಲಿಂಗನನ್ನು ಹಾಡಿ ಕುಣಿದಿದ್ದಾರೆ.

ವೀರಶೈವ ಪರಂಪರೆಯಲ್ಲಿ ದೀಕ್ಷಾಗುರು ಶಿಕ್ಷಾಗುರುಗಳ ಪ್ರಸ್ತಾವನೆ ಇದೆ ಮತಾಚಾರದ ದ್ವಂದ್ವಕ್ಕೆ ಒಳಗಾದ ಸ್ವಾಮಿಗಳು ಈತನಿಗೆ ದೀಕ್ಷೆಕೊಡಲು ಯಾರು ಮುಂದೆ ಬಂದಿರಲಿಕ್ಕಿಲ್ಲ ಆದರೆ ಶಾಂತವೀರರು ಕೊಟ್ಟಿರುವುದರಿಂದ ಅತ್ಯಂತ ಧನ್ಯತೆಯಿಂದ ಹಾಡಿ ಕೊಂಡಾಡಿದ್ದಾರೆ.

ಧನ್ಯನಾದೆನು ಶಾಂತವೀರಸ್ವಾಮಿ

ನಿನ್ನ ಪಾದಾರವಿಂದವ ಕಂಡುದ್ದಾರ ॥ಪ॥ 31

ಅಜ್ಞಾನದ ಕತ್ತಲೆಯಲ್ಲಿರುವ ನನಗೆ ಸಚ್ಚಿದಾನಂದರ ಮೂಲಕ ಎಚ್ಚರಿಸಿದ್ದಾರೆ. ಗುರುವಿನಿಂದಲೇ ಉದ್ದಾರವಾಗ ಬಯಸಿದ ಮಹಾಂತರು ಹೀಗೆ ಹೇಳುತ್ತಾರೆ. [8]

ಶರಣು ಶರಣು ಶ್ರೀಗುರು ಮಹಾಂತ ಲಿಂಗವೇ
ಶರಣು ನಿಮ್ಮಯ ಚರಣಂಗಳಿಗೆ॥
ಶರಣು ರನಗಳಿಸಿ ಧರಣಿಗೆ ತಂದಿರಿ।
ಕರುಣೆಗಳೇ ನೀವು ದೊಡ್ಡವರು॥ 28

ಅಂತರಂಗದ ಹಂಬಲ ಹೆಚ್ಚಾದಾಗ ಶರಣು ಶರಣು ಎಂದು ಕಿಂಕರವಾಗಿ ಬೇಡಿಕೊಂಡಿದ್ದಾರೆ ಹೀಗೆ ಕೈವಲ್ಯ ದರ್ಪಣದ ಹಾಡುಗಳಲ್ಲಿ ಹಲವಾರು ಕಡೆಗೆ ಭಕ್ತನು ಶಿವನಲ್ಲಿ ಒಂದಾಗಲು ಆತನ ಕರುಣೆಗೆ ಪಾತ್ರನಾಗಲು ಹಂಬಲಿಸಿ ರಕ್ಷಿಸು, ಪಾಲಿಸು, ಕಾಪಾಡು ಈ ಭವದ ಜೀವನ ಬೇಸರವಾಗಿದೆ. ಲೌಕಿಕ ಮೋಹ ದೂರಾಗಿ ಅಲೌಕಿಕ ಪ್ರಜ್ಞೆಯಲ್ಲಿ ಆತ್ಮೀಕ ಸಿರಿಗಾಗಿ ಭಗವಂತನ ಅನುಗ್ರಹಕ್ಕಾಗಿ ಹಂಬಲಿಸಿದ್ದಾನೆ. ಆತನ ಸಾಕ್ಷಾತ್ಕಾರಕ್ಕೂ ಅನಂತ ರೀತಿಯಲ್ಲಿ ಮನ ಹಾತೊರೆಯುತ್ತದೆ.

ಇಂತಹ ಭಾವವನ್ನು ತಳೆದು ಹಾಡುಗಳು ಇವೆ. ಇಲ್ಲಿಂದ ಮುಂದೆ ಈ ಭಕ್ತನ ಹಂಬಲ ಕೈಗೂಡಿದಾಗ ಶಿವ ಸಾಕ್ಷಾತ್ಕಾರ ಉಂಟಾಗುತ್ತದೆ. ಆಗಿನ ಭಕ್ತನ ಸ್ಥಿತಿಯು ಸಮಾಧಾನ ಸ್ಥಿತಿಯಾಗಿದೆ. ಆಗಿನ ಎಲ್ಲಾ ಅನುಭವಗಳನ್ನು ದರ್ಶನ ಭಾಗದಲ್ಲಿ ನೋಡಬಹುದು.

4.1.3 ದರ್ಶನ :-

ಮನುಷ್ಯನ ಜೀವನವು ವಿಷಯೇಂದ್ರಿಗಳ ಮೂಲಕ ಅಸೀಮವಾದ ದುಃಖಕ್ಕೆಡೆಯಾಗುತ್ತದೆ .ಇವುಗಳನ್ನು ದಾಟಿ ಚಿರಂತನ ನಿರಾಲಂಬ ನಿರ್ದೋಷ ಸುಖವನ್ನೇ ಅರಸಬೇಕು ಎಂಬು ಬುದ್ದಿಯ ಮನುಷ್ಯನಲ್ಲಿ ಹುಟ್ಟುವದು, ಆ ಸುಖವೇ ಆತ್ಮಸುಖವು

ಅದು ನಿತ್ಯವಾಯಿತೆಂದರೆ ಅದೇ ಮುಕ್ತಿಯು ಶಿವಸಾಕ್ಷಾತ್ಕಾರಕ್ಕೆ ಆತನ ವೈಯಕ್ತಿಕ ಯೋಗಸಾಧನೆ ಬಹಳ ಮುಖ್ಯವಾಗಿ ನಿಲ್ಲುತ್ತದೆ, ಅಂದರೆ ಸಾಧಕನು ಗಟ್ಟಿಯಾದ ಒಂದು ನೈತಿಕ ನೆಲಗಟ್ಟಿನ ಮೇಲೆ ನಿಂತು ಬೆಳೆಯ ತೊಡಗುತ್ತಾನೆ, ಇಲ್ಲಿ ಹಲವಾರು ಸಲ ಲೋಕದ ಇತಿಮಿತಿಗಳು ಗುರುತಿಸಲ್ಪಟ್ಟರೂ ಅಂಜದೆ ಮುಂದೆ ನಡೆಯುತ್ತಾನೆ, ಸಂಸಾರ ಹೇಯವಾಗಿ ಶಿವಕಾರುಣ್ಯ ಪಡೆದು ಶಿವನಲ್ಲಿ ಒಂದಾಗುವ ಹಂಬಲ ಗಟ್ಟಿಗೊಳ್ಳುತ್ತಲೇ ಆತನ ಹಿಂದಿನ ತಳಮಳ ಅಂಧಕಾರ, ಇತ್ಯಾದಿಗಳನ್ನು ಕಳೆದುಕೊಂಡು ಶಿವನ ಸಾಕ್ಷಾತ್ಕಾರಕ್ಕಾಗಿ ತೆರೆದ ಹೃದಯನಾಗಿ ಆರ್ತತೆಯಿಂದ ಬಯಸಿ, ಬೆಂಡಾಗಿ ಯೋಗದ ತುತ್ತತುದಿಯವರೆಗೆ ಸಾಗಿ ನಿಜದರಿವಿನಲ್ಲಿನಿಂದು ಶಿವನೇ ತಾನಾಗಿ ರೂಪದಳೆಯುತ್ತಾನೆ. ಅಲ್ಲಿ ದ್ವೈತ ಕಳೆದು ಅದ್ವೈತ ನಿಲ್ಲುತ್ತದೆ, ಇದೇ ಯೋಗ ಇದೇ ಸಾಮ್ರಾಜ್ಯದ ಪರಮಗುರಿಯಾಗಿದೆ. [3]

ಶಿವಯೋಗಿಗಳು ಸಾಧನೆಯ ಉದ್ದಕ್ಕೂ ವೀರಶೈವತತ್ವ ಸಮನ್ವಯವನ್ನು ಕಾಣುತ್ತೇವೆ. ಬದುಕಿನಲ್ಲಿ ಕಂಡು ಅನುಭವಿಸಿದ್ದೇ ಬರಹವಾಗಿದೆ, ಅನುಭವ ಪದವಾಗಿ ಅಭಿವ್ಯಕ್ತಿಯನ್ನು ಪಡೆದಿದೆ. ಅವುಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಎತಕೆ ಚರಂತಿಕೆಯ ಖ್ಯಾತ ಮೆದ್ದುಗರವೊಲಿದ।

ಬೂತಳದಿ ಸುಖಿಯಾದೆ ನಿನ್ನಮೆನಗೆ ॥ಪ॥

ಹಿಂದೆ ಮಾಡಿದ ಸುಕೃತ ಸಂದೋಹದಿಂದೆನಗೆ

ಇಂದುಧರ ಮಹಂತಲಿಂಗಂದುವೊಲಿದ।

ಮಂದಬುದ್ಧಿಯ ದೂಡಿ। ಬಂಧುಬಳಗವ ಕೊಡಿ।

ಚೆಂದದಿಂ ಸುಖಿಪೆ ದಯದಿಂದ ನೋಡಿ ॥ 45

ಚರಂತಿ ಪೀಠಾಧಿಕಾರಿಗಳಲ್ಲಿ ಕೈಕೊಂಡಿರುವ ಸೇವಕ ವೃತ್ತಿ. ಸದಾ ಚಲಿಸುತ್ತಿರುವ ಬ್ರಹ್ಮಚಾರಿ ವೀರಶೈವ ಜಂಗಮ. ಈತನು ಚರಜಂಗಮ ವೃತ್ತಿಯಲ್ಲಿದ್ದು ತನ್ನ ಹಾಗೂ ಲೋಕೋದ್ಧಾರ ಕೆಲಸದಲ್ಲಿ ಸದಾ ತೊಡಗಿರುತ್ತಾನೆ. ಈತನ ಆಚಾರ ವಿಚಾರಗಳೇ ನೈತಿಕ ನೆಲೆಗಟ್ಟಾಗಿ ನಿಂತು ಅವನಲ್ಲಿ ಯೋಗಿಯ ಬಲವನ್ನು ತಂದು ಕೊಡುತ್ತವೆ.

ಮಹಂತ ಲಿಂಗ ಶಿವಯೋಗಿಯು ಸಾಕ್ಷಾತ್ ಶಿವನಾದ ಕಾರಣ ಈ ಭೂಮಿಯ ಭೋಗಗಳು ಅವನಿಗೆ ತೃಣ ಸಮಾನವಾಗಿದೆ ಎನ್ನುತ್ತಾರೆ. ಐಹಿಕ ಮಹಾರಾಜನಿಗೆ ಎಷ್ಟು ಹೊಗಳಿದರೂ ತೃಪ್ತಿಯಿಲ್ಲ, ಯಾವ ಭೋಗದಲ್ಲಿದ್ದರೂ ಆತನಿಗೆ ಸಮಧಾನವಿಲ್ಲ ಯಾಕೆಂದರೆ ಅವೆಲ್ಲ ಅನಿಶ್ಚಿತ ನೆಲೆಗಟ್ಟಿನ ಮೇಲೆ ಇರುವ ಕ್ಷಣಿಕ ಭೋಗಗಳು, ಮಹಂತಲಿಂಗನು ಇಂತಹ ಕ್ಷಣಿಕ ಭೋಗಗಳಿಗೆ ಮನಗೊಡನು ಎನ್ನುತ್ತಾರೆ.

ಏನು ಮೆರಸಿದರೇನು। ಏನು ಹೊದಿಸಿದರೇನು।

ಮಾನವರಿಗಾಪುಣ್ಯ ಫಲಗಳೆಂದು ॥

ತಾನು ತಾನಾದ ಶಿವ ಜ್ಞಾನಿಯಾನಂದದಿಂ।

ಮೌನನಾಗಿರುತಿಹನು ಮರ್ತ್ಯದೊಳಗೆ।

ಬಡಭಕ್ತ ಜನರಿಗೆ। ಬಡವನಾಗಿರುತಿಹನು ।

ಕಡುಧನಿಕರುಗಳಿಗೆ ಧನಿಕನಹನು ॥

ಪೊಡವಿ ಭಕ್ತರ ಭೋಗ ದೊಡನಿರ್ದು ಇಲ್ದಂತೆ ।

ಮೃಡ ಮಹಂತಲಿಂಗ ತಾ ಕಡೆಗಿರುವನು॥ 63

ಶಿವಯೋಗಿಯು ಸಾಕ್ಷಾತ್ ಶಿವನೇ ಆಗಿರುವುದರಿಂದ ಭಕ್ತಿಯಿಂದ ಮಾಡಿದ ಮಾನವರಿಗೂ ಪುಣ್ಯಫಲಗಳು ದೊರಕುತ್ತವೆ. ಆದರೆ ಜನರು ಡಾಂಭಿಕತನದಿಂದ ಏನು ಮರೆಸಿದರೇನು ಏನು ಹೊದಿಸಿದರೇನು ಆ ಪುಣ್ಯ ಮಾನವರಿಗೆ ಸಿಗುವದೆಂದು ಇದೆಲ್ಲದರ ಅರಿವಿನಿಂದ ಮೌನವಾಗಿರುತ್ತಾನೆ.

ಅರವರವರ ಭಕ್ತಿಗೆ ಅವರವರ ಭಾವಕ್ಕೆ ।

ಅವರವರ ತೆರನಾಗಿ ಇರುತಿಹನು ಶಿವಯೋಗಿ ॥ಪ॥

ಇರದೊಂದು ಕನ್ನಡಿಯ ನೂರಾರು ಜನ ಪಿಡಿಯೆ

ಸರಳಾಗಿ ಅವರವರ ರೂಪು ಕಾಣುವಂತೆ ॥

ಹರಿಯ ಭಕ್ತರಿಗೆ ಹರಿಹರನ ಭಕ್ತರಿಗೆ ಹರನರರೇನು

ಭಾವಿಸುವರದರಂತೆ ತೋರುವನು.॥ 71

ಅವರವರ ಪಾಪ ಪುಣ್ಯ ಫಲಪರೀಕ್ಷೆಯಂತೆ ಅವರಿಗೆ ಸದ್ಗತಿಯನ್ನು ಕೊಟ್ಟು ತಾ ತನ್ನ ಪಥದಲ್ಲಿರುತ್ತಾನೆ. ಭಕ್ತಿ ಮಾರ್ಗವು ಮುಕ್ತವಾಗಿರುವುದರಿಂದ ಅವರವರ ಆಂತರಿಕ ಶಕ್ತಿಯನುಸಾರವಾಗಿ ಶಿವಾರ್ಚನೆಯನ್ನು ಮಾಡಿ ಮುಕ್ತಿಯನ್ನು ಪಡೆಯುವ ಸ್ವಾತಂತ್ರ್ಯತೆ ಇದೆ ಅದು ಅವರವರ ಭಾವಕ್ಕೆ ಬಿಟ್ಟುಕೊಟ್ಟದ್ದೆಂದು ಹೇಳುತ್ತಾರೆ.

ಒಟ್ಟಿನಲ್ಲಿ ಆಧ್ಯಾತ್ಮ ಬಹು ಸೂಕ್ಷ್ಮವಾದ ಗಹನವಾದ ಅಂತರಂಗಿಕ ವಿಷಯ ಬಹಿರಂಗದಲ್ಲಿ ನಾವು ಏನೆಲ್ಲ ವೈಭವನ್ನು ಕಂಡರು ಅಂತರಂಗದ ಅನುಭವಕ್ಕೆ ಅದು ಸಾಧ್ಯವಾಗಲಾರದು, ಅಲ್ಪತನದಿಂದ ಶಿವಯೋಗಿ ಸಂತರು ಬಾಹ್ಯದ ವೈಭವಕ್ಕೆ ಮನಸೋಲಬಾರದು ಹಾಗೆಂದು ತಾವೇ ತಮಗೆ ನಿವೇದಿಸಿಕೊಂಡದ್ದನ್ನು ಕಾಣಬಹುದು, ಸಾಧಕ ಹಂತದಲ್ಲಿರುವಾಗ ಕೆಲವು ಜನವಿರಕ್ತರು ಇಂತಹ ವೈಭವಗಳಿಗೆ ಮನಸೋತು ಅಂತರಂಗದ ಐಸಿರಿಯಿಂದ ದೂರಾಗಿ ನಿಲ್ಲುತ್ತಾರೆ ಹಾಗಾಗಬಾರದೆಂದು ತಮ್ಮ ಸಾಧನೆಯ ಉದ್ದಕ್ಕೂ ಹಲವಾರು ದೃಷ್ಟಾಂತಗಳ ಮೂಲಕ ಅದರ ಅನಿಶ್ಚಿತತೆಯನ್ನು ತಿಳಿಸಿಕೊಟ್ಟಿದ್ದಾರೆ.

4.2) ಸಮಾಜ ಚಿಂತನೆ :-

ಭಕ್ತಿ-ಜ್ಞಾನ-ವೈರಾಗ್ಯ ಮೂರ್ತಿಗಳಾದ ಶಿವಯೋಗಿಗಳು ಸದಾ ಕಾಲ ಶಿವಯೋಗದ ಸವಿಯಲ್ಲಿದ್ದವರು ಮಠಾಧ್ಯಕ್ಷರಾಗಿರುವುದರಿಂದ ಸಾಮಾಜಿಕವಾಗಿ ಸಂಪರ್ಕವನ್ನು ತಳೆಯಲೇಬೇಕು, ಸಾರ್ವಜನಿಕವಾಗಿ ಭಕ್ತಿಯನ್ನು ಸಲ್ಲಿಸಲು ಗವಿಮಠ ಒಂದು ಜಾಗ್ರತ ಸ್ಥಳವಾಗಿರುವುದರಿಂದ ಭಕ್ತರು ದಿನನಿತ್ಯ ಮಠಕ್ಕೆ ಬರುತ್ತಿದ್ದರು.

ಮಠದ ಸ್ವಾಮಿಯೇ ಸಾಕ್ಷತ್ ಶಿವಸ್ವರೂಪರು ಎಂದು ತಿಳಿದು ತಮ್ಮ ಪ್ರಾಪಂಚಿಕ ಬದುಕಿನ ತಾಕಲಾಟಗಳನ್ನು ನಿವೇದಿಸಿಕೊಂಡು ಅವರ ಪ್ರಸಾದ ವಾಣಿಯಿಂದ ಅವುಗಳನ್ನು ಪರಿಹರಿಸಿಕೊಳ್ಳುತ್ತಿದ್ದರು.

ಅಂತಹ ಸಂದರ್ಭದಲ್ಲಿ ಶಿವಯೋಗಿಗಳು ನಡೆದುಕೊಳ್ಳುತ್ತಿದ್ದ ರೀತಿ ಯಾವುದು, ಅವರ ಧೋರಣೆ ಯಾವುದು ಸಾಮಾಜಿಕ ನಿಷ್ಠೆ, ಭಕ್ತಿ ಇತ್ಯಾದಿ ಭಾವನೆಗಳಲ್ಲಿ ಶಿವಯೋಗಿಗಳ ನಿಲುವು ಯಾವುದು? ಅಲ್ಲದೆ ಅಂದಿನ ಮುಳಗುಂದ ತಾಸಗಾಂವ ಸರಕಾರಕ್ಕೆ ಒಳಪಟ್ಟಿರುವುದರಿಂದ ಆ ಸರಕಾರದ ಜೊತೆಗೆ ಶಿವಯೋಗಿಗಳ ಸಂಬಂಧ ಯಾವ

ರೀತಿಯಾಗಿತ್ತು. ಸಮಾಜದ ಶ್ರೀಮಂತ-ಬಡವ ಮತ್ತು ಸ್ತ್ರೀಪುರುಷರ ಬಗೆಗೆ ಇರುವ ಹಲವಾರು ಧೋರಣೆಗಳೇನು ಎಂಬುದನ್ನು ಕುರಿತು ಅವರ ಹಾಡುಗಳ ಉಲ್ಲೇಖಗಳೊಂದಿಗೆ ನಿರೂಪಿಸಲಾಗಿದೆ.

ಪದಗಳ ಮೂಲಕ ಇಡೀ ರಾಜಸತ್ತೆಯನ್ನು ಧಿಕ್ಕರಿಸಿ ಬಂಡಾಯ ಧ್ವನಿಯ ಮೂಲಕ ವರ್ಗ, ವರ್ಣ ಲಿಂಗಭೇದಕ್ಕೆ ಮೂಲವಾಗಿರುವ ಶ್ರೀಮಂತ ವರ್ಗದ ಮತ್ತು ಪ್ರಭುತ್ವದ ವಿರುದ್ಧ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಅವುಗಳ ವಿವೇಚನೆಯು ಇಲ್ಲಿ ನಡೆದಿದೆ. [4]

4.2.1 ವರ್ಗಭೇದ :-

ಮಹಾಂತ ಶಿವಯೋಗಿಗಳು ತಮ್ಮ ಹಾಡುಗಳ ಮೂಲಕ ರಾಜಸತ್ತೆಯ ವಿರೋಧವಾಗಿ ಧ್ವನಿ ಮಾಡಿದರು, ಅಲ್ಲದೆ ರಾಜಸತ್ತೆಯಾಚೆಗೆ ನಿಂತು ತಮ್ಮ ಧಾರ್ಮಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ನೆರವೇರಿಸಿದರು ಅದಕ್ಕಾಗಿ ಹಲವು ಸಲ ಕಹಿ ಅನುಭವಗಳನ್ನು ಪಡೆಯಬೇಕಾಗಿ ಬಂದಿತು. ಅವುಗಳ ಎಲ್ಲ ಚಿತ್ರವನ್ನು ಅವರ ಹಾಡುಗಳ ಮೂಲಕ ಹೀಗೆ ನೋಡಬಹುದು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶಿವಶರಣರು ಪ್ರಭುತ್ವದ ವಿರುದ್ಧಧ್ವನಿ ಎತ್ತಿದ್ದು ಕಂಡು ಬರುತ್ತದೆ.

ಕೆಟ್ಟ ದೊರೆಯೆನಿಸಬೇಡ ಅದರಿಂದ

ನಷ್ಟ ಬಹಳಾಗುತಿಹದು ಎಲೆರಾಯ ॥ 39

ಎಂಬಲ್ಲಿ ರಾಜನು ಪ್ರಜೆಗಳ ಜತೆಗೆ ನಡೆದುಕೊಳ್ಳಬೇಕಾದ ರೀತಿಯನ್ನು ಕುರಿತು ದೀರ್ಘವಾಗಿ ಹೇಳಲಾಗಿದೆ. ರಾಜರು ಕೊಡುವ ದ್ರವ್ಯದ ಬಗ್ಗೆ ದಿವ್ಯ ನಿರ್ಲಕ್ಷವಿದೆ ಅಂತೆಯೇ ಹೀಗೆ ನುಡಿಯುತ್ತಾರೆ.

ಒಲ್ಲೆ ಪಾಪದ್ರವ್ಯವೆಂದು ಬಲ್ಲೆನಾಗಿ ದುಷ್ಟಜನರ।

ನೆಳ್ಳು ಸೋಂಕಲೆನಗೆ ಗೌರಿ ಸಂತಾಪಾಗುವುದು।

ಚೆಲ್ವ ಮಾದರ ಚೆನ್ನಣ್ಣನ ತೆಳ್ಳನಂಬಲಿ ಸವಿಯ ಮುಂದೆ ॥

ಖುಲ್ಲ ಅರಸಿ ಸಮ್ಮೃತವೆನೆಗೆ ರುಚಿಯ ದೋರದು॥ 69

ಮುಳಗುಂದದ ಗವಿಮಠವು, ಚಿತ್ರದುರ್ಗದ ಬ್ರಹನ್ಮಠದ ಶಾಖಾ ಮಠವಾಗಿರುವುದರಿಂದ ಮೂಲಮಠಕ್ಕೆ ಪ್ರತಿವರ್ಷವೂ ಕಪ್ಪುಕಾಣಿಕೆಯನ್ನು ಸಲ್ಲಿಸಬೇಕಾಗುತ್ತದೆ. ದುರಾಸೆಯಿಂದ ಕಾಣಿಕೆಯನ್ನು ಸ್ವೀಕರಿಸಲು ಬಂದಾಗ ಲಂಚ ಬೇಡಿ ವರ್ಮದಿಂದಲಿ ಕಾಡುತಿರುವ ಮರ್ಮವೇನೊ ಎಂದು ಕೇಳಿದ್ದಾರೆ. ಇದರಿಂದ ನೀನು ಕಣ್ಣು ಕಾಣದ ಪಾಪಾರಣ್ಯವನ್ನು ಬೀಳುತ್ತಿ ಎಂದು ಎಚ್ಚರಿಸುತ್ತಾರೆ.

ಹಿರಿಯ ಮಠದ ಯೋಗಿಗಳು ಏನು ಮಾಡಿದರು ನಡೆಯುತ್ತದೆ ಉಳಿದವರು ಮಾಡಬಾರದು ಎಂಬ ಭಾವವು ಇರುವುದರಿಂದ ಗುರುಮನೆಯನ್ನೆ ದಿಕ್ಕರಿಸಿ ನುಡಿಯುತ್ತಾರೆ. ಭಯ ಭಕ್ತಿಯಿಂದ ಶಿವಯೋಗಿಗಳ ದರ್ಶನಾಪೇಕ್ಷೆಯನ್ನು ಹೊಂದಿದ ಮೈಸೂರು ಮಹಾರಾಜರನ್ನು ಕುರಿತು ಹೀಗೆ ಹೇಳುತ್ತಾರೆ. ಶಿವಭಕ್ತರಾಗಿ ಹುಟ್ಟಿ ಶಿವನಿಂದೆಯನ್ನು ಮಾಡುವ ಜನರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಗುರುಭಕ್ತಿ ಗುರುಸೇವೆ ಮಾಡಿ ಸರ್ವರು ಬಡದೆ

ಹರಲೋಕ ನೈದಿದರೆ ಗುರು ನಿಂದೆಯನು ಮಾಡಿ

ದುರುಳ ಯಮಪುರಕ್ಕೆದು ಭಕ್ತರಿನ್ಯಾರುಂಟು ನಾವೆಸರಿಯೆಂದು ತಿಳಿದು

ಶಿರವುಬ್ಬಿ ಮನಕೊಬ್ಬಿ ಮದಹಚ್ಚಿ ಮೈಮೆರೆದು

ಪರಿಪರಿಯನಿಂದೆ ಪುಷ್ಪದಲಿ ನಿನ್ನನರ್ಚಿಸಿ

ನರಕ ಫಲವನು ಪಡೆಯಬೇಕೆಂಬ ಜನಕೆಲವು ಕೊಡು ಫಲವ ಮಹಂತಲಿಂಗ॥21 ಎನ್ನುತ್ತಾರೆ. ಈ ಪ್ರಪಂಚದಲ್ಲಿ ಇಂತಹ ಜನ ತುಂಬಿದ್ದಾರೆ. ಅಂತಹವರಿಗೆ ನರಕ ಫಲವನ್ನೆ ಕೊಡೆಂದು ಹೇಳುತ್ತಾರೆ. ಶ್ರೀಮಂತರು, ಭಿನ್ನಮತೀಯರು ಶಿವನಿಂದೆಯಲ್ಲಿ ತೊಡಗಿ ತಾವೇ ಹೆಚ್ಚೆಂದು ಕೊಬ್ಬಿ ನಡೆಯುತ್ತಾರೆ. ಅಂಥವರಿಗೆ ಸರಿಯಾರು ಇಲ್ಲ. ಎಂಬಲ್ಲಿ ಶಿವನೇ ಕೊನೆ ಎಂಬ ಭಾವವು ತುಂಬಿಕೊಂಡಿದೆ. [7]

4.2.2 ವರ್ಣಭೇದ :–

ನಾಲ್ಕು ವರ್ಣಗಳಲ್ಲಿ ವಿಂಗಡಿಸಲ್ಪಟ್ಟ ಈ ಸಮಾಜವು ಕಾಲಕ್ರಮೇಣ ಹಲವಾರು ವಿಭಾಗಗಳಲ್ಲಿ ಜಾತಿಯಾದಾರಗಳಲ್ಲಿ ಸಮಾಜವನ್ನು ಛಿದ್ರ ವಿಚ್ಛಿದ್ರವಾಗಿದೆ.

'ಉತ್ತಮ ಕುಲದಲ್ಲಿ ಹುಟ್ಟಿದನೆಂದು ಕಷ್ಟತನದ ಹೊರೆಯ ಹೊರಸದಿರಯ್ಯ" ಮತ್ತೊಂದು ಕಡೆಗೆ 'ಅನುಹಾರುವನೆಂದರೆ ನಗುವನಯ್ಯ ಕೂಡಲಸಂಗಮದೇವ ಎಂದು

ವರ್ಣವ್ಯವಸ್ಥೆಯ ವಿರುದ್ಧದೋರಣೆಯನ್ನು ವ್ಯಕ್ತ ಮಾಡಿ ಎಲ್ಲರೂ ಸಮಾನರು ಎಂಬ ವಿಚಾರವನ್ನು ಹೇಳಿ ಎಲ್ಲರೊಂದಿಗೆ ಸಮಾನ ಸಂಪರ್ಕವನ್ನು ಇಟ್ಟುಕೊಂಡು ಬದುಕಿ ಆದರ್ಶನಾದವನು, ಹೀಗಿರುವ ಸನಾತನ ಧರ್ಮದ ಪ್ರಭಾವವು ಇವತ್ತಿಗೂ ಉಳಿದಿರುವುದನ್ನು ಕಂಡಾಗ ಶಿವಯೋಗಿಗಳ ಬದುಕಿನಲ್ಲಿ 19ನೇ ಶತಮಾನದ ಪೂರ್ವಾರ್ಧದಲ್ಲಿ ರಾಜಸತ್ತಿಗೆಯ ನೆರಳಲ್ಲಿ ವರ್ಣವ್ಯವಸ್ಥೆ ಉಳಿದು ಬಂದಿರುವುದು ಸಹಜವಿದೆ.

ಶಿವಯೋಗಿಗಳು ದೇಶಸಂಚಾರ ಮಾಡುತ್ತ ಲಿಂಗನಾಯಕನ ಹಳ್ಳಿಗೆ ಬಂದು ನಿಂತಾಗ ಆತನ ಸಾಧನೆಗೆ ತೊಡಕುಗಳು ತಲೆದೋರಿದವು, ವೀರಶೈವಧರ್ಮ ದೀಕ್ಷೆಯಾಗಬೇಕು, ಅನ್ಯಜಾತಿಯವರಿಗೆ ದೀಕ್ಷೆಕೊಟ್ಟರೆ ತನ್ನ ಗುರುತ್ವನಾಶವಾಗುತ್ತದೆ, ಎಂಬ ಭೀತಿಯಿಂದ ಯಾರು ಆ ಅನಾಥ ಮಗುವಿಗೆ ದೀಕ್ಷೆ ಕೊಡಲು ಮುಂದೆ ಬರಲಿಲ್ಲ. ಚೆನ್ನವೀರ ಸ್ವಾಮಿಗಳು ಮುಂದೆ ಲೋಕ ವಿಖ್ಯಾತ ಶಿವಯೋಗಿಯಾಗಿ ಮೆರೆಯಲಿರುವ ಈ ಚೈತನ್ಯ ಮೂರ್ತಿಯನ್ನು ಕಂಡು ಪ್ರೀತಿಯಿಂದ ಕರೆದು ಕಪ್ಪತ್ತಗುಡ್ಡದಲ್ಲಿ ತಪಸ್ಸು ಮಾಡುವ ಶಾಂತವೀರಯತಿಗಳಿಂದ ದೀಕ್ಷೆಕೊಡಿಸಿದರು. ಅಲ್ಲಿಂದ ಆತನ ಯೋಗಭ್ಯಾಸ ಪ್ರಾರಂಭವಾಯಿತು. ಹೀಗೆ ಬಾಲ್ಯದಲ್ಲಿಯೇ ವರ್ಣವ್ಯವಸ್ಥೆಯ ಕಹಿ ಅನುಭವವನ್ನು ಉಂಡ ಶಿವಯೋಗಿಗಳು ತಮ್ಮ ಹಾಡುಗಳಲ್ಲಿ ಹಲವಾರು ಕಡೆಗೆ ವ್ಯಕ್ತಮಾಡಿದ್ದಾರೆ.

ಶ್ರೀಗಳು ಮುಳಗುಂದಕ್ಕೆ ಬಂದು ನೆಲೆ ನಿಂತಾದ ಮತೀಯ ಗಲಭೆಯ ಸಾಕಷ್ಟಿದ್ದವು ಬ್ರಿಟಿಷರ ಚಲಾವಣೆಯಿಂದ ತಾಸಗಾಂವ ಸರಕಾರವು ಇಲ್ಲದ ಕ್ಷೋಭೆಗಳನ್ನು ಉಂಟು ಮಾಡಿ ಸಾಮಾಜಿಕ ಭೇದ ವರ್ತನೆಯಿಂದ ದುರ್ನೀತಿಯನ್ನು ಬಿತ್ತರಿಸುತ್ತಿದ್ದರು ಕೆಲವು ಸಂದರ್ಭದಲ್ಲಿ ಮಠದವರೆಗೂ ದಾಂಡಿಗರನ್ನು ಕಳಿಸಿಕೊಟ್ಟಿದ್ದರು.ಶಿವಯೋಗಿಗಳ ಒಡನಾಟದಲ್ಲಿರುವ ಸಾತ್ವಿಕ ಭಾವದ ವ್ಯಾಪಾರಿಯಾದ ಗಣಂಗಳಪ್ಪನವರು ತಮ್ಮ ಅಂಗಡಿಯ ಎದುರಿಗೆ 'ಬೇಡಿದವರಿಗೆ ಬೇಡಿದ್ದು ಕೊಡುತ್ತೇನೆ" ಎಂದು ಬೋರ್ಡು ಹಾಕಿದ್ದರು. ಇದು ಭಿನ್ನಮತೀಯರಿಗೆ ತೊಂದರೆಯಾಯಿತು ಇದರ ಬಗ್ಗೆ ಸರಕಾರಕ್ಕೆ ಜಾಡಿಹೇಳಿದರು. ಶಿವಯೋಗಿಗಳ ಮೇಲೆ ಆರೋಪ ಬಂತು, ಆಗ ಕೋರ್ಟಿಗೆ ಬಂದು ಸಾಕ್ಷಿ ನುಡಿದರು.

ಹಲವಾರು ಸಲ ಆ ವರ್ಣಸಂಕರಕ್ಕೆ ತಲೆಕೊಡಲು ಹೋಗದೆ ಬಾಲಭಾವದಲ್ಲಿ ನಿಂತು ನಕ್ಕು ಬಿಡುತ್ತಿದ್ದರು, ಹೀಗಾಗಿ ಆ ಸಾಂದರ್ಭಿಕ ಬೆಳವಣಿಗೆಯೇ ಅವರ ಹಾಡುಗಳಲ್ಲಿ ನಿರರ್ಗಳವಾಗಿ ಬಂದಿದೆ.

" ಸಮಾಜವೆನ್ನುವುದು ನಾವು ರೂಪಿಸಿಕೊಂಡ; ಪ್ರಧಾನವಾಗಿ ಸ್ವಾರ್ಥಿಗಳು ರೂಪಿಸಿದ ಒಂದು ವ್ಯವಸ್ಥೆ, ಪುರೋಹಿತರಿಂದ ವರ್ಣಬೇಧ, ರಾಜರಿಂದ ವರ್ಗಬೇಧ, ಪುರುಷರಿಂದ ಲಿಂಗಭೇದ ವ್ಯವಸ್ಥೆಗಳು ನಮ್ಮ ಸಮಾಜದಲ್ಲಿ ನಿರ್ಮಾಣವಾಗಿದೆ". ಇವುಗಳ ವಿರುದ್ಧವಾಗಿ ನಿಂತು ಶಿವಯೋಗಿಗಳು ಧ್ವನಿ ಮಾಡಿದ್ದಾರೆ.

" ವರ್ಣಬೇಧ ಭಾರತೀಯ ಜನಾಂಗದ ಒಂದು ಅಭಿಶಾಪ, ಈ ಬೇಧದಿಂದ ಸಮಾಜಸ್ಪರ್ಶ–ಅಸ್ಪರ್ಶ ಎರಡು ಸ್ಥಾವರಗಳಲ್ಲಿ ಘನೀಭೂತಗೊಂಡಿದೆ",

ಇವನಾರವ ಇವನಾರವ ಇವನಾರವನೆಂದೆನಿಸಿದರಯ್ಯ

ಇವ ನಮ್ಮವ ಇವನಮ್ಮವ ಇವನಮ್ಮವನೆಂದಸಯ್ಯ

ಕೂಡಲ ಸಂಗಮದೇವ

ನಿಮ್ಮ ಮನೆಯ ಮಗನೆಂದೆನಿಸಯ್ಯ

ಎಂಬ ಶರಣವಾಣಿಯ ವರ್ಗ ವರ್ಣ ಹಾಗೂ ಲಿಂಗ ಭೇದ ವನ್ನು ಕಿತ್ತೊಗೆದು ಮನುಕುಲವು ಒಂದೇ ಭೇದ ಒಳಿತಲ್ಲ ಎಂಬ ಸಂದೇಶವನ್ನು ಸಾರುತ್ತದೆ.ಶಿವಯೋಗಿಗಳು ಸಾಮಾಜಿಕವಾಗಿ ಸ್ಪಂದಿಸಿ ಅಲ್ಲಿರುವ ವರ್ಣಬೇಧ ವಿಚಾರಗಳಿಗೆ ವಿರೋಧ ಧ್ವನಿಯನ್ನುಂಟು ಮಾಡಿದರು.

ಸರ್ವಸಂಗ ಪರಿತ್ಯಾಗ ಮಾಡಿದ ಈ ವಿರಕ್ತರು ಸಮಾಜದ ಹೊರಗಿನಿಂದಲೇ ಅದರ ಸುಧಾರಣೆಯನ್ನು ಬಯಸಿರುವುದರಿಂದ ಪ್ರಾಪಂಚಿಕ ವ್ಯವಹಾರದಲ್ಲಿ ಅಷ್ಟೊಂದು ಪರಿಣಾಮ ಕಾಣದೇ ಹೋಗಿದೆ ಆದರೂ ಪ್ರಜ್ಞಾವಂತ ಆತ್ಮ ಸೌಂದರ್ಯವುಳ್ಳ ಕೆಲವರಲ್ಲಿಯಾದರೂ ಶಿವಯೋಗಿಗಳ ಮಾತು ಅನುಶಾಸನದಂತೆ ಉಳಿದಿದೆ. ಅವರು ಹಾಡುಗಳು ಇವತ್ತಿಗೂ ಆ ತತ್ವವನ್ನು ಹೊತ್ತುಕೊಂಡು ಶಾಸನಗಳೇ ಆಗಿವೆ ಅವರ ಮಾತು ಇವತ್ತಿಗೂ ಮೌಲ್ಯವನ್ನು ಬಾಳುತ್ತದೆ ಎಂದು ಹೇಳಬಹುದು.[3]

4.2.3 ಲಿಂಗಭೇದ:-

ನಮ್ಮ ಕುಟುಂಬ ರಚನೆಯಲ್ಲಿ ಸಮಾನಸ್ಥಾನ ಕಲ್ಪಿಸಿದರೂ ಬಹಿರಂಗದಲ್ಲಿ ಪುರುಷನೇ ಪ್ರಧಾನವಾಗಿ ನಿಲ್ಲುತ್ತಾನೆ. ಅನಾದಿ ಕಾಲದಿಂದಲೂ ಸ್ತ್ರೀಯರಿಗೆ ಸಾಮಾಜಿಕವಾಗಿ ಕೌಟುಂಬಿಕ ಆಧ್ಯಾತ್ಮಿಕವಾಗಿ ತೀರ ಭಿನ್ನವಾದ ಸ್ಥಾನ ಗೌರವವಿದೆ.

ಭಾರತೀಯ ಪ್ರಾಚೀನ ಧರ್ಮಗಳಲ್ಲಿ ಸ್ತ್ರೀಯರಿಗೆ ಸಮನಾವಾದ ಸ್ಥಾನ ಕಲ್ಪಿತವಾಗಿಲ್ಲ, ನಾಗರೀಕತೆಯ ಬೆಳೆದಂತೆ ಧಾರ್ಮಿಕ ವಿಧಿವಿಧಾನಗಳಲ್ಲಿ ಪ್ರವೇಶದೊರಕಿತು. ಆ ಕ್ಷಣದಿಂದ ಆ ಧರ್ಮದ ವಿನಾಶ ಪ್ರಾರಂಭವಾಯಿತೆಂಬ ಮಾತು ಇತಿಹಾಸ ಪ್ರಸಿದ್ಧಿವಾಗಿದೆ, ವೀರಶೈವ ಧರ್ಮದಲ್ಲಿ ಅಂತಹ ಕಟ್ಟುನಿಟ್ಟಾದ ನಿಯಮಗಳೇನು ಇಲ್ಲ ಬಸವಣ್ಣನ ಮುಕ್ತ ವಾತಾವರಣದಲ್ಲಿ ಅವರವರ ಆಂತರಿಕ ಶಕ್ತಿಗನುಗುಣವಾಗಿ ಸಾಧನೆಗೈದು ಶಿವನ ಸನ್ನಿದಾನ ಪಡೆಯಬಹುದು ಅಕ್ಕಮಹಾದೇವಿ-ಮೊದಲು ಮಾಡಿಕೊಂಡ 20ನೇಯ ಶತಮಾನದ ಸಜ್ಜಲಗುಡ್ಡದ ಶಿವಶರಣಮ್ಮನವರವರೆಗೂ ಹಲವಾರು ಜನ ಶಿವಶರಣಿಯರು ತಮ್ಮ ಶಿವಯೋಗದ ಬಲದಿಂದ ಲೋಕಮಾನ್ಯತೆಯನ್ನು ಪಡೆದಿದ್ದಾರೆ.

ಸಂಸಾರದೊಳಗೆ ಸದ್ಗತಿಯೆಂದು ಕೇಳಮಗನೆ।
ಬಸವಾದಿ ಪ್ರಮಥರಿಗೆನಿದ್ದಲ್ಲವೇ॥ 35

ಎಂಬ ಮಾತಿನಿಂದ ಸಂಸಾರವನ್ನು ತ್ಯಜಿಸಿ-ತಪಸ್ಸಿಗೆ ಹೋಗಿ ಸಾಧನೆಯನ್ನು ಮಾಡಲು ಹೇಳುವುದಿಲ್ಲ. ಬಸವಾದಿಗಳು ಸಂಸಾರಿಗಳಾಗಿ ಸದ್ಗತಿಯನ್ನು ಪಡೆದಂತೆ ನೀವು ಆಗಲು ಬರುತ್ತದೆ, ಎಂಬ ವಾದವನ್ನು ಪುಷ್ಟಿಕರೀಸುವುದರಿಂದ ಶಿವಯೋಗಿಗಳ, ಸಾಹಿತ್ಯದಲ್ಲಿ ದ್ವಂದ್ವ ಭಾವನೆಯು ಕಂಡು ಬರುತ್ತದೆ, ಅಂದರೆ ಇಷ್ಟೆ ಶಿವಯೋಗಿಗಳು ಕಟ್ಟಾ ವೀರಶೈವ ಸಾಧಕರಲ್ಲ, ಅವರಲ್ಲಿ ಶೈವ-ವೀರಶೈವದ ಮಿಶ್ರಧೋರಣೆಗಳು ಕಂಡು ಬರುವುದರಿಂದ ತತ್ವಕ್ಕಿಂತ ಆಚರಣೆಯ ಕಡೆಗೆ ಹೆಚ್ಚು ಮಹತ್ವಕೊಟ್ಟು ಜನರ ನಡೆ ನುಡಿಯನ್ನು ತಿದ್ದುವ ಮಹಾದಾಸೆಯನ್ನು ಹೊತ್ತವರು, ಆದ್ದರಿಂದ ಪ್ರಾರಂಭದ ಘಟ್ಟದಲ್ಲಿ ತೊಡಕಾಗಿರುವ ಸಂಸಾರ ವ್ಯಾಮೋಹದಿಂದ ದೂರವಾಗಿ ಶಿವಯೋಗವನ್ನು ನಡೆಸಿ ನಂತರ ಅಂತರಂಗದ ಅರಿವಿನಿಂದ ಪಾರ್ವತಿ ಸ್ವರೂಪದಲ್ಲಿ ಶಕ್ತಿ ಸಂಕೇತವಾಗಿ ಆಕೆಯನ್ನು ಪೂಜಿಸಿದ್ದಾರೆ ಎಂದು ಹೇಳುತ್ತಾನೆ.

"ಜ್ಯೋಕೆ ಕಂಡ್ಯಾ ಆತ್ಮಾ ಜೋಕೆ ಕಂಡ್ಯಾ।

ಕಾಕು ಸ್ತ್ರೀಯರ ಬಳಗವನೇಕ ಬರುತಿಹದಿಲ್ಲ॥ 12

ಮೈಸೂರು ಅರಸನಲ್ಲಿಗೆ ಭೇಟಿ ಕೊಟ್ಟಾಗ ಅರಮನೆಯ ಅಂಗನೆಯರು ಪಾದಮುಟ್ಟಿ ಸೇವೆ ಮಾಡುತ್ತಿರುವಾಗ ತಮ್ಮನ್ನು ಎಚ್ಚರಿಸಿಕೊಂಡಿದ್ದಾರೆ.

ಈ ಮರವೆಯ ಮನೆಯೊಳಗೆ ಅರುವಿಲ್ಲದಂಗನೆಯರು ಒಂದು ಪರಿಪರಿಯಾಗಿ ಮರುಳು ಮಾಡುತ್ತಾರೆ, ಅವರೆಲ್ಲ ಕಾಕು ಸ್ತ್ರೀಯರು, ಜೋಕೆಯಿಂದಿರು, ವಿರತಿ ವಿರತಿ ಎಂದು ಬಾಯಿಂದಲೇ ನುಡಿದರೆ ಆಗುವುದಿಲ್ಲ, ಅದು ಅನುಭವಕ್ಕೆ ಬಂದಾಗ ಅದರ ಮಹತ್ವ ತಿಳಿಯುತ್ತದೆ ಈವರೆಗೆ ನೀನು ಸ್ತ್ರೀಯರ ಅಂಗ ವಿನ್ಯಾಸ ಸೊಬಗು ಲಾವಣ್ಯ ಇತ್ಯಾದಿಗಳನ್ನು ನೋಡಿಲ್ಲ ಆದರೆ ಈಗ ನಿನ್ನ ಮುಟ್ಟಿ ಮಾತಾಡಿಸಿ, ಮರಳು ಮಾಡುವ ಸಂದರ್ಭದಲ್ಲಿ ನಿಜವಾದ ವಿರತಿ ಗೊತ್ತಾಗುತ್ತದೆ. ಅಂತಹ ವಿರಕ್ತನಾಗಿರುವಂತೆ ಕಾಕು ಸ್ತ್ರೀಯರಿಂದ ತನ್ನನ್ನೂ ತಾನು ರಕ್ಷಿಸಿಕೊಳ್ಳುವಂತೆ ಹೇಳಿಕೊಂಡಿದ್ದಾರೆ.

ಕಾಯೆ ಕರ್ಪೂರವೊಲ್ಲ ಹಣ್ಣು ಸಕ್ಕರೆಯೊಲ್ಲ ।

ತಾಯ್ದೆರು ಬಂದುಹಾಡಿ ತೂಗಿದರೆ ನಲಿವ ।

ಚಿನ್ನ ಬೆಳ್ಳಿಯನೊಲ್ಲ ರತ್ನ ಮುತ್ತುಗಳೆಲ್ಲ ಮನ್ನಿಸಿ।

ಮನಮುಟ್ಟಿ ತೂಗಿದರೆ ನಲಿವ। 88

ಹೀಗೆ ಶಿವನ ಒಲುಮೆಗೆ ಪಾತ್ರವಾದ ಸ್ತ್ರೀಯರೆಲ್ಲ ರನ್ನೂ ನೆನೆಯುತ್ತ ತಂಗಿ ತಾಯಿಯರ ಸ್ಮರಿಸಿದ್ದಾನೆ, ಇಲ್ಲೆಲ್ಲೂ ಲಿಂಗ ಬೇಧ ಮಾಡಿದ್ದು ಕಂಡು ಬರುವದಿಲ್ಲ ತಾಯಿಯಿಲ್ಲದ ತಾನು ಮಕ್ಕಳನ್ನು ಕಳೆದುಕೊಂಡ ಬಸಮ್ಮನಿಗೆ ಮಗನಾಗಿ ಕಾಣಿಸಿಕೊಳ್ಳುತ್ತಾನೆ. ಆಕೆಯ ಬರಡುದಾ ಬದುಕಿಗೊಂದು ಚೈತನ್ಯ ಶಕ್ತಿಯಾಗಿ ನಿಲ್ಲುತ್ತಾರೆ, ಇವರ ದೃಷ್ಟಿಯಲ್ಲಿ ಲಿಂಗಭೇದ ಎಲ್ಲಿಯೂ ಕಾಣಿಸಿಕೊಂಡಿಲ್ಲ ಬಸವಾದಿ ಪ್ರಮಥರ ಸಮಾನ ದೃಷ್ಟಿಕೋನ ಇರುವುದನ್ನು ಕಾಣುತ್ತೇವೆ.

4.3. ಮನುಕಲ್ಯಾಣ

ಶಿವಯೋಗಿಗಳ ಪದಗಳಲ್ಲಿ ಮಾನವ ಕಲ್ಯಾಣಪರ ಮಾತುಗಳು ಹಾಸುಹೊಕ್ಕಾಗಿವೆ, ಅಧ್ಯಯನಕೋಸ್ಕರ 3 ಹಂತಗಳಲ್ಲಿ ವಿಂಗಡಿಸಿ ನೋಡಲಾಗಿದೆ.

4.3.1 ಆತ್ಮಬೋಧನೆ :–

ಕೆಲವರು ಮಹಾನುಭಾವರಾಗಿಯೇ ಹುಟ್ಟುತ್ತಾರೆ, ಮತ್ತೆ ಕೆಲವರು ಪರಿಸರ ಶಿಕ್ಷಣ, ಮತ್ತು ಸಂಸ್ಕಾರ ಬಲದಿಂದ ಮಹಾನುಭಾವರಾಗಿ ಬೆಳೆದು ನಿಲ್ಲುತ್ತಾರೆ ಅಂತಹ ಮಹಾನುಭಾವರಲ್ಲಿ ಮಹಂತ ಶಿವಯೋಗಿಗಳು ಒಬ್ಬರು, ತಮ್ಮ ಆಧ್ಯಾತ್ಮ, ಶಿಕ್ಷಣ, ಶಿವಯೋಗದ ಪರಿಸರ, ಗುರುಗಳ ಸಂಸ್ಕಾರ ಬಲದಿಂದ ಲೋಕ ವಿಲಕ್ಷಣವಾದ ಆತ್ಮಜ್ಞಾನದ ಸ್ಮರಣೆಯನ್ನು ಪಡೆದು ಮಾನವೀಯ ಅಂಶಗಳನ್ನು ಹೊತ್ತವರು. ಆದ್ದರಿಂದಲೇ ಅವರ ಹಾಡುಗಳಲ್ಲಿ ವೈಯುಕ್ತಿಕ ಉದ್ಧಾರದಂತಹ ಸಾಧಕ ಜೀವನದ ಹಲವು ಹತ್ತು ನೆಲೆಗಳು ವಸ್ತುವಾಗಿ ನಿಂತು ಅದಕ್ಕೆ ಎತ್ತರ ಹುಡುಕುವ ರೀತಿಯಲ್ಲಿ ರಚಿತವಾಗಿವೆ.

ಶಾಸ್ತ್ರ, ಹಾಗೂ ಜಡವೇದಾಂತಗಳಲ್ಲಿ ಸಿಲುಕಿ ತಮ್ಮ ಉದರ ಪೋಷಣೆಗಾಗಿ ಧರ್ಮದ ತಿರುಳನ್ನು ವರ್ಣ, ವರ್ಗ, ವ್ಯವಸ್ಥೆಯಲ್ಲಿ ಬಂದಿಸಿ ನೀತಿ ಕೆಡಿಸಿದ್ದರು, ಅದನ್ನು ಕುರಿತು ಹೀಗೆ ನುಡಿಯುತ್ತಾರೆ.

"ಮೃಡನೆ ಶಾಸ್ತ್ರಗಳು ತಮ್ಮೊಡಲಿಗಲ್ಲದೆ ಬೇರೆ

ತಡಿಯ ಕಾಣಿಸವೆಂದು ನಿಮ್ಮೊಡಿಯ ಪಿಡಿದೆ ॥ 1

ನರಜನ್ಮ ದೊರಕುವದೆಂದು ಸರ್ವರಿಗೆ।

ಅರಿವು ತಾಹುಟ್ಟುವದೆಂದು ಜ್ಞಾನುಳ್ಳ।

ಪರಮಗುರು ದೊರಕುವದೆಂದು ಇವರಿನ್ನು

ಸ್ಥಿರಮುಕ್ತರಾಗುವದೆಂದು ನಾ ಕಾಣೆ। 40

ಎನ್ನುವಲ್ಲಿ ನರಿ, ನಾಯಿ ಕುರಿಯಾಗಿ ಜನ್ಮಾಂತರಗಳ ಬಾಧೆಯಲ್ಲಿ ಸಿಲುಕುವ ಜನತೇ ಎಂದಿಗೆ ಜ್ಞಾನವನ್ನೇ ಪಡೆಯುವದು ಅವರು ಮುಕ್ತರಾಗುವುದು ಯಾವಾಗ ಎಂಬ ಚಿಂತೆಯಿಂದ ಬಳಲಿ ಶಿವನಲ್ಲಿ ಇದು ಧರ್ಮವೆ ಶಂಕರ ಎಂದು ಹೇಳಿಕೊಂಡಿದ್ದಾರೆ.[8]

ಹೀಗೆ ಹಲವಾರು ಕಡೆಗೆ ಶಿವಯೋಗಿಗಳು ತಮ್ಮ ತಪ್ಪನ್ನೇ ಅಲ್ಪತನವನ್ನು ಜೀವನ ದುರ್ವತನೆಯನ್ನೇ ದುರ್ನಿತಿಗಳನ್ನೆ ಮಾಡಿಕೊಳ್ಳುತ ಎಲ್ಲಿಯು ತಮ್ಮ ಆತ್ಮ ಬಲಿ ಸೊರಗದಂತೆ ಜಾಗೃತ ವಹಿಸಿದ್ದಾರೆ. ಈ ರೀತಿ ಹಲವಾರು ಪದಗಳು ದರ್ಪಣದಲ್ಲಿ ಕಂಡು ಬಂದಿದೆ .

4.3.2. ಸಮಾಜ ಬಾಧೆ :

ಬಸವಾದಿ ಪ್ರಥಮರಂತೇ ಜನಕಲ್ಯಾಣವನ್ನೇ ಉಸಿರಾಗಿಸಿಕೊಂಡು ಪ್ರತಿಕ್ಷಣದಲ್ಲಿ ಕಂಡು ಬಂದಿರುವ ಅಂಕುಡೊಂಕನ್ನೆ ತಿದ್ದಿದ್ದಾರೆ,

ಕದನ ಕರ್ಕಶದಿಂದೆ ಜರಿದೆ ನೀನನ್ಯರನು

ಮದಸೊರೈದಾನೆಯೊಲ್ ಜರಿಯೆದಿರು ಮನುಜಾ ॥ 4

ಎಂದು ಈ ಪ್ರಪಂಚದಲ್ಲಿ ಜೀವಿಸಿರುವಾಗ ಸೊಕ್ಕಿನಿಂದ ಮರೆಯಬಾರದು ಗುರು ಹಿರಿಯರನ್ನು ಕಂಡು ಕೋಣದಂತೆ ಶಿರಬಾಗದೇ ಮರೆತು ಇರಬಾರದು ಎಂದು ಎಚ್ಚರಿಸುತ್ತಾರೆ. ಭಕ್ತಿಯ ವಿಡಂಬನಾತ್ಮಕ ಸ್ಥಿತಿಯನ್ನು ಹೇಳುತ್ತ ಅದು ಹೇಗಿರಬೇಕು ಹೇಗಿರಬಾರದು ಎಂದು ಹೇಳುವಲ್ಲಿ ಅಪಾರವಾದ ಸಲಹೆಗಳನ್ನು ಮಾಡುತ್ತಾರೆ.

ಈ ಲೋಕದ ಜನರ ಭಕ್ತಿಯ ಡಾಂಬಿಕವಾಗಿರದೇ ಅದು ಶಿವನಂಬಿಕೆಯನ್ನೇ ಕಳೆದುಕೊಂಡಿದೆ ಎನ್ನುತ್ತಾರೆ.

ಹೊಂದಿಕೆಯಿಲ್ಲದೆ ಸಂದೇಹದಿ ಶರ।

ಣೆಂದರ ಏನಹುದರಿಂದ॥ 20

ಭಕ್ತಿಯು ವೈಯಕ್ತಿಕವಾದದ್ದು ಬೇರೆ ಬೇರೆಯವರಿಂದ ಮಾಡಿಸಲಾಗದು ಆದರೆ ಶ್ರೀಮಂತರು ಅವರ ಹೆಂಡಂದಿರರು ತಮ್ಮ ಸಡಗರದಲ್ಲಿ ಶಿವಪೂಜೆಯನ್ನು ಬೇರೆಯವರ ಕಡೆಯಿಂದ ಮಾಡಿಸುತ್ತಾರೆ, ತಾವು ಬರುವುದಿಲ್ಲ ಅಂತೆಯೇ ಮೈಸೂರು ಮಹಾರಾಜರು ಶ್ರೀಗಳ ದರ್ಶನಾಪೇಕ್ಷಿಯಾಗಿ ದೂತರನ್ನು ಮುಳಗುಂದಕ್ಕೆ ಕಳಿಸಿದಾಗ ನಾಳೆನಾಳೆ ಎಂದು ತಿಂಗಳುಗಟ್ಟಲೇ ಮುಂದೆ ಹಾಕುತ್ತಾರೆ, ಕೊನೆಗೊಮ್ಮೆ ಇತ್ತ ಶ್ರೀಗಳ ದಾರಿಯನ್ನು ಕಾಯ್ದು ಬೇಸತ್ತು ಸ್ವತಃ ಮಹಾರಾಜರೇ ಹೊರಟು ಬರಲು ಅದನ್ನು ತಿಳಿದಾಗ ಶ್ರೀಗಳು ಒಪ್ಪಿಕೊಳ್ಳುತ್ತಾರೆ, ಹೀಗೆ ಅವರ ಮನಪರಿವರ್ತನೆಯನ್ನು ಮಾಡುತ್ತಿದ್ದರು, ಹೀಗೆ ಜನರಲ್ಲಿ ಅವರ ಡಾಂಬಿಕತೆಯನ್ನು ಹೋಗಲಾಡಿಸಿ ಭಕ್ತಿ ಅಂಕುರಿಸಿ ಉಪದೇಶ ಮಾಡುತ್ತಾರೆ

ಅವರ ಸಂಗವೇ ಜ್ಞಾನ ದರ್ಶನ ಶಿವದರ್ಶನವೆಂದು ಹೇಳಬಹುದು.

ಶಿವದರ್ಶನಕ್ಕಾಗಿ ನಿತ್ಯಜನರು ಗವಿಮಠಕ್ಕೆ ಬರುತ್ತಾರೆ, ಅವರನ್ನು ಕಂಡು ಹೀಗೆ ಹೇಳಿರಬೇಕು, ಅಂತರಂಗದ ಅರಿವಿಲ್ಲದೆ ದರುಶನ ಮಾಡಿದರೆ ಏನುಫಲ ಎಂದು ಕೇಳಿದ್ದಾರೆ.

ಅಜ್ಞಾನಗಾಂಪ ದರುಶನದಿಂದ ಫಲವೇನು

ಅಜ್ಞಾನಗಾಂಪ ಭಕ್ತಿಯಮಾಡಿ ಫಲವೇನು ॥ಪ॥

ಗೌರಿಕೇಳ ಮುಕ್ತರಾಗೈಯುದು ಹಾಂಗಿರಲಿವರ

ಪುಣ್ಯದೇಹಿಗಳಾಗಿ ಹೋದರೆ ಸಾಕು

ದುರುಳ ಯಮರಾಜನಿವರಾಪ್ತನಾಗಿಹನೇನೋ

ನರರ ಧೈರ್ಯವು ಬಹಳ ಪಾಪಕಂಜುವುದಿಲ್ಲ ॥ 100

ಬಕ್ತಿಯು ಅಜ್ಞಾನದಿಂದ ಕೂಡಿದರೆ ಫಲವಿಲ್ಲ, ಅದರಿಂದ ನಾನಾರೋಗ ರುಜಿನಗಳು ಮುಸುಕುವವು, ಬಡತನ ಚಿಂತೆ ಇಲ್ಲದಿದ್ದರೆ ದಕ್ಷನಂತೆ ಮೆರೆದು ಶಿವನ ಮೇಲೆ ಏರಿ ಮರೆಯುತ್ತಾರೆ, ಆದ್ದರಿಂದ ಈ ರೀತಿಯ ಅಜ್ಞಾನದಿಂದ ತುಂಬಿದಾಗ ಶಿವಯೋಗಿಯ ದರ್ಶನ ಮಾಡಿಯೂ ಫಲವಿಲ್ಲ ಎನ್ನುತ್ತಾನೆ.

ಅನೇಕ ಜನರು ಪುಣ್ಯಪ್ರಾಪ್ತಿಯಾಗಿ ಹಲವು ಮಾರ್ಗಗಳನ್ನು ಹಿಡಿದು ಹೋದದ್ದುಂಟು ಆದರೆ ಆ ಪುಣ್ಯ ದೊರಕುವುದು ಒಂದೇ ಭಾವದಿಂದ ಶಿವನನ್ನು ಒಲಿಸಿಕೊಂಡು ಒಂದಾಗಬೇಕು ಅಜ್ಞಾನದಿಂದ ಜ್ಞಾನಜ್ಯೋತಿ ಬೆಳಗಲಾರದು, ಎಂದು ಹೇಳುತ್ತಾ ಆ ಪುಣ್ಯ ಪ್ರಾಪ್ತಿಯಿಂದ ಸಕಲ ಭೋಗಭಾಗ್ಯಗಳು ದೊರೆಯುತ್ತವೆ ಎಂದು ಹೇಳುತ್ತಾರೆ.

ಮಠ ಮಾನ್ಯಗಳ ಹಿರಿಯ ಸ್ವಾಮಿಗಳೇ ಒಡಕು ಬುದ್ಧಿಯಿಂದ ಅಧಿಕಾರ ಅಂತಸ್ತ ಬಯಸಿಧರ್ಮಲಂಪಟದಿಂದ ಜಗದ್ಗುರುಗಳಾಗಿ ಮೆರೆಯುತ್ತಾರೆ ಅಂಥವರಿಗೆ

ಮೃಡ ನಿನ್ನ ಸತ್ಕಾರ್ಯಕಡೆಸುವರಿಗಂದಳವನೇರುವ।

ಸಿರಿಗರ್ವಕೊಡು ನೀ । 121

ಎಂದು ವಿಡಂಬನಾತ್ಮಕ ಲೋಕನೀತಿಯನ್ನು ಕುರಿತು ಹೇಳಿದ್ದಾರೆ.

"ಕೇಳು ಸಜ್ಜನ ಸದಾಚಾರ ಸದ್ಧರ್ಮ ಗುಣ

ಶೀಲ ಸಮ್ಯಜ್ಞಾನ ವೀರಶೈವದ ಭಕ್ತಿ

ಲೋಲ ಸನ್ಮತಿಚಂದ್ರ ವೀರಾಂಬಿಕೆಯ ಮೋಕ್ಷವೆಂಬ

ದೊಂದೆಸೆಯೊಳಳವೆ। 141.

ಎಂಬಲ್ಲಿ ಸದಾಚಾರಿಯ ಎಲ್ಲ ಗುಣಗಳನ್ನು ಪಟ್ಟಿಮಾಡಿ ಹೇಳಿದ್ದಾನೆ, ಈ ಸಮಾಜದಲ್ಲಿ ಬದುಕು ಮಾಡುವ ಜನಸಾಮಾನ್ಯರು ಹೇಗೆ ವರ್ತಿಸಬೇಕು ಎಂಬ ವಿಚಾರದಲ್ಲಿ ಶಿವಯೋಗಿಗಳ ಮಾತು ಕೈವಲ್ಯಕಾರರು ಮತ್ತೆ ವಚನಕಾರರ ಸರಳ ಧರ್ಮ ವಿಚಾರಗಳು ಹುದುಗಿವೆ ಎಂದು ಹೇಳಬೇಕು.

4.3.3 ಇತರೆ :–

ವೀರಶೈವ ಶೈವದ ಮಿಶ್ರ ಧೋರಣೆಗಳನ್ನು ಹೊಂದಿದ ಶಿವಯೋಗಿಗಳು ತತ್ವಗಳನ್ನು ಹೇಳುವಲ್ಲಿ ಶೈವದ ಪ್ರಭಾವವನ್ನು ಆಚರಣೆಯನ್ನೆ ಹೇಳುವಲ್ಲಿ ವೀರಶೈವದ ಪ್ರಭಾವವನ್ನು ಹೊಂದಿದ್ದಾರೆ, ಆದ್ದರಿಂದ ಅವರು ತಮ್ಮ ಸಾಧನೆಯ ಹಂತದಲ್ಲಿರುವಾಗ ವೀರಶೈವ ತತ್ವತ್ರಯಗಳು ಪಂಚಾಚಾರ ಅಷ್ಟಾವರಣ ಷಟಸ್ಥಲಗಳನ್ನು ಕುರಿತು ಸಾಂದರ್ಭಿಕವಾಗಿ ಹೇಳುತ್ತಾರೆ. ಸಕಲ ಜೀವಾತ್ಮರುಗಳು ನಿಮ್ಮ ಕೃಪೆಯಿಲ್ಲದೆ ಗಿಡಗಂಟಿಗಳಾಗಿ ಹುಟ್ಟುತ್ತವೆ. ಹೆದರಿ ನಿಮ್ಮಡಿಯೆ ಸೇರುತ್ತವೆ, ಗುರು, ಲಿಂಗ, ಅವನೇ ಮಹಂತಲಿಂಗ, ಅವನೇ ಶಿವನು ಎಂದುಹಂಬಲಿಸುತ್ತಾನೆ, ಲಿಂಗದ ಜತೆಗೆ ಮಾತಾಡಲು ಬಯಸಿದ್ದಾನೆ,

ಜಂಗಮನ ದಿವ್ಯ ವ್ಯಕ್ತಿತ್ವಕ್ಕೆ ಶರಣಾಗಿ ಹೀಗೆ ನುಡಿಯುತ್ತಾನೆ,

ವೀರಶೈವರಿಗೆಲ್ಲ ಮೊರಹರ ಜಂಗಮದ

ಸಾರಪಾರವೆ ಗತಿಯುಭಜಿಸು ಮನವೇ॥ 24

ಹೀಗೆ ಅನೇಕ ಪದಗಳು ಕೈವಲ್ಯದರ್ಪಣದಲ್ಲಿ ಕಂಡು ಬಂದಿವೆ,

ಗುರು, ಲಿಂಗ ಜಂಗಮರನ್ನು ಸಮಾನವಾಗಿಟ್ಟು ಅಭೇದ್ಯ

ಸ್ಥಿತಿಯಲ್ಲಿ ಶಿವನ ಸ್ತುತಿಯನ್ನೆ ಮಾಡಿದ್ದಾರೆ ಆತನಿಗೆ ಪರಾಕ ಹೇಳಿದ್ದಾರೆ, ಲಾಲಿಹಾಡಿದ್ದಾನೆ ದುಂದುಮ, ಮಂಗಳಾರತಿ, ಇತ್ಯಾದಿ ಛಂದ ಪ್ರಕಾರಗಳಲ್ಲಿ ಅನಂತವಾದ ಸ್ತುತಿಯು ಬಂದಿದೆ,

ಹೀಗೆ ವೀರಶೈವ ಶೈವೇತರ ಹಲವು ಆಚಾರ ವಿಚಾರಗಳನ್ನು ಜನಕಲ್ಯಾಣದ ದೃಷ್ಟಿಯಲ್ಲಿದ್ದು ಆಚರಣೆಯಾಗುವಂತಿದ್ದರೆ ಅವೆಲ್ಲವನ್ನು ಮಾನವೀಯ ಹಿನ್ನಲೆಯಲ್ಲಿ ಶಿವಯೋಗಿಗಳು ಸ್ವೀಕರಿಸಿದ್ದಾರೆ, ಅದೇ ಅವರ ವಿಶಾಲ ಮನೋಭಾವನೆ–ಸಮನ್ವಯ ಭಾವನೆ ಎಂದು ಹೇಳಬಹುದು

4.4 ಜನಮಾನಸ ಸಾಹಿತ್ಯ

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಸಾಹಿತ್ಯ ರಚಿಸಬೇಕೆಂಬ ಬಯಕೆಯಿಂದ ಬರವಣಿಗೆಗೆ ಕೈಯಿಟ್ಟವರಲ್ಲ, ಶಿವಯೋಗದನುಭವಗಳನ್ನು ಬಿಚ್ಚಿಹೇಳುವಲ್ಲಿ ಭಾಷೆಯನ್ನು ಬಳಸಿಕೊಂಡವರು, ಅಲ್ಲಿ ಯಾವುದೇ ರೀತಿಯ ಪಾಂಡಿತ್ಯದ ವ್ಯಾಮೋಹವಿಲ್ಲ ಪ್ರತಿಭೆಯನ್ನು ವ್ಯಾಮೋಹದಲ್ಲಿ ತೇಲಿಬಿಡದೆ ಜನಸಾಮಾನ್ಯರಿಗೆ ತಿಳಿಯುವ ಸರಳ ಭಾಷೆಯಲ್ಲಿ ಹೇಳಿದರು.

ಜನಸಾಮಾನ್ಯರ ಕಲ್ಯಾಣವನ್ನು ಕೇಂದ್ರ ವಸ್ತುವಾಗಿರಿಸಿಕೊಂಡಿರುವುದರಿಂದ ಶೈಲಿಯನ್ನು ಕೈಬಿಟ್ಟು ಜನಸಾಮಾನ್ಯರ ನಾಲಿಗೆಯಲ್ಲಿರುವ ದೇಶಿ ಛಂದಸ್ಸು ಸರಳ ಸುಂದರ ಶೈಲಿಯನ್ನು ಬಳಸಿಕೊಂಡು ತಮ್ಮ ಹಾಡುಗಳನ್ನು ಹೇಳಿದರು.

ಶಿವಯೋಗಿಗಳು ಕೇವಲ ಅನುಭಾವಿಗಳಾಗಿರದೇ ಉನ್ನತಮಟ್ಟದ ಕವಿಗಳು ಆಗಿದ್ದರು ಎನ್ನುವುದಕ್ಕೆ ಅವರ ಸಾಹಿತ್ಯವನ್ನು ಓದಿದಾಗಲೇ ಗೊತ್ತಾಗುತ್ತದೆ, ದೇಶಿಯ ಸೊಗಡಿನಲ್ಲಿ ಸರಳವಾಗಿ ನೇರವಾಗಿ ಆಧ್ಯಾತ್ಮದಂತಹ ಅಮೂರ್ತ ವಸ್ತುವನ್ನು ಅಭಿವ್ಯಕ್ತಿಸುವಲ್ಲಿ ಅವರು ಭಾಷೆಯನ್ನು ಪಳಗಿಸಿದ್ದು ಅವರ ಸಾಹಿತ್ಯಕವರೆಗಲ್ಲು ಎಂದೇ ಹೇಳಬೇಕು.

ಬಾಲ್ಯದಿಂದಲೂ ಗುರುಕುಲದ ಅಭ್ಯಾಸದ ಪ್ರಭಾವದಿಂದ ಅಲ್ಲಲ್ಲಿ ಸಂಸ್ಕೃತ ಭೂಮಿಷ್ಟವಾದ ದಾಟಿಯು ಕಂಡುಬರುತ್ತದೆ. ಒಂದು ಸಾಹಿತ್ಯ ಪ್ರಕಾರದ ಯಶಸ್ಸು ಕವಿ ಬಳಸಿದ ಭಾಷೆಯ ಔನ್ನತದಿಂದ ಕಂಡು ಬರುತ್ತದೆ, ಕೈವಲ್ಯಕಾರರು ತಮ್ಮ ಸ್ವರವಚನಗಳನ್ನು ಹೇಳುವಲ್ಲಿ ಪ್ರತಿಭೆಯನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ, ಅವರು ಎಲ್ಲಿಯೂ ಸಾಹಿತ್ಯ

ಸೃಷ್ಟಿಗಾಗಿ ತಡಕಾಡಿದಂತಿಲ್ಲ. ಅನುಭವವೇ ಹಾಡಾಗಿ ನಿಂತಿರುವುದರಿಂದ ಹೃದ್ಯಗುಣವನ್ನು ಹೊಂದಿಕೊಂಡೇ ಹೊರಹೊಮ್ಮುತ್ತದೆ.

ಸಾಹಿತ್ಯಿಕ ಪಟ್ಟವೇರಿದ ಶಿವಯೋಗಿಗಳ ಹಾಡು ಬದುಕಿನ ಹಾಡೇ ಆಗಿವೇ ಅವೆಲ್ಲವು ವಸ್ತು ಮುಖದಲ್ಲಿರುವುದರಿಂದ ವಸ್ತು ಪ್ರಾಧಾನ್ಯತೆಯಲ್ಲಿವೆ. ಇಲ್ಲಿ ಸಂಕ್ಷಿಪ್ತವಾಗಿ ಒಂದೆರಡು ಉದಾಹರಣೆಗಳನ್ನು ನೋಡಬಹುದು. ಶಿವಾನುಭವಿಗಳಾದ ಶಿವಯೋಗಿಗಳ ಭಾಷೆ ಶಿವಾನುಭವವಾಣಿಯಾಗಿದೆ. ಅದು ಕಾವ್ಯವಾಣಿಯಾಗಿಯೂ ಹರಿದಿದೆ. ಅಮರತ್ವವನ್ನುಗಳಿಸಿದೆ. ಇಲ್ಲಿ ಅನುಭವ ಪದಗಳೆಲ್ಲ ಸಹಜವಾದ ಲೀಲಾಗುಣವನ್ನು ಪಡೆದಿವೆ ಭಾವವೇ ಮಗು ಶಿವಯೋಗವೇ ತೊಟ್ಟಿಲ್ಲು, ಆ ತೊಟ್ಟಿಲು ತೂಗಿದಾಗ ಹೊಂದುವ ಭಾವ ಆನಂದ ಭಾವ. ಅದೇ ಶಿವಯೋಗ ಮುದ್ರಾನಿದ್ರಾನಂದ"ಎಂದು ಹೇಳಿದ್ದಾರೆ, ಎಷ್ಟು ಸುಂದರವಾದ ಕಲ್ಪನೆ ಇಂತಹ ಕಲ್ಪನೆಯಲ್ಲಿಯೇ ಅವರ ಸಾಹಿತ್ಯ ಗುಣ ಅಡಗಿದೆ. ಗೂಡವಾದ ಭಾವಚಿತ್ತಕ್ಕೆ ವೇದ್ಯವಾಗಬೇಕಾದರೆ ಹಲವು ರೂಪಕಗಳ ಮೂಲಕ ತಮ್ಮ ಕಾವ್ಯವಾಣಿಯನ್ನು ಹರಿಸಿದ್ದಾರೆ ,ಆಧ್ಯಾತ್ಮದಂತಹ ಅಮೂರ್ತ ಸಂಗತಿಗಳನ್ನು ತಮ್ಮ ಸಹಜವಾದ ಭಾಷೆಯಿಂದ ಮೂರ್ತುಗೊಳಿಸುವಲ್ಲಿಯೂ ಅವರ ಸಾಹಿತ್ಯಿಕ ಅಂಶವು ಗಮನಕ್ಕೆ ಬರುತ್ತದೆ.

ಅಂಗ ಕರ್ಪುರ ಹೋಗಿ ಲಿಂಗದುರಿಯೊಳು ಬಿದ್ದು

ಬಂಗಾರ ಕರಗಿದಂತಾಗುತಿಹದು। 61

ಅಷ್ಟಾವರಣವೆಂಬ ಮಹಾಶ್ರೇಷ್ಠ ಸೊಕ್ಕಿದಾನೆ ಬರಲು

ಕಷ್ಟಜೀವ ಅರಸು ದೇಶಬ್ರಷ್ಟನಾಗಿ ಪೋದನಮ್ಮ॥ 23

ಕಲ್ಲಗಾಣದಂತ ದವಡಿ ಹಲ್ಲು ತೋರಿದ ನೀನು

ಎಲ್ಲಿ ಬೀಳುತೀಯೋ ಹೇಳು ಎಂದು ಕೇಳಿದ

ಎಲ್ಲಿ ಒಲ್ಲೆಯವನೆ ನನ್ನ ಕೊಲ್ಲಬೇಡವೋ ಎಂದು

ಹಲ್ಲುಗಿರಿದು ಹಲುಬಿ ಯಮನ ಕಾಲಬೀಳುವ॥। 32

ಮಾನವ ಜನ್ಮ ದೊಳಗಿಂತಪ್ಪ ಅರುವಿರಲು

ನೀನೆ ಮೋಕ್ಷವ ಪಡೆವ ಚಿಂತೇಕೊ ಮಗನೆ ॥॥ 35

ಶ್ರೇಷ್ಟವಾದ ಮನುಜನ್ಮ ದೊರಕುವುದೆಂದಿಗೆ ತಾನು

ಸೃಷ್ಟಿಗೀಶ ಶಿವನ ಪಾದ ಕಾಣುವುದೆಂದಿಗೆ । 44

ಹರಿದಾಡುವ ಮನುವನು ಹರಗೆ ಸಮರ್ಪಿಸು

ಪರಶಿವಾನಂದ ಸಂಭ್ರಮದೊಳಗಾಡುವ। 62

ಇಂತಹ ಅನೇಕ ಕಡೆಗಳಲ್ಲಿ ಉನ್ನತವಾದ ಸಾಹಿತ್ಯಾಂಶಗಳನ್ನು ಕಾಣಬಹುದು. ಇಲ್ಲಿ ಎಂತಹ ಸರಳವಾದ ಮಾತುಗಳಲ್ಲಿ ಎಂದಿಗೂ ಯಾರಿಗೂ ಸಿಗದ ಪರಮಾತ್ಮನ ದರ್ಶನ ಮಾಡಿಸುತ್ತಾರೆ, ಅಲ್ಲದೇ ಯಾವ ವಿವರಣೆಯಿಂದಲೂ ಶಾಸ್ತ್ರ ಪರಿಣತಿಗಳಿಂದಲೂ ತಿಳಿಯದ ಶಿವಯೋಗದ ರಹಸ್ಯವನ್ನು ದೇಶಿಯ ಮಾತುಗಳಲ್ಲಿ ಕಣ್ಣಿಗೆ ಕಟ್ಟುವಂತೆ ಆಯಾಸವಿಲ್ಲದೆ ಚಿತ್ರಿಸುವ ಗುಣ ಅವರ ಸಾಹಿತ್ಯಕ್ಕಿದೆ.

ಇನ್ನೊಂದು ಅತಿ ಮುಖ್ಯವಾಗಿ ಗಮನಿಸಿಬೇಕಾದ ಸಂಗತಿಯೆಂದರೆ ನಿಲುವುಗಳನ್ನು ಸಾಹಿತ್ಯವೇದಿಕೆಗೆ ಪರಿಚಯಿಸಿದ್ದು ದುಂದುಮೆ, ಜೋಗುಳ, ಲಾಲಿ, ಪರಾಕ, ಸಮಯಬೇಧ, ಪಾರಿಜಾತವರ್ಣ, ಕಂದ, ವಾಚ್ಯಮಾಲಿಕೆ, ಶಿವನ ನಿರಾಲಂಬನದ ವಚನ ಮತ್ತು ಮಂಗಳಾರತಿಯಂತ ಅತ್ಯಂತ ದೇಶಿ ನಿಲುವುಗಳನ್ನು ತಮ್ಮ ತತ್ವಗಳನ್ನೊಳಗೊಂಡ ಸ್ವರವಚನಗಳ ಮಾಧ್ಯಮದಲ್ಲಿ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ್ದು, ಇವರ ಸಾಹಿತ್ಯದ ಒಂದು ದೊಡ್ಡ ಸಾಧನೆ, ಎಂದು ಹೇಳಬಹುದು, ಪಂಡಿತಮಾನ್ಯರಿಂದ ತಿರಸ್ಕೃತರಿಸಲ್ಪಟ್ಟ ಈ ನಿಲುವುಗಳು ಜನಸಾಮಾನ್ಯರ ನಾಲಿಗೆಯಲ್ಲಿ ಮಾತ್ರ ಉಳಿದಿದ್ದವು ಒಬ್ಬ ಒಳ್ಳೆಯ ಕವಿಯಾಗುವುದು ಆತ ಬಳಸಿದ ಛಂದಸ್ಸಿನ ಮೂಲಕವಲ್ಲ , ಆತ ಬಳಸುವ ಭಾಷೆಯ ಮೂಲಕ ಭಾವ ತೀವ್ರತೆಯ ಮೂಲಕ ಎಂಬುದನ್ನು ಸಾಬೀತು ಗೊಳಿಸಿದರು.

ಹೀಗೆ ಶಿವಯೋಗದ ಆನಂದ ವೀರಶೈವರ ಆಚಾರ ವಿಚಾರಗಳಲ್ಲಿರುವ ತೊಡಕು ಧರ್ಮಸಮನ್ವಯತೆ ಸಂಸಾರಿಕ ಮತಾಂಧರಿಗೆ ಎಚ್ಚರಿಕೆ, ಇದರಾಚೆಗೆ ನಿಂತು ಭವಿಯಾದರೆ ,ಘೋರನರಕ, ಉತ್ತಮವಾದ ಕಾವ್ಯಗುಣ ಶೈಲಿಯ ಬೆಡಗು, ತತ್ವಜ್ಞಾನ, ದೇಶಿಯತೆ, ಛಂದಸ್ಸಿನ ವೈವಿಧ್ಯತೆ, ಸಂಗೀತದ ನಾನಮಾಧುರ್ಯ, ಮಾನವೀಯ ಕಳಕಳಿ ಇತ್ಯಾದಿಯಾದ ಹತ್ತು ಹಲವು ಸಂಗತಿಗಳನ್ನು ಒಡಲಲ್ಲರಿಸಿಕೊಂಡ ಶಿವಯೋಗಿಗಳ ಕೈವಲ್ಯ ಸಾಹಿತ್ಯ ಯಾವ ವಚನ ಸಾಹಿತ್ಯಕ್ಕೂ ಕಡಿಮೆ ಇಲ್ಲ.

ಆದ್ದರಿಂದ ಕೈವಲ್ಯಕಾರರ ಪರಂಪರೆಯಲ್ಲಿ ಗುರುತಿಸಲೇಬೇಕಾದ ಶ್ರೇಷ್ಠ ಮಟ್ಟದ ಸಾಹಿತ್ಯ ಇವರದಾಗಿದೆ.

4.5 ಸಂಗೀತ :

ಶ್ರೀಬಾಲಲೀಲಾ ಮಹಾಂತ ಶಿವಯೋಗಿಳು ಬರೆದ 'ಕೈವಲ್ಯದರ್ಪಣ' ಗ್ರಂಥವು 142 ಹಾಡುಗಳಿಂದ ಕೂಡಿದೆ. ಅಲ್ಲಿ ಎಲ್ಲ ಹಾಡುಗಳು ರಾಗ ನಿರ್ದೇಶನದಿಂದ ಕೂಡಿವೆ. ಸಂಗೀತ ಸಾಹಿತ್ಯಗಳ ಮಿಲನದಿಂದ ಆಗತಕ್ಕ ಆನಂದವನ್ನು ಅಪೇಕ್ಷಿಸುವವರಗೆ ಹೆಚ್ಚು ಸಂಖ್ಯೆಯಲ್ಲಿರುವುದು ಕಾಣುತ್ತದೆ. ವಿದ್ಯಾವಂತರಿಗೂ, ಅವಿದ್ಯಾವಂತರಿಗೂ ತಿಳಿಯುವ ಭಾಷೆಯೇ ಸಂಗೀತಕ್ಕೆ ಮುಖ್ಯಬೇಕಾದುದು.

ಸಂಗೀತವುಗೇಯಾತ್ಮಕ ಪ್ರಾಧಾನ್ಯತೆ ಹೊಂದಿದ್ದರಿಂದ ಸಂಗೀತದಲ್ಲಿ ಬದಲಾವಣೆ ಪರಿವರ್ತನೆ ಹೊಂದಿದಂತೆಲ್ಲ ಗೇಯಾತ್ಮಕ ರೂಪಗಳು ಆಯಾ ಕಾಲದಲ್ಲಿ ಭಿನ್ನ ಭಿನ್ನ ರೂಪ ತಾಳಿದವು, ಇಂದಿನವರೆಗೆ ಹಲವಾರು ರೂಪತಾಳುತ್ತ ಅನೇಕ ಪ್ರಕಾರಗಳಲ್ಲಿ ಇಂದು ಬಳಕೆಯಲ್ಲಿವೆ ಕೈವಲ್ಯದರ್ಪಣದಲ್ಲಿ ಕೆಲವು ಕಡೆಗೆ ಷಟ್ಪದಿ ಮತ್ತೆ ಕೆಲವು ಕಡೆಗೆ ರಾಗ–ಕುಸುಮ ಷಟ್ಪದಿ ಎಂಬ ನಿರ್ದೇಶದಡಿಯಲ್ಲಿ ಒಟ್ಟು 29 ಹಾಡುಗಳಿವೆ. ಇದರಲ್ಲಿ ಷಟ್ಪದಿಯ ಪ್ರಬೇಧಗಳಾದ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕಗಳು ಇವೆ.

ಇವುಗಳಲ್ಲಿ ಕೆಲವಕ್ಕೆ ರಾಗ–ಕುಸುವ ಷಟ್ಪದಿ ಎಂದು ಬರೆದಿದೆ. ಕೆಲವು ಕಡೆ ಶರ ಷಟ್ಪದಿ ಭಾಮಿನಿ ಭೋಗ ಷಟ್ಪದಿ, ಪರಿವರ್ಧಿನಿ, ವಾರ್ಧಕಗಳೆಂದಷ್ಟು ಬರೆಯಲಾಗಿದೆ. ಅವುಗಳ ಪಟ್ಟಿಯನ್ನು ಇಲ್ಲಿ ಸೂಚಿಸಲಾಗಿದೆ.

(ಪದಸಂಖ್ಯೆ– 22,24,26,43,45,48,61,63,68,75,77,

110,116,117,120,121,122,123,127,128,130,131. 133,137,139,141)

2) ರಾಗಭೈರವಿಯಲ್ಲಿ ಒಟ್ಟು 20 ಪದ್ಯಗಳು ಇವೆ,

ಪದ ಸಂಖ್ಯೆ – 3,13,14,19,25,30,34,36,37,39,40,46,49,55,57,66,74,85,94,107)

3) ರಾಗರೇಗುಪ್ತಿಯಲ್ಲಿ 11 ಪದ್ಯಗಳು ಇವೆ

(ಪದಸಂಖ್ಯೆ 8,11,18,28,31,51,53,70,78,83,87)

4) ರಾಗದೇಶಿಯಲ್ಲಿ 6 ಪದ್ಯಗಳು ಇವೆ

(ಪದಸಂಖ್ಯೆ 1,4,10,15,56,67,73)

5) ರಾಗ ಸಾವೇರಿಯಲ್ಲಿ 6 ಪದ್ಯಗಳು ಇವೆ

(ಪದಸಂಖ್ಯೆ 41,42,47,52,97,101)

6) ರಾಗ ಸುರಟಿಯಲ್ಲಿ 3 ಪದ್ಯಗಳು ಇವೆ (ಪದಸಂಖ್ಯೆ 17,27,99)

7) ಎರಕಲಕಾಂಬೋದಿಯಲ್ಲಿ 4 ಪದ್ಯಗಳು ಇವೆ

(ಪದಸಂಖ್ಯೆ 32,44,95,96)

8) ಕಾಂಬೋದಿಯಲ್ಲಿ – 1 ಪದ್ಯ ಇದೆ (ಸಂಖ್ಯೆ – 65)

9) ಧನ್ಯಸಿಯಲ್ಲಿ – (ಮೂರು) 3 (ಪದ್ಯ – 62, 64,79)

10) ಧನಶ್ರೀರಾಗದಲ್ಲಿ 1 ಪದ್ಯ (ಸಂಖ್ಯೆ – 12)

11) ರಾಗಜಂಗಲದಲ್ಲಿ 2 (ಪದ್ಯ 16,108)

12) ಕಲ್ಯಾಣಿಯಲ್ಲಿ (ನಾಲ್ಕು) 4 (ಪದ್ಯ 29, 82, 98,106)

13) ಶ್ಯಾಮ ಕಲ್ಯಾಣಿಯಲ್ಲಿ 3 (ಪದ್ಯ – 9.72)

14) ಮೋಹನ ಕಲ್ಯಾಣಿಯಲ್ಲಿ 1 (ಪದ್ಯ – 80)

15) ಸಾರಂಗದಲ್ಲಿ 4 ಪದ್ಯಗಳು (ಪದ್ಯ 2,5,21,33)

16) ಶಂಕರಾಭರಣರಾಗದಲ್ಲಿ 1 (ಪದ್ಯ – 23)

17) ಶಾಹನ ರಾಗದಲ್ಲಿ 1 ಪದ್ಯ–38

18) ನಾಟಿ ರಾಗದಲ್ಲಿ 1 (ಪದ್ಯ 20)

19) ಪೂರ್ವಿರಾಗದಲ್ಲಿ 1 (ಪದ್ಯ – 84)

20) ರಾಗ ಬ್ಯಾಗಡೆ 1 (ಪದ್ಯ – 103)

21) ನೀಲಾಂಬರಿ ರಾಗದಲ್ಲಿ 1 (ಪದ್ಯ – 100)

22) ದ್ವಿಜಾವಂತಿಯ ರಾಗದಲ್ಲಿ 2 (ಪದ್ಯ 6,71)

23) ಪಾರಿಜಾತ ವರ್ಣ 1 (50 ಪದ್ಯ)

ಇವಲ್ಲದೆ 8 ಹಾಡುಗಳಿವೆ "ಪದ" ಎಂಬ ನಿರ್ದೇಶನ ಮಾತ್ರ ಇದ್ದು ಕೈವಲ್ಯ ದರ್ಪಣದ ತುಂಬೆಲ್ಲ ಹರಡಿವೆ,

ಪದಸಂಖ್ಯೆ – 88,89,92,109,111,115,124,129) ಅಲ್ಲದೆ ಸ್ವರವಚನ ಸ್ವರವಚನದ ಪದ ಎಂಬ ನಿರ್ದೇಶನದಲ್ಲಿ 2 ಹಾಡುಗಳಿವೆ, (ಪದ ಸಂಖ್ಯೆ 90,1) ಮತ್ತು ಕೆಲವು ಹಾಡುಗಳು ರಾಗನಿರ್ದೇಶನವಿಲ್ಲದೆ ಜೋಗುಳ ಪದ, ಮಂಗಳಾರತಿ ಪದ, ತ್ರಿಪಧಿ ಕಂದಪದ್ಯ ಎಂಬ ಹೆಸರಿನಿಂದ ಇರುವುದನ್ನು ಕಾಣಬಹುದು.

ಈ ರಾಗಗಳನ್ನು ಕೃತಿಕಾರರೇ ನಿರ್ದೇಶಿಸಿದ್ದಾರೆಯೇ? ಎಂಬ ಸಂಶಯವು ಬರುತ್ತದೆ ಅವರಿಂದಲೇ ಸೂಚಿಸಿದ್ದಾರೆ ಸಂಗೀತದ ಗಾಢವಾದ ಜ್ಞಾನವಿರಬೇಕು ಆದ್ದರಿಂದ ಸಂಗೀತ ಮತ್ತು ದೇಶೀ ಛಂದಸ್ಸುಗಳ ಸಹತ್ವದಿಂದ ಸಾಹಿತ್ಯ ಮುಂದುವರೆದಾಗ ಭಾಷೆ, ಅಲಂಕಾರ ಉತ್ತಮವಾದ ಕಾವ್ಯಾಂಶಗಳು, ಪ್ರತಿಮೆ ದೃಷ್ಟಾಂತಗಳು ಪರಿಣಾಮಕಾರಿ ಬಳಕೆಯಿಂದ ಕೇಳುಗರಿಗೆ ಶ್ರವ್ಯಗುಣವನ್ನು ತಂದು ನೀಡುತ್ತವೆ, ಅಂತಹ ಶ್ರವ್ಯತೆಯನ್ನು ಇಲ್ಲಿಯ ಹಾಡುಗಳು ಪಡೆದಿವೆ, ಅಂತಯೇ ಪಾಮರ, ಪಂಡಿತರ ಸ್ಮೃತಿಯಲ್ಲಿ ಇವತ್ತಿಗೂ ಉಳಿದಿವೆ ಎಂದು ಹೇಳಬಹುದು. [7]

ಸಂಗೀತದ ಪ್ರಾಧಾನ್ಯತೆಯನ್ನು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ ಹಾಡುಗಳ ಮೂಲಕ ಹಲವಾರು ಕಡೆಗೆ ವ್ಯಕ್ತಪಡಿಸಿದ್ದಾರೆ, ಶಿವನು ನಾದಮಯ ಅಂತೆಯೆ ಶಿವಯೋಗಿಯ ನಾದಮಯ "ಸಂಗೀತಕ್ಕೆ ಒಲಿಯದ ಮನವುಂಟೆ. ಈ ಜಗದೊಳು ಎಂಬ ಲೋಕ ಪ್ರಸಿದ್ಧವಾದ ಮಾತಿನಂತೆ ಅವರ ಕೆಲವು ಹಾಡುಗಳನ್ನೇ ಇಲ್ಲಿ ಉದಾಹರಣೆಯೊಂದಿಗೆ ನೋಡಬಹುದು.

" ತೂಗುವ ಬನ್ನಿರೆ ಇವನ ಮಹಾಗುರುಶಾಂತಿಶ್ವರನ
ರಾಗದ ಪುತ್ರ ಮಹಂತನ" । 90

ಈ ರಾಗದ ಪುತ್ರನನ್ನೆ ಕುರಿತು ಹಾಡಲು
ಅಗಜೆಯರನ್ನು ಕರೆದು ಆತನ ಗುಣಗಾನ ಮಾಡುತ್ತ.
ನಾದಾತ್ಮಕ ಶರಣರು ವಾದರೇಣುವ ತಮ್ಮ
ಮೊದದಿಂ ತೆಗೆದಾಕೃತಿ ಮಾಡಿ

ಮೊದದಿಂ ತೆಗೆದಾಕೃತಿ ಮಾಡಿ ಶಿವಕಳೆಯಿಟ್ಟ

ನಾದಿ ಶಿಶು ಮಹಂತಲಿಂಗನು। 90

ಮತ್ತೊಂದು ಕಡೆ ಈ ಶಿಶುವನ್ನು ಕುರಿತು ನಿಮ್ಮ ತಾಯಿ ತಂದೆಯವರು ಬಂದಿದ್ದಾರೆ, 'ಏಳಯ್ಯ' ಎಂದು ಎಬ್ಬಿಸುತ್ತಾರೆ, ಅವರು ಬೃಂಗಿನಾರದ ಮುಖ್ಯರನ್ನೇ ಕರೆದುಕೊಂಡು ಸಕಲವಾದ್ಯಗಳೊಂದಿಗೆ ಸುರಸಂಗೀತವನ್ನು ಹಾಡುತ್ತಬಂದಿದ್ದಾರೆ. 'ಏಳಯ್ಯಾ ಎಂದು ಹೇಳುವ ಅವರ ಸಾಲುಗಳನ್ನೇ ನೋಡಬಹುದು

ಬೃಂಗಿನಾರದ ಮುಖ್ಯ ಸಂಗಶರಣರು। ಬಂದು

ಮಂಗಲ ಮೃದಂಗ ಮಹಾತಾಳ ಮೇಳದಲಿ ।

ಝುಂಕರಿಪ ಸಂಗೀತನಾದವನು ಮಾಡುವರು।

ಲಿಂಗಶಿಶು ಮಹಂತ ನಿನ್ ಪಾಡಿ ಹರಸುತಲಿ। 92

ಶಿವಯೋಗಿಗಳಿಗೆ ಇಷ್ಟವಾದ ಸಂಗೀತ ತಾಳಮೇಳದಲಿ ಝುಂಕರಿಪ ಸಂಗೀತ ಎಂದು ಸ್ಪಷ್ಟವಾಗಿ ಗುರುತಿಸುತ್ತಾರೆ. ಈ ಶಿಶುವಿಗೆ ಲಾಲಿಯ ಪರಬ್ರಹ್ಮದ ಲಾಲಿಯು ಬೇಕಾಗಿದೆ ಅದಕ್ಕಾಗಿ ಹೀಗೆ ಹಾಡಿದ್ದಾರೆ.

"ಅಷ್ಟದಳದ ಕಮಲ ತೊಟ್ಟಿಲೊಳಗಿ ಮಲಗಿ

ಶ್ರೇಷ್ಠ ಸದ್ಗುಣ ಹಸ್ತ ಪದಗಳನಾಡುತ

ನೆಟ್ಟನೆ ನಿಟಿಲಭ್ರುಮದ್ಯದ ಜ್ಯೋತಿಯೆ।

ದೃಷ್ಟಿಸಿ ನೋಡುತ ಕುಲುಕುಲು ನಗುತಿಹ 98

ಬ್ರಹ್ಮನಾದವನ್ನು ಕೇಳಲು ಅಷ್ಟದಳದ ಕಮಲ ತೊಟ್ಟಿಲುಬೇಕು. ಮತ್ತು ಸದ್ಗುಣ ಹಸ್ತಪದಗಳನಾಡುತ ತೂಗಬೇಕು.

ಸಂಗೀತ ಪ್ರಾಧಾನ್ಯತೆಯಲ್ಲಿರುವ ಹಾಡೊಂದನ್ನು ಸಂಗೀತ ಪ್ರಸ್ತಾರ ಹಾಕಿ ನೋಡಲಾಗಿದೆ

ಉದಾ:– ಪಮಪನಿ ಗರೆಸ ಸಾಸಾ ಪನಿಸಾಗರೆಸಾ ನಿರೆಸಾ

ಕಾಲ ಕರ್ಮವ ಗೆದ್ದ ಪಾಲಲೋಚನ ಲಿಂಗ

ಒಟ್ಟಿನಲ್ಲಿ ಗೇಯತೆಯಿಂದ ಕೂಡಿಕೊಂಡ ಇಲ್ಲಿನ ಪದ್ಯಗಳು ಸಾಹಿತ್ಯದ ಸೌಂದರ್ಯ ತತ್ವ ಗಾಂಭೀರ್ಯಗಳ ಜತೆಗೆ ಸಂಗೀತದ ಮಾಧುರ್ಯವನ್ನು ಹೊರಡಿಸುವ ಧೋರಣೆಯುಳ್ಳವುಗಳಾಗಿವೆ.

4.6 ಶೈಲಿ

ಕನ್ನಡದಲ್ಲಿ 'ಶೈಲಿ' ಎಂಬ ಪದ ನಾನಾ ಅರ್ಥಗಳಲ್ಲಿ ಬಳಕೆಯಾಗಿದೆ, ಅದು ಭಾಷಿಕ ಅರ್ಥವನ್ನೊಳಗೊಂಡ ಪ್ರದೇಶ ಭಿನ್ನತೆಯಿಂದ ವಿಶಿಷ್ಟ ಪಾರಿಭಾಷಿಕತೆಯನ್ನು ಪಡೆದಿದೆ ನಿಜಗುಣರಿಗೆ ಭಿನ್ನವಾದ ಶೈಲಿಯೊಂದನ್ನು ರೂಢಿಸಿಕೊಂಡ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಶಾಸ್ತ್ರಕ್ಕಿಂತ ಜನರ ಬದುಕು ಮುಖ್ಯವೆಂದು ತಿಳಿದು ದೇಶೀಯ ಶೈಲಿಯಲ್ಲಿ ನಿಂತು ಹಾಡು ಹೇಳಿರುತ್ತಾರೆ, ಅಂತೆಯೇ ಅವರ ಶೈಲಿ ದ್ರಾಕ್ಷಾಪಾಕವಾಗಿದೆ ಅಲ್ಲಿ ಅಮೃತದ ಸವಿರುಚಿ ಇದೆ ಅದರ ಗುರಿ ಮುಕ್ತಿಯನ್ನು ಪಡೆಯುವದೇ ಆಗಿದೆ.[6]

ಶಿವಶರಣರ ಕ್ರಾಂತಿಯ ಫಲದಿಂದ ಅನೇಕ ದೇಶೀಯ ಛಂಧೋಮಟ್ಟಗಳು, ಕಾವ್ಯಗದ್ದಿಗೆಯನ್ನು ಏರಿ ಶತಮಾನಗಳ ವೈಭವನ್ನು ಕಂಡಿವೆ. ಅಂತೆಯೇ ತಮ್ಮ ಹಾಡುಗಳಿಗೆ ಬಳಸಿಕೊಂಡ ಪರಿಣಾಮಕಾರಿಯಾದ ಸರಳ ಭಾಷೆಯು ಮಹಾಂತ ಶಿವಯೋಗಿಗಳ ಶೈಲಿಯನ್ನು ಪರಿಚಯಿಸುತ್ತದೆ.

ಶಿವಯೋಗಿಗಳ ಶೈಲಿ ಸರಳ ಸುಂದರ ಲಲಿತವಾಗಿದೆ, ಪರಿಶುದ್ಧವಾಗಿದೆ ಛಂದಸ್ಸು ಅಲಂಕಾರಗಳಿಂದ ಕೂಡಿ ಭಾವಗರ್ಭಿತವಾಗಿದ್ದು ಜನಸಾಮಾನ್ಯರ ಚಿತ್ತವನ್ನು ಹೃದಯವನ್ನು ಬಹುಬೇಗ ಆಕರ್ಷಿಸುತ್ತವೆ. ಇಂದಿಗೂ ಜನರ ಬಾಯಲ್ಲಿ ನಿತ್ಯ ನೂತನವಾಗಿ ಇವರ ಹಾಡುಗಳು ಕೇಳಿ ಬರುತ್ತಿರುವದು ಇದಕ್ಕೆ ನಿದರ್ಶನ ಭಕ್ತಿಜ್ಞಾನ ಅವರ ಹಾಡುಗಳ ಮೂಲ ಸೊತ್ತು ತಿಳಿಯಾದ ಭಾವ ಭಾಷೆಗಳು ಕದಡಿದ ಚಿತ್ತವನ್ನು ಶುಚಿಗೊಳಿಸಿ ಬೆಳಗುತ್ತವೆ.

ಶೈಲಿಯ ವಿಭಿನ್ನತೆಯನ್ನು ಗುರುತಿಸುವ ಮಾನದಂಡಳೆಂದರೆ ಭಾಷೆ, ಅಲಂಕಾರ ,ಪ್ರಾಸ, ಸಂಕೇತ, ಗಾದೆ ಮಾತುಗಳು ಇತ್ಯಾದಿ.

ಭಾಷೆ :–

ಭಾಷೆ ದೇಶಿಯದ್ದು ಸರಳ ಪದಗಳನ್ನು ಸುಂದರವಾಗಿ ಬಳಸಿಕೊಳ್ಳಲಾಗಿದೆ, ಹಾಗೆಯೆ ಅಲ್ಲಲ್ಲಿ ಸಂಸ್ಕೃತ ಭೂಯಿಷ್ಟತೆಯು ಕಂಡು ಬಂದಿದೆ. ಆದ್ದರಿಂದ ಒಂದರ್ಥದಲ್ಲಿ ಮಾರ್ಗವೂ ಅಲ್ಲದ ದೇಶಿಯವೂ ಅಲ್ಲದ ವಿಶಿಷ್ಟ ಶೈಲಿಯನ್ನು ಕಾಣುತ್ತೇವೆ. ಕೈವಲ್ಯದರ್ಪಣದ ಕೆಲವು ಹಾಡುಗಳಲ್ಲಿ ಸಂಸ್ಕೃತ ಪದಪುಂಜಗಳ ಬಳಕೆ ಇದೆ.

ಪರಮ ಪಾವನ ಶಾಂತಿಕರ ವರದೇವನೆ ಮಹಂತಲಿಂಗ
ಸುರವರನಣುಗಗೆ ಶರವರವಿತ್ತನೆ ಮಹಂತಲಿಂಗ। 21

ಇಲ್ಲಿ ಬಳಕೆಯಾದ ಪದಗಳನ್ನವಲೋಕಿಸಿದರೆ ಶಿವಯೋಗಿಗಳಿಗೆ ಇದ್ದ ಸಂಸ್ಕೃತ ಕನ್ನಡ ಪದಗಳ ಸಂಪತ್ತು ಮನವರಿಕೆಯಾಗುತ್ತದೆ. ಶಿವಯೋಗಿಗಳು ಯಾವ ಶೈಲಿಯಲ್ಲಿ ಹೇಳಬೇಕು ಎಂದು ಚಿಂತಿಸಿದವರಲ್ಲ ಬದುಕಿನ ಶೈಲಿಯನ್ನೇ ಬರಹದಲ್ಲಿ ಮಿಶ್ರಿತಗೊಳಿಸಿದವರು, ಆದ್ದರಿಂದ ಅವರ ಭಾಷೆ ಜನಭಾಷೆ ಅವರಿಗೆ ತಿಳಿಯುವ ಸರಳಭಾಷೆ ಅವರ ಹಾಡುಗಳಲ್ಲಿ ಅರ್ಥಕ್ಕಾಗಿ ಶ್ರಮಪಡಬೇಕಾದುದಿಲ್ಲ.

ಅನೇಕ ದೇಶಿಯ ಪದಗಳು ಅವರ ಹಾಡುಗಳಲ್ಲಿ ಬಳಕೆಯಾಗಿ ಹಾಡಿನ ಸಾಂದರ್ಭಿಕ ಕಸುವನ್ನು ಹೆಚ್ಚುಗೊಳಿಸುವಲ್ಲಿ ಕಾವ್ಯ ಸೌಂದರ್ಯವನ್ನು ಪುಷ್ಠಿಗೊಳಿಸುವಲ್ಲಿ ಯಶಸ್ವಿಯಾಗಿವೆ ಅವರ ಶಬ್ದ ಸಂಪತ್ತು ಅಪಾರವಾದುದು.

ಸಸಿನೆ ಪೂಜಿಸಿ ಮುಕ್ತಿ ಪಡೆಯದೆ ಮೋಹದಿ
ನುಸಿದು ಹೋಗುವರಯ್ಯ ವಿಷಯಾದಿಗಳ ಬಯಸಿ॥ 6
ಪ್ರಾಯಕಾಲದ ಮಾಯಬಲೆಗೆ ಬೀಳಲಾರದೆ
ಅಯ್ಯಗದಗದಿಸಿ ಭಕ್ತಪ್ರಿಯಂ ಸಲಹುವನೆಂದು॥ 16

ಪ್ರಾಸ :–

ಕನ್ನಡ ಕಾವ್ಯಕ್ಕೆ ಪ್ರಾಸ ಬಳಕೆಯಿಂದ ಸೊಗಸು ಬರುತ್ತದೆ, ಓದಲು ನೆನಪಿಡಲು ಸಹಕಾರಿಯಾಗುತ್ತದೆ, ಆದ್ದರಿಂದಲೇ ಪ್ರಾಸ ಕಡ್ಡಾಯವೆಂದು ಹೇಳಿದ್ದಾರೆ.

ಪ್ರಾಸವಿಲ್ಲದ ಪದವ ತಾಸು ಹಾಡಿದರೇನು

ಸಾಸುವೆಣ್ಣೆ ಹದಮಾಡಿ ಕಣ್ಣೊಳಗೆ

ಪೂಸಿಕೊಂಡಂತೆ ಸರ್ವಜ್ಞ

ಎನ್ನುವ ಮಾತು ಇವತ್ತಿಗೂ ಅರ್ಥಕಳೆದುಕೊಂಡಿಲ್ಲ, ಹೊಸಗನ್ನಡ ಪ್ರಭಾವದಲ್ಲಿ ಪ್ರಾಸವನ್ನು ಮಿಕ್ಕಿದರೂ ಅಲ್ಲಲ್ಲಿ ಬಳಸುವುದು ಕಂಡು ಬರುತ್ತದೆ.

ಬಾಲಲೀಲಾ ಮಹಾಂತ ಶಿವಯೋಗಿಗಳಲ್ಲಿ ಪ್ರಾಸ ಸಾಮಾನ್ಯವಾಗಿ ಬಳಕೆಯಾದರೂ ಅಂತ್ಯ ಪ್ರಾಸವು ಇಲ್ಲಿ ಇಲ್ಲ, ಆದಿಪ್ರಾಸವು ಎಲ್ಲಕಡೆಗೂ ಬಳಕೆಯಾಗಿದೆ.
ಕೆಲವು ಕಡೆಗೆ ಒಂದೇ ಹಾಡಿನಲ್ಲಿರುವ ಬೇರೆ ಬೇರೆ ನುಡಿಗಳಿಗೆ ಬೇರೆ ಬೇರೆಯಾದ ಪ್ರಾಸಾಕ್ಷರವೂ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಉದಾಹರಣೆ :– ಆದಿಪ್ರಾಸ

ಮರೆದು ಫಲ ಪದಗಳನು। ಇರದೆ ಬಯಸಲ್ಕವರು।

ತರವಲ್ಲ ಬೇಡಿ ನಿಮಗೆಂದು ಮುದದಿ ।

ಸ್ಥಿರವಾದ ಶಿವಲಿಂಗ। ಪರಮ ಪದವಿಯ ಕೊಟ್ಟು।

ಧರೆಗೆ ಮರಳದ ತೆರದಿ ಮಾಡಿ ಮೆರೆವ॥ 24

ಅಲಂಕಾರ :–

ಅಲಂಕಾರ ವ್ಯಕ್ತಿಯ ವ್ಯಕ್ತಿತ್ವವನ್ನು ಸ್ಫುಟಗೊಳಿಸುತ್ತದೆ, ಅಲಂ–ಶಕ್ತಿ, ಕಾರ–ಉಂಟುಮಾಡು, ಮಾತಿಗೆ ಶಕ್ತಿಯನ್ನುಂಟು ಮಾಡುವುದೇ ಅಲಂಕಾರ, ನಮ್ಮ ನಿತ್ಯ ವ್ಯವಹಾರದಲ್ಲಿ ನಮಗರಿವಿಲ್ಲದೆ ಅಲಂಕಾರಿಕ ಭಾಷೆಯನ್ನು ಬಳಸುತ್ತೇವೆ.

ಅಲಂಕಾರ ಕಾವ್ಯ ಕನ್ನಿಕೆಯ ಬಾಹ್ಯದ ವ್ಯಕ್ತಿತ್ವವನ್ನು ಹೆಚ್ಚುಗೊಳಿಸುತ್ತದೆ, ವೀರಶೈವ ಪ್ರತಿಪಾದನೆಯೇ ಮುಖ್ಯವಿಷಯವಾದರೂ ಅದಕ್ಕೆ ಮೇಲಾದ ಕಾವ್ಯಶಕ್ತಿ ಶಿವಯೋಗಿಗಳ

ಹಾಡುಗಳಲ್ಲಿ, ಹುದುಗಿದೆ, ಹೀಗಿರುವಾಗ ಅಲಂಕಾರಗಳನ್ನು ಶಬ್ದಲಂಕಾರ, ಅರ್ಥಲಂಕಾರವೆಂದು ಎರಡು ಭಾಗದಲ್ಲಿ ವಿಂಗಡಿಸಲಾಗಿದೆ–ಶಬ್ದಗಳ ಪದವೂ ಪದಭಾಗವೂ ಮತ್ತೆ ಮತ್ತೆ ಬರುತ್ತಿದ್ದರೆ ಶಬ್ದಲಂಕಾರ ವೆಂದು ಸಾಮಾನ್ಯವಾಗಿ ಕರೆಯುತ್ತಾರೆ.

ಉದಾ :– ಜಂಗಮವೆ ಪರದೈವ ಜಂಗಮವೇ ಪರವಸ್ತು

ಜಂಗಮವೆ ಪರಮ ಪಾವನ ಮೂರ್ತಿಯು

ಅರ್ಥಲಂಕಾರ :–

ಅರ್ಥಗಳ ಪ್ರಾಧಾನ್ಯತೆಯಿಂದ ಅರ್ಥಾಲಂಕಾರ ಎಂದು ಕರೆಯಲಾಗಿದೆ, ಇಲ್ಲಿ ಮನಸ್ಸು ಚಂಚಲವಾದದು ಅದನ್ನು ಒಮ್ಮೆ ಮರ್ಕಟನಿಗೆ ಹೋಲಿಸಿದ್ದಾರೆ, ಮತ್ತೊಮ್ಮೆ ಕಾಳಿಗೆ ಹೋಲಿಸಿದ್ದಾರೆ ಮನಗಿಳಿಯು ವನಗಿಳಿಯ ಜತೆಗೆ ವ್ಯವಹರಿಸಲಾಗದೆ ದೂರ ಉಳಿಯಲು ಆಶಿಸದೆ ಕವಿ ಸಾಲುಗಳಲ್ಲಿಯೇ ಆ ಮಾತನ್ನು ಗಮನಿಸಬಹುದು

ವನಗಿಳಿ ಬಂದೆನ್ನ। ಮನಗಿಳಿಯ ಬುದ್ದಿಯನು

ವಿನಯದಿಂ ಕೆಡಿಸಿ। ಪೋಗಲು ಬಂದೆಯಾ ॥ 43

ಆಧ್ಯಾತ್ಮ ಸಾಧನೆಯಲ್ಲಿ ಸಂಸಾರದ ಅಸ್ಥಿರತೆಯನ್ನು ಹೇಳಿದ ಶಿವಯೋಗಿಗಳಿಗೆ ಅವರದೇ ಆದ ಸಂಸಾರವೊಂದಿರುತ್ತದೆ ಎನ್ನುತ್ತಾ ಹೀಗೆ ನುಡಿದಿದ್ದಾರೆ.

ಧೂಪವೇ ಸಂಸಾರ, ದೀಪವೇ ಸಂಸಾರಂ

ಪಾಪಾತ್ಮ ಜನಕೆ ದರುಶನವ ಕೊಡುವಂಥ

ವ್ಯಾಪಾರವೇ ಸಂಸಾರವಾದ ಕಾರಣದೇವಿ

ಈ ಪರಮಾತ್ಮಂ ತಾ ನಿರಾಭಾರಿಯು। 47

ಬಡಮಗನ ಬಡತಾಯಿ ಸಡಗರವರ ಮಾಡಿದಳು

ಪೊಡವಿಪತಿಯೇ ಕೇಳು ಬಡಿವಾರ

ಮಾತಲ್ಲ ಜಡಗಟ್ಟಿ ತಿರಿದುಂಡು ಮುದಿಯೆತ್ತನೇರಿದ ಬಡತಂದೆ

ಬಡಿವಾರನೆ । 136

ಇತ್ಯಾದಿ ಸುಂದರವಾದ ಅಲಂಕಾರಿಕ ಮಾತುಗಳಿಂದ ಮುಂದು ಸಾಗುತ್ತಾನೆ. ನನ್ನ ಸಮರಸ ಶಿವಪದವಿ ಎಂಬ ಉನ್ನತದರ ಮನೆಯನ್ನೇ ನನಗಾಗಿ ಕೊಟ್ಟು ರಕ್ಷಿಸಿದ್ದಾನೆ. ಎನ್ನುವ ಹಲವು ರೂಪಕಗಳಲ್ಲಿ ಅವರ ಕಾವ್ಯಗುಣದ ಉನ್ನತ ಮಟ್ಟವನ್ನು ತಿಳಿಯಬಹುದು.

ಒಟ್ಟಿನಲ್ಲಿ ಪ್ರಾಸ, ಅಲಂಕಾರಗಳ ಬಳಕೆಯ ಹಿತಮಿತವಾಗಿದ್ದರೆ ಕಾವ್ಯಕ್ಕೆ ಸೊಗಸು ಇಲ್ಲದಿದ್ದರೆ ಬಾಹ್ಯಲಂಕಾರಗಳಿಗೆ ಆಡಂಬರದಲ್ಲಿ ಕಾವ್ಯದ ಸಹಜ ಸುಂದರತೆ ಮರೆಯಾಗುತ್ತದೆ, ಪ್ರಾಸದ ವ್ಯಾಮೋಹದಲ್ಲಿ ಅರ್ಥ ಗೌಣವಾಗುತ್ತದೆ, ಇದು ಮಾರ್ಗಕವಿಗಳಲ್ಲಿ ಕಂಡು ಬರುತ್ತದೆ, ದೇಶೀಯತೆಯ ಸೊಗಡಿನಲ್ಲಿ ಭಾಷೆ ಅದೆಲ್ಲವನ್ನು ಪಡೆದುಕೊಂಡು ನಿತ್ಯವೂ ಜನಪದರಲ್ಲಿ ಬಳಕೆಯಾಗುತ್ತಿರುವದರಿಂದ ಅದಕ್ಕೊಂದು ವಿಶೇಷ ಶಕ್ತಿ ಇರುತ್ತದೆ. ಅಂತಹ ವಿಶೇಷ ಶಕ್ತಿ ಮಹಾಂತ ಶಿವಯೋಗಿಗಳ ಭಾಷೆಗೆ ಇದೆ.

ಶಿವಯೋಗಿಗಳ ಹಾಡುಗಳಲ್ಲಿ ಗಾದೆ ಮಾತುಗಳು ಕಂಡು ಬರುತ್ತದೆ.

ಉದಾಹರಣೆಗಳು :

1) ಸಂಕಟ ಬಂದಾಗ ಸಂಗಯ್ಯ ಲಿಂಗಯ್ಯ। 30

2) ಬೆಲ್ಲವನು ಕಾಸುವರೆ ನಿಲ್ಲಬಾರದು । 190

3) ಊರಿಗೊಂದೊಡಕಗೆ ಒಂದು ನ್ಯಾಯ। 136

4) ಅರಳಿ ಅಗ್ನಿಯ ಕೊಡೆ ಸೆಣಸೆ ಜೈಸುವದೇ । 50

5) ಬೆನ್ನಕುದುರೆಯ ಬಿಟ್ಟು ಕತ್ತೆ ತಿದ್ದುವರೆ ಮುಂತಾದವು । 26

ಅಲ್ಲದೆ ಪಡೆನುಡಿಗಳಂತ ಮಾತುಗಳು ಅವರ ಹಾಡುಗಳಲ್ಲಿ ಬಂದಿವೆ

ಮೂಕುತಿ ಪೆಣ್ಣನ್ ಸುಖ ತಪ್ಪಿಸಿದೆ । 28

ಮನವೆಂಬ ಸರ್ಪ ತಾ ಉನ್ಮನಿಯ ಹುತ್ತದೊಳು।

ಜಿನುಗಿ ನಿಷ್ಪತಿ ನಿದ್ರೆ ಮಾಡುತಿಹುದು।

ಮನಸು ಎಂಬ ಸಂಪನ್ನ ಮಗಳು ಕೊಟ್ಟ ಪುರುಷರಿಗೆ। 60

ಅಂಗ ಕರ್ಪುರ ಹೋಗಿ ಲಿಂಗ ದುರಿಯೊಳು ಬಿದ್ದು

ಬಂಗಾರ ಕರಗಿದಂತಾಗುತಿಹುದು । 66

ಹೀಗೆ ಇಂತಹ ನೂರಾರು ಸುಂದರ ಪಡೆಮಾತುಗಳನ್ನು ಬಳಸಿಕೊಂಡು ಕೇಳುಗರ ಕಿವಿ ಚುರುಕಾಗಿ ಆಲೋಚನೆಗೆ ಒಳಗಾಗುತ್ತಾರೆ. ಅಲ್ಲಿರುವ ಹದವಾದ ಅನುಭವ ಹೃದಯ ಸ್ಪರ್ಶವಾಗಿ ನಿಂತು ಮನ ಪರಿವರ್ತನೆಯ ಕೆಲಸವನ್ನೆ ಮಾಡುತ್ತದೆ, ಜೋಗುಳಪದ, ಮಂಗಳಾರತಿ ಪದಗಳು ಕೂಡಾ ವಿಜೃಂಭಿಣಿಯಿಂದ ಕೈವಲ್ಯ ದರ್ಪಣದಲ್ಲಿ ಮರೆದಿದೆ.

4.7 ಛಂದಸ್ಸು :–

"ಛಂದಸ್ಸು ಎಂದರೆ ಕಾವ್ಯಕ್ಕೆ ಒಂದು ವಾತಾವರಣ ಒಂದು ಆಚ್ಛಾದನ ವಿದ್ದಂತೆ",

ಛಂದಸ್ಸು ಕಾವ್ಯಕ್ಕೊಂದು ಅಲಂಕಾರ, ಹೇಳುವ ಮಾತು ಅಲಂಕಾರಿಕವಾಗಿದ್ದರೆ ಶಕ್ತಿಸಂಚಯಗೊಂಡು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಕಾಲಕಾಲಕ್ಕೆ ಸಾಹಿತ್ಯ ಕೃಷಿ ಸಾಗಿರುವುದನ್ನು ಅವಲೋಕಿಸಿದಾಗ ವೈವಿದ್ಯಪೂರ್ಣ ಛಂದಸ್ಸಿನ ಪ್ರಯೋಗವು ನಡೆದದ್ದು ಗಮನಕ್ಕೆ ಬರುತ್ತದೆ. [5]

ಶ್ರೀ ಬಾಲಲೀಲಾ ಮಹಾಂತರು ಜನಸಾಮಾನ್ಯರ ನಡುವೆ ನಿಂತು ಕೃತಿರಚನೆ ಮಾಡಿದ ಅನುಭಾವಿ ಕವಿಗಳು ನಿಜಗುಣ ಶಿವಯೋಗಿಗಳು ಛಂದಸ್ಸು ಮತ್ತು ಸಂಗೀತದ ಜತೆಗೆ ಪ್ರೌಢ ಭಾಷೆಯನ್ನು ಬಳಸಿದರು, 19ನೇ ಶತಮಾನದಲ್ಲಿ ಆಧುನಿಕ ಸಾಹಿತ್ಯದ ಹೊಂಬೆಳಗಿನಲ್ಲಿ ಸಂಗೀತ ಮತ್ತು ಅನುಭಾವವನ್ನು ದೇಶಿ ನಿಲುವುಗಳಲ್ಲಿ ಸರಳಗೊಳಿಸಿರುವದರಿಂದ ಯಾವುದೇ ರೀತಿಯ ಕ್ಲಿಷ್ಟತೆ ಇಲ್ಲ ಆದರೂ, ಛಂದಸ್ಸಿನ ಬಳಕೆಯಲ್ಲಿ ಅಂಶ ಗಣದ ಪ್ರಭಾವವಿರುದನ್ನು ಗಮನಿಸಬೇಕು.

ಒಟ್ಟಾರೆ 'ಕೈವಲ್ಯ ದರ್ಪಣ'ದ ಹಾಡುಗಳಿಗೆ ಬಳಸಲಾದ ಛಂದೋ ವೈವಿದ್ಯವನ್ನು ಅಭ್ಯಾಸ ಮಾಡುವುದೇ ಮುಖ್ಯ ಉದ್ದೇಶವಾಗಿದೆ ಇವರ ಪದಗಳಲ್ಲಿ ಷಟ್ಪದಿಯ ಎಲ್ಲಾ ಪ್ರಕಾರಗಳು ಕಂಡು ಬಂದಿದೆ.

ಉದಾ : – ಭೋಗ ಷಟ್ಪದಿ

ಕೈಯ ಕಾಲ ಮೈಯ ತೊಳೆದು ಜೀಯ ಎಣಿಸಿ ಹಾಸಹೊಚ್ಚಿ

ದೈಯ ತೊಟ್ಟಿಲೊಳಗೆ ತೂಗಿ ಹಾಡಿ ಹರಿಸಿದೆ। 75

ಶಿವಯೋಗಿಗಳು ತಮ್ಮ ಬದುಕಿನ ರಸವತ್ತಾದ ಕ್ಷಣಾನುಭವಗಳನ್ನು ಹಿಡಿದಿಡಲು ಈ ದೊಡ್ಡ ಗಾತ್ರದ ಷಟ್ಪದಿ ಅನುವಾಗಿ ಹೊಂದಿದೆ.

ಕೈವಲ್ಯ ದರ್ಪಣದ ಪದ್ಯ 121,123,130,134.

136,137,139,141, ಗಳಲ್ಲಿ ವಾರ್ಧಕ ಬಳಕೆಯಿದೆ ಶಿವಯೋಗಿಗಳ ಪದಗಳಲ್ಲಿ ಬಾಮಿನಿಯ ಬಳಕೆಯ ಸಮರ್ಪಕವಾಗಿದೆ ಅಲ್ಲದೆ ಪದ್ಯ 120,127, ರಲ್ಲಿಯೂ ಬಾಮಿನಿಯ ಬಳಕೆಯಾಗಿರುವುದನ್ನು ಕಾಣುತ್ತೇವೆ.

ಕಂದ ಪದ್ಯ :–

ಮಾರ್ಗಸಾಹಿತ್ಯದಲ್ಲಿ ಬಳಕೆಯಾದ **'ಕಂದ'**ವು ಮಾತ್ರಾ ನಿಷ್ಠವಾದುದು, ಆದರೆ ಮಹಾಂತ ಶಿವಯೋಗಿಗಳಲ್ಲಿ ಬಳಕೆಯಾದ 'ಕಂದ'ವು ಜಾನಪದೀಯ ಮೆಟ್ಟು ಆಗಿದೆ ಈ ರೀತಿಯ ದೇಶಿಯ ಅಂದವನ್ನು ಒಡಗೂಡಿಸಿಕೊಂಡು ಶಿವಯೋಗಿಗಳು ತಮ್ಮ ದರ್ಪಣದ 126ನೇ ಪದ್ಯದಲ್ಲಿ ಕಂದದ ರೀತಿಯಲ್ಲಿ ಬಳಸಿದ್ದಾರೆ. [5]

ತ್ರಿಪದಿ :– 'ತ್ರಿಪದಿ' ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ನಿಗದಿಗೊಳಿಸುವ ಅತ್ಯಂತ ಪ್ರಾಚೀನತಂಯು ದೇಶಿಯು ಛಂಧೋಮಟ್ಟು. ಸಾಹಿತ್ಯದ ಗಂಗೋತ್ರಿಯುಂದೇ ಹೆಸರುವಾಸಿಯಾದ ಈ ತ್ರಿಪದಿಯನ್ನು ಶಿವಯೋಗಿಗಳು ತಮ್ಮ ಕೃತಿಯಲ್ಲಿ ಬಳಸಿದ್ದಾರೆ. ಪದ್ಯ 87 ರಲ್ಲಿ ನೋಡಲಾಗಿ,

ಉದಾ : **ಬಿಂದು ಊರ್ದ್ವಕ್ಕೆ ಮುಖಮಾಡಿ ಶಿವಶರಣರಹಾದಿ**

ಇಂದು ಮುಖಿಯರೊಳು ಕಂದನಾಗಾಡುತ

ಹಂದೆಯ ಮನ್ಮಥರೆದೆ ಗೊದ್ದೋಡಿಸುವ ।

ಹೀಗೆ ಶಿವಯೋಗಿಗಳ ಛಂದಸ್ಸಿನ ರಚನಾ ವಿಶೇಷತೆಯನ್ನು ತಿಳಿಯಬಹುದು.

ಅಡಿ ಟಿಪ್ಪಣಿಗಳು

1. ಪ್ರೊ.ಶಿ.ಶಿ. ಬಸವನಾಳ (ಸಂ) – ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯ ದರ್ಪಣ ಪ್ರಸ್ತಾವನೆ, ಶಿವಯೋಗಿಶ್ವರ, ಗ್ರಂಥಮಾಲೆ 1952,ಮುರಘಾಮಠ ಧಾರವಾಡ.

2. ಪ್ರೊ.ಶಿ.ಶಿ. ಬಸವನಾಳ (ಸಂ) – ಕೈವಲ್ಯ ದರ್ಪಣ 1–142 ರವರೆಗಿನ ಎಲ್ಲಾ ಪದ್ಯಗಳು, ಪುಟ 1 ರಿಂದ 190 ಮುರಘಾಮಠ ಧಾರವಾಡ (1990)

3 ಡಾ. ತಿಪ್ಪೆರುದ್ರಸ್ವಾಮಿ – 1) ಕೈವಲ್ಯ ಕೌಸ್ತುಭ – 345 ರಿಂದ 355
2) ಕರ್ನಾಟಕ ಶರಣಕಥಾಮೃತ
ಡಿ.ವಿ.ಕೆ. ಮೂರ್ತಿ 1976 ಪುಟ–70

4 ಬರಗೂರು ರಾಮಚಂದ್ರಪ್ಪ – (ವಿವಿಧ ಲೇಖಕರು) ಕನ್ನಡ ತತ್ವ ಪದಕಾರರು ಪುಟ – 125 (1993)

5 ಡಿ.ಎಸ್. ಕರ್ಕಿ – ಕನ್ನಡ ಛಂದೋವಿಕಾಸ ಪುಟ– 4 (1979)

6 ಹ.ಮಾ.ನಾಯಕ್ – ಕನ್ನಡ ರತ್ನಕೋಶ ಕನ್ನಡ ಅಭಿವೃದ್ಧಿ ಪ್ರಾಧಿಕಾರ (1994)

7 ಪ್ರೋ ಬಿ.ಸಿ. ಹದ್ಲಿ – ಬಾಲಲೀಲಾ ಮಹಾಂತ ಶಿವಯೋಗಿಗಳು ಪುಟ–79 ರಿಂದ 150 (1996)

8) ಷಣ್ಮುಖಯ್ಯ ಅಕ್ಕೂರ್ ಮಠ್ (ಸಂ) – ಕೈವಲ್ಯ ದರ್ಪಣ ಪದ 31, 40, ಪುಟ 40 (2002)

ಅಧ್ಯಾಯ ೫

ಮಹಾಂತ ಶಿವಯೋಗಿಗಳ ಪವಾಡಗಳು

ಅಧ್ಯಾಯ – 5

ಮಹಾಂತ ಶಿವಯೋಗಿಗಳ ಪವಾಡಗಳು

ಶಿವಯೋಗ ಸಾಧನೆಯಿಂದ ಸಿದ್ದಿಸಿದ್ಧ ಆತ್ಮಶಕ್ತಿಯ ಅಭಿವ್ಯಕ್ತಿಯೇ ಪವಾಡ. ಇದೊಂದು ಅದ್ಭುತವಾದ ಕ್ರಿಯೆ, ಆಶ್ಚರ್ಯಕರವಾದ ಘಟನೆ, ಮಹಿಮೆ ನಿಸರ್ಗಕ್ಕೆ ವಿರುದ್ಧವಾದ ಒಂದು ಕ್ರಿಯೆ, ಅಂತಹ ಘಟನೆಗಳು ಮಹಾಂತ ಶಿವಯೋಗಿಗಳ ಜೀವನದಲ್ಲಿ ನಡೆದು ಹೋಗಿವೆ, ಅವರು ನುಡಿದರೆ ಪವಾಡ. ನಡೆದರೆ ಪವಾಡ ಆದರೆ ಇಂದಿನ ಯುಗದಲ್ಲಿ ಪವಾಡಕ್ಕೆ ಮಹತ್ವವಿಲ್ಲ. ಆದರೆ ಶಿವಯೋಗಿಗಳು ಸಹಜವಾಗಿ ತಮ್ಮ ಪವಾಡವಾಗಿ ತೋರುತ್ತಿತ್ತು, ಅವರು ಮಠದಲ್ಲಿದ್ದಾಗ ಸಂಚಾರದಲ್ಲಿದ್ದಾಗ ನೂರಾರು ಪವಾಡಗಳು ಅವರ ಭಕ್ತಿಗೆ ಘಟಸಿವೇ ಅವುಗಳಲ್ಲಿ ಕೆಲವನ್ನು ಹೇಳಲು ಬಯಸುತ್ತೇನೆ.

5.1 ಉಳಿವೆ ಜಾತ್ರೆ :–

ಬಾಲ ಮಹಾಂತನು ಪ್ರತಿ ವರುಷವೂ ಉಳಿವೆಯ ಜಾತ್ರೆಗೆ ಹೋಗುವುದು ಪರಿಪಾಠ, ಈ ವರ್ಷಏನು ವಿಚಾರವೇ ಇಲ್ಲದಿದ್ದಾನಲ್ಲ ಎಂದು ಭಕ್ತರು ನೆನಪು ಕೊಟ್ಟರು", 'ಹೋಗುವೆವು, ಹೊರಡುವವರೆಲ್ಲ ಸಿದ್ಧವಾಗಿರಿ' ಎಂದು ಮಹಾಂತಯೋಗಿ ಹೇಳಿದನು ಎಲ್ಲರೂ ಸಿದ್ಧರಾದರು ಈತ ಮಾತ್ರ ಹೊರಡುವ ಲಕ್ಷಣವೇ ತೋರಲಿಲ್ಲ, ಐದು ದಿನಗಳು ಇದೇ ರೀತಿ ಕಳೆದವು ಹುಣ್ಣಿಮೆಯ ದಿನ ಮುಂಜಾನೆ ಯೋಗೀಶನು ಎಲ್ಲರನ್ನು ಮುಳಗುಂದದ ಕಲ್ಮಠಕ್ಕೆ ಕರೆಸಿಕೊಂಡು "ಇಂದು ಉಳಿವೆಯ ರಥೋತ್ಸವ ಎಲ್ಲರೂ ಉಂಡು ಬನ್ನಿ" ಎಂಬ ಆದೇಶವನ್ನು ಮಾಡಿದರು, ಎಲ್ಲರೂ ಕುತೂಹಲದಿಂದ ಉಂಡು ಬಂದರು ಗುರುಮಠದ ಹೊರಬಾಗಿಲನ್ನು ಮುಚ್ಚಿಸಿದನು. ತನ್ನ ಲಿಂಗಪೂಜಾ ಗವಿಯೊಳಕ್ಕೆ ಕರೆದನು, ಭಕ್ತರು ನೋಡುತ್ತಾರೆ. ಚೆನ್ನ ಬಸವಣ್ಣನಗುಡಿ! ಪರಿಸೆ ಕೂಡಿದೆ, ತೇರು ಎಳೆಯುತ್ತಿದೆ.

ಶಿವಘೋಷ ನಡೆದಿದೆ ! ಜನರು ಮೈಮರೆದು ಕಾಯಿ, ಕರ್ಪೂರ, ಮಾಡಿಸಿದರು, ಗಣಾರಾಧನೆ ಮಾಡಿಸಿದರು, ಆ ರಾತ್ರಿಯನ್ನು ಅಲ್ಲಿ ಕಳೆದು ಬೆಳಿಗ್ಗೆ ಗುರುಮಠದಲ್ಲಿ ಎದ್ದುರು ಉಳಿವೆಯ ಜಾತ್ರೆಗೆ ಹೋಗಿ ಅನೇಕರು ಅಲ್ಲಿ ಬಾಲಮಹಾಂತೇಶನನ್ನು ಕಂಡೆವೆಂದು ಹೇಳಿದರು.

5.2 ಟೊಪ್ಪಿಗೆಯಲ್ಲಿ ಕುಳಿತು ಹೊಳೆದಾಟಿದ :-

ಭರದೆ ಟೊಪ್ಪಿಗೆಯಲ್ಲಿ ಕುಳಿತು ಹೊಳೆಯಂದಾಂಟಿ।
ಹರಿಮತೀಯನೊಳು ಹರಭಕ್ತಿಯಂನೆಲೆಗೊಳಿಸಿ।
ಹರಧರ್ಮ ಸಾಮರ್ಥ್ಯಮಂ ತೋರಿ ಮೆರೆದನೇ।
ಶಿವಮತಾರ್ಣವಚಂದ್ರನು॥ [1]

ಸೊಲ್ಲಾಪುರದಿಂದ ದಕ್ಷಿಣ ಭಾಗಕ್ಕೆ ಹೊರಟು ಬರುವಾಗ ಮಧ್ಯದಲ್ಲಿ ಭೀಮಾನದಿಯನ್ನು ದಾಟಬೇಕಾಗುತ್ತದೆ. ದೇವರಕೊಂಡ ಎಂಬ ಗ್ರಾಮಕ್ಕೆ ಬರುತ್ತಲಿದ್ದಂತೆಯೇ ಭೀಮಾನದಿಯು ತುಂಬಿ ಹರಿಯತೊಡಗಿತು, ಆ ದಡಕ್ಕೆ ದೋಣಿಯೊಂದಿಗೆ ಅಂಬಿಗನು ಬಂದನು, ದಡದಲ್ಲಿರುವ ಜನರು ನಾವಿಯನ್ನು ಹತ್ತಿದರು ಶಿವಯೋಗಿಗಳು ಹತ್ತಲು ಹೊರಟಾಗ ಅಂಬಿಗನು "ನಿಮ್ಮಲ್ಲಿ ಹಣವಿದ್ದರೆ ಮಾತ್ರನಾವಿಯಲ್ಲಿ ಹತ್ತಿರಿ, ಇಲ್ಲವಾದರೆ ಹತ್ತಬೇಡರಿ" ಎಂದೂ ತಿರಸ್ಕರಿಸಿದನು, "ನಾವು ಜೋಳಿಗೆಯ ಜಂಗಮರು" ಎಂದು ಹೇಳುತ್ತ ತಮ್ಮ ಟೊಪ್ಪಿಗೆಯ ತಮ್ಮ ವಸ್ತ್ರವನ್ನು ಹರಿಯುವ ನೀರಿನ ಮೇಲೆ ಚಾಪೆಯಂತೆ ಹಾಸಿ ಅದನ್ನೇ ದೋಣಿಯನ್ನಾಗಿ ಮಾಡಿಕೊಂಡು ತಮ್ಮ ಎರಡು ಹಸ್ತಗಳಿಂದ ನೀರನ್ನು ತಳ್ಳುತ್ತ ತುಂಬಿ ಹರಿಯುವ ನದಿಯನ್ನು ದಾಟಿದನು, ಆಗ ಅಂಬಿಗನ ನಾವೆಯು ಮಧ್ಯದಲ್ಲಿಯೇ ನಿಂತಿತು. ಅಂಬಿಗ ಭಯಗ್ರಸ್ತನಾದನು, ಪ್ರಯಾಣಿಕರು ಭಯಪಟ್ಟು ದುಃಖಿಸತೊಡಗಿದರು, ಶಿವಯೋಗಿಗಳನ್ನು ನಾವೆಯಲ್ಲಿ ಹತ್ತಲು ನಾನು ತಿರಸ್ಕರಿಸುದುದೇ ಕಾರಣವಾಯಿತೇನೋ ಎಂದು ಮನದಲ್ಲಿ ಹಳಹಳಿಸುತ್ತ, ಪ್ರಾರ್ಥಿಸಿಕೊಂಡನು, "ಪೂಜ್ಯರೇ ಕ್ಷಮಿಸೊ, ನನ್ನನ್ನು ಹಾಗೂ ನಾವೆಯಲ್ಲಿದ್ದವರನ್ನು ಕಾಪಾಡಿರಿ" ಎಂದು ವಿನಯಪೂರ್ವಕವಾಗಿ ಬೇಡಿಕೊಂಡನು, ಆಗ ಶಿವಯೋಗಿಗಳು ಎರಡು ಹಸ್ತಗಳನ್ನು ಮೇಲೆಕ್ಕೆತ್ತಿ "ಬಾರಯ್ಯ ಬಾ ಅಂಬಿಗನೇ ಈಚೆಗೆ ಬಾ"! ಎಂದು ಅಪ್ಪಣೆ ಪಡಿಸುತ್ತಲ್ಲಿದಂತೆಯೇ ಆ ನಾವೆಯು ಎಂದಿನಂತೆಯೇ ಸರಳವಾಗಿ ಬಂದು ಶಿವಯೋಗಿಗಳು ನಿಂತ ದಡ ಸೇರಿತು, ಇನ್ನೂ ಮುಂದೆ ಯಾವಾಗಲೂ ತಮ್ಮಂತಹ ಶಿವಸ್ವರೂಪಗಳಿಗೆ ಹಣವನ್ನು ಕೇಳುವುದಿಲ್ಲ ಹಾಗೂ ತಾತ್ಸಾರ ಮಾಡುವುದಿಲ್ಲ ನನ್ನನ್ನು ಉದ್ಧರಿಸಿರಿ ಎಂದು ಪೂಜ್ಯರಿಗೆ ಬೇಡಿಕೊಂಡನು [2]

1 .ದ್ಯಾಂಪುರ ಚೆನ್ನಕವಿ –ಬಾಲಲೀಲಾ ಮಹಾಂತ ಶಿವಯೋಗಿಗಳು ಪುರಾಣ ಪುಟ–90 ಸಂಧಿ 11

2. ಶ್ರೀಮಲ್ಲಿಕಾರ್ಜುನ ಮಹಾಸ್ವಾಮಿಗಳು–ಶಿಶುಮಹಾಂತ ಪುಟ 35 2005

5.3 ನೀರಲ್ಲಿ ಮುಳುಗಿದ ಲಿಂಗವನ್ನು ತಿರುಗಿ ಬರಸಿದನು

ಒಮ್ಮೆ ಹೊಳೆದಾಟುವಾಗ ಶ್ರೀಗಳ ಲಿಂಗ ನೀರಲ್ಲಿ ಬಿದ್ದು ಬಿಡುತ್ತದೆ. ಮೂರು ದಿನ ಮೈಮೇಲೆ ಎಚ್ಚರವಿಲ್ಲದೆ ನೆರೆಯೇರಿ ಬರುತಿದ್ದ ಆ ಹೊಳೆಯಲ್ಲಿ ಪ್ರಾಣಲಿಂಗಾನು ಸಂಧಾನದ ಶಿವಯೋಗ ಸಮಾಧಿಯಲ್ಲಿ ಮಗ್ನರಾಗುತ್ತಾರೆ ಮುಳುಗಿ ಹೋದ ಲಿಂಗವೇ ತಾನೇ ತೇಲಿ ಬರುತ್ತದೆ. ಗುರುವಿನ ಆಜ್ಞೆಯಂತೆ ಸ್ವೀಕರಿಸುತ್ತಾರ, ಲಿಂಗವನ್ನು ಅವರೂ ಬಿಡಲಿಲ್ಲವೆನ್ನುವ ಮಾತು ಒತ್ತಟ್ಟಿಗಿರಲಿ ಲಿಂಗವೇ ಅವರನ್ನು ಬಿಡಲಿಲ್ಲ. ಹೀಗೆ ಗುರುವಿನ ಅನುಗ್ರಹದಿಂದ ಲಿಂಗವನ್ನು ಲಿಂಗಾನುಗ್ರಹದಿಂದ ಗುರುವನ್ನು ಪಡೆದು ಧನ್ಯರಾದವರು.

5.4 ಎಮ್ಮೆಯಾಯಿತು ಆಕಳ :–

ಒಮ್ಮೆ ಭಕ್ತರ ಮನೆಯಲ್ಲಿ ಶಿವಪೂಜೆ ಮಾಡಿಕೊಂಡು ನೈವೇದ್ಯಕ್ಕಾಗಿ ಎಮ್ಮೆಯ ಹಾಲನ್ನು ತರಿಸುತ್ತಾರೆ. ಯಾರೋ ಒಬ್ಬರು ಕುಹಕಿಗಳು ಎಮ್ಮೆಯ ಹಾಲು ನೈವೇದ್ಯಕ್ಕಾಗಿ ಸಲ್ಲದು ಎಂದರು. ಅದು ಹೇಗೆ ಎಂದು ವಾದಿಸಿದಾಗ ಅದು ಎಮ್ಮೆ ಅಲ್ಲ ಆಕಳೂ ಎಂದು ಹೇಳುತ್ತಾರೆ. ಎಮ್ಮೆ ಮಾತ್ರ ಇರುವುದನ್ನು ಖಾತ್ರಿ ಮಾಡಿಕೊಂಡೆ ಕೇಳಿದ ಭಕ್ತರಿಗೆ ಆಕಳು ತೋರಿಸಿ ಅದ್ಭುತ ಪವಾಡವನ್ನು ಮೆರೆದು ಜನಮನದಲ್ಲಿ ಉಳಿದುಕೊಂಡಿದೆ ಹೀಗೆ ಅನೇಕ ರೀತಿಯ ಪವಾಡಗಳು ಕಂಡುಬರುತ್ತವೆ.

5.5 ಹುಸಿಹೋಗದ ನುಡಿ :–

ಮುಳಗುಂದದ ಗವಿಮಠವನ್ನು ಕಲ್ಲುಗಳಿಂದ ಕಟ್ಟುತ್ತಿದ್ದರು, ಕಟ್ಟುವ ಕಾರ್ಯವೂ ಭರದಿಂದ ನಡೆದಿತ್ತು, ಆಗ ಗವಿಯ ಮೇಲೆ ಹಾಕಲಿಕ್ಕೆ ಒಂದು ಹಾಸುಗಲ್ಲು ಕೊರತೆಯಾಯಿತು, ಆ ಕಲ್ಲು ಮುಳಗುಂದದಲ್ಲಿ ಎಲ್ಲೂ ಸಿಗಲಿಲ್ಲ, ಕಾರ್ಯ ವಿಳಂಬವಾಯಿತು ಗಣಂಗಳಪ್ಪನವರು ಅಳೆತೆಯ ಕಲ್ಲಿಗಾಗಿ ಎಲ್ಲ ಕಡೆಗೂ ಪ್ರಯತ್ನಿಸಿದರು. ಅಂತಹ ಕಲ್ಲು ಸಿಗಲಿಲ್ಲವೆಂದು ಶೆಟ್ಟರು ನಿರಾಶೆಯ ಮಾತುಗಳನ್ನಾಡುತ್ತಲಿದ್ದರು ಮಠದ ಮುಂದೆಯೇ ನಿಂತಿದ್ದ ಚಿಂಚಲಿಯ ಗ್ರಾಮದ ಓರ್ವ ಭಕ್ತನು ನಮ್ಮೂರಿನ ಶ್ರೀಮಂತ ರೈತರೊಬ್ಬರ ಮನೆಯ ಮುಂದೆ ಆ ಅಳತೆಯ ಕಲ್ಲು ಇದೆ ಎಂದು ಹೇಳಿದನು. ಇದನ್ನು ಕೇಳಿದ ಹಸಿಬಿ ಗಣಂಗಳಪ್ಪನವರು ಶಿವಯೋಗಿಗಳಿಗೆ ಈ ವಿಚಾರವನ್ನು ತಿಳಿಸಿ ಅವರ

ಅಪ್ಪಣೆ ಪಡೆದು ಹಾಸುಗಲ್ಲು ತರಲು ಚಿಂಚಲಿಯ ಶ್ರೀಮಂತ ರೈತನ ಮನೆಗೆ ಹೋದರು ಈ ವಿಚಾರವಾಗಿ ಹೇಳುತ್ತ "ನಿಮ್ಮ ಮನೆಯ ಮುಂಭಾಗದಲ್ಲಿದ್ದ ಈ ಕಲ್ಲು ನಮ್ಮ ಮಠಕ್ಕೆ ಅವಶ್ಯವಾಗಿ ಬೇಕಾಗಿದೆ, ಈಗ ಕೊಡಿರಿ ಮುಂದೆ ತಮಗೆ ಇಂತಹ ಕಲ್ಲನ್ನು ಕೊಡುವೆವು" ಹೀಗೆಂದು ಕೇಳಿಕೊಂಡರು, ಆಗ ಆ ಮಹಾನುಭಾವನು, " ಕಲ್ಲು ಕಡಾ ಒಯ್ಯುವದಕ್ಕೆ ನಿಮಗೇನು ಬಿಕ್ಕ ಹತ್ತೇದ ? ಊರು ಬಿಟ್ಟು ಊರಿಗೆ ಕೇಳಾಕ ಬಂದೀರಿ ಕೊಡುವುದಿಲ್ಲ ಹೋಗಿರಿ" ಎಂದು ತಿರಸ್ಕಾರದಿಂದ ನುಡಿದನು.

ಅಲ್ಲಿಂದ ಮರಳಿದ ಗಣಂಗಳಪ್ಪನು ಶಿವಯೋಗಿಗಳಿಗೆ ಚಿಂಚಲಿಯ ಭಕ್ತನ ತಿರಸ್ಕೃತ ಮಾತುಗಳನ್ನು ಅರುಹಲು "ಶೆಟ್ಟರೇ ಆ ಕಲ್ಲು ನಮ್ಮ ಮಠಕ್ಕೆ ಬೇಡ, ಆ ಭಕ್ತನಿಗಾಗಿಯೇ ಇರಲಿ" ಎಂದು ಪೂಜ್ಯರ ವಾಣಿ ಹೊರಹೊಮ್ಮಿತು ಮುಂದಿನ ಕೆಲವೆ ದಿನಗಳಲ್ಲಿ ಆ ರೈತ ತೀರಿಹೋದನು ಆಗ ಮನೆಯ ಮುಂದೆ ಇದ್ದ ಹಾಸಗಲ್ಲನ್ನು ಕುಣಿಯಲ್ಲಿ ಕುಳಿತ ಭಕ್ತನ ಮುಖಕ್ಕೆ ಇಟ್ಟರು. ಹೀಗೆ ಅನೇಕ ಪವಾಡಗಳು ಸಹಜವಾಗಿಯೇ ನಡೆಯುತ್ತಿದ್ದವು, ಶರಣರು ಹೇಳಿದಂತೆ" ಇಷ್ಟ ಲಿಂಗವ ಹಾಡಿ ಹಾಡಿಕೊಂಡಾಡಿ ಎನ್ನ ಜಿಹ್ವೆ ಪರುಷವಾಯಿತ್ತು" ಅಂದದ್ದೆಲ್ಲ ಹುಸಿ ಹೋಗುತ್ತಿರಲಿಲ್ಲ ಇದಕ್ಕೆ ಮೇಲೆ ಹೇಳಿದ ಚಿಂಚಲಿ ಗ್ರಾಮದ ಘಟನೆಯೇ ಸಾಕ್ಷಿಯಾಗಿದೆ.

5.6) ಮಳೆ ಮಹಾತ್ಮೆ :-

ಮತ್ತೊಂದು ದಿನ ಊರಿನ ಸರ್ವಭಕ್ತರೂ ಸೇರಿ ಮೇಲು ಮಠದಲ್ಲಿದ್ದ ಶಿವಯೋಗಿಗಳನ್ನು ಊರಿನ ಮಧ್ಯದಲ್ಲಿ ಕಟ್ಟಿದ ಗವಿಮಠಕ್ಕೆ ದಯಮಾಡಿಸಲು ಕೃಪೆದೋರಬೇಕೆಂದು ಬೇಡಿಕೊಳ್ಳುತ್ತ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಿದರು, "ಪಲ್ಲಕ್ಕಿ ಉತ್ಸವ, ಈ ಆಡಂಬರ ನಮಗೆ ಬೇಡ, ಸಹಜವಾಗಿ ಪಾದಾಚಾರಿಗಳಾಗಿಯೇ ಗವಿಮಠಕ್ಕೆ ಬರುತ್ತೇವೆ" ಎಂದರು, ಉತ್ಸವದೊಂದಿಗೆ ಪಾದಾಚಾರಿಗಳಾಗಿ ಹೊರಟರು, ಆ ಸಮಯಕ್ಕೆ ಗುಡುಗು ಸಿಡಿಲಿನೊಂದಿಗೆ ಮಳೆ ಸುತ್ತಮುತ್ತ ಸುರಿಯಲಾರಂಬಿಸಿತು. ಎಲ್ಲರೂ ಆರ್ಭಟಕ್ಕೆ ಅತ್ತಿತ್ತ ಸರಿಯಲಾರಂಭಿಸಿದಾಗ "ನಿಮಗೇನು ಆಗುವದಿಲ್ಲ, ಮಳೆಯು ತೊಂದರೆಯನ್ನು ಮಾಡುವದಿಲ್ಲ, ಬಸವನಾಮವನ್ನು ಘೋಷಿಸುತ್ತ ಹೊರಟು ಮುನ್ನೆಡೆಯಿರಿ, ಎಂದು

ಹುರಿದುಂಬಿಸಿದರು. ಆ ಭಕ್ತರ ಮಧ್ಯದಲ್ಲಿ ಹೋಗುತ್ತಲಿದ್ದರೆ ಶಿವಯೋಗಿಗಳು ಹೋಗುವ ಉತ್ಸವದ ದಾರಿಯುದ್ದಕ್ಕೂ ಮಳೆಯ ಒಂದು ಹನಿಯೂ ಇಲ್ಲ, ಆದರೆ ಎಲ್ಲರ ಕಾಲ್ಕೆಳಗೆ ನೀರು ಹರಿದುಹೋಗುತ್ತಲಿದೆ, ಈ ಅದ್ಭುತ ಆಶ್ಚರ್ಯಕ್ಕೆ ಬೆರೆಗಾದ ಭಕ್ತ ಸಮೂಹವು ಈ ಘಟನೆಗೆಲ್ಲ ಮಹಾಂತ ಶಿವಯೋಗಿಯ ಕೃಪೆಯೇ ಕಾರಣವೆಂದು ತಮ್ಮತಮ್ಮೊಳಗೆಯೇ ಮಾತನಾಡುತ್ತಾ ಕೈಮುಗಿಯುತ್ತಲಿದ್ದರು, ಗವಿಮಠಕ್ಕೆ ಉತ್ಸವ ಆಗಮಿಸಲು ಮಳೆಯು ನಿಂತಿತು ಅಂದಿನಿಂದ ಆ ಗವಿಮಠಕ್ಕೆ ಪೀಠಾಧಿಪತಿಗಳಾದರು.

ಬಿದರ ಹಳ್ಳಿಯ ರಾಮಲಿಂಗಪ್ಪನು ತನ್ನ ಹೊಲದಲ್ಲಿ ಭಾವಿ ತೋಡಿಸಿ ಗಂಗೆಯ ದರ್ಶನವಿಲ್ಲದೆ ಕಂಗಾಲಾಗಿದ್ದನು. ಅದೇ ಮಾರ್ಗವಾಗಿ ಬರುವ ಶಿವಯೋಗಿಗಳು ಆತನ ಸಂಕಷ್ಟವನ್ನು ಅರಿತುಕೊಂಡು ಕೈಯಲ್ಲಿ ಗುದ್ದಲಿಯನ್ನು ತೆಗೆದುಕೊಂಡು ಅಗೆಯಲು ಪ್ರಾರಂಭಿಸಿದರು,ಆಗ ಗಂಗೆಯ ಚಿಲುಮೆ ಕಾಣಿಸಿಕೊಂಡಿತು ಇದು ಶಿವಯೋಗಿಗಳ ಪವಾಡವಾಗಿ ಉಳಿದುಕೊಂಡಿದೆ.

5.7 ಮೈಸೂರು ಅರಸನ ರೋಗ ನಿವಾರಣೆ :-

ಚಾಮುಂಡೇಶ್ವರಿ ಬೆಟ್ಟದಲ್ಲಿ ವಾಸವಾಗಿದ್ದ ಕೆಲವು ಸಂತರು ಈ ಪೂಜ್ಯರೊಡನೆ ಧಾರ್ಮಿಕವಾಗಿ ಚರ್ಚೆಗೈಯ್ಯುತ್ತ " ಇಲ್ಲಿಯ ದೊರೆ ಮುಮ್ಮುಡಿ ಕೃಷ್ಣರಾಜ ಒಡೆಯರಿಗೆ ಬೇನೆಗಳಲ್ಲಿಯೇ ಮಹಾಬೇನೆ ಅಂಟಿಕೊಂಡಿದೆ ಅದಕ್ಕೆ ಸಾಕಷ್ಟು ವೈದ್ಯೋಪಚಾರಗಳನ್ನು ಮಾಡಿಸಿದರೂ ಗುಣ ಕಂಡುಬಂದಿಲ್ಲ. ಯಂತ್ರ-ಮಂತ್ರ ಮಾಡಿಸಿದರೂ ಏನೂ ಫಲಕಾರಿಯಾಗಿಲ್ಲ, ಇಡೀ ಮೈಸೂರಿನ ಪ್ರಜೆಗಳಿಗೆ ಚಿಂತೆಯಾಗಿದೆ, ಎಂದು ಮಹಾಂತ ಶಿವಯೋಗಿಗಳಿಗೆ ಅಲ್ಲಿದ್ದ ಸಂತರು ಬಿನ್ನವಿಸಿಕೊಂಡರು, ಆಗ ಶಿವಯೋಗಿಗಳು ತಡ ಮಾಡದೇ ಅರಸನ ಮೈ-ಮನಕ್ಕೆ ಮದ್ದು ನೀಡಲು ಚಾಮುಂಡಿ ಬೆಟ್ಟದಿಂದ ಅರಮನೆಯ ಮಹಾದ್ವಾರಕ್ಕೆ ದಯ ಮಾಡಿಸಿದರು. ಅಲ್ಲಿದ್ದ ದ್ವಾರಪಾಲಕರ ಒಪ್ಪಿಗೆ ಪಡೆದು ಅರಸನಿಂದ ಅಂತಃಪುರಕ್ಕೆ ದಯಮಾಡಿಸಿ ರೋಗಗ್ರಸ್ತನಾದ ದೊರೆಯ ಮುಖವನ್ನು ತಮ್ಮ ತೇಜಃ ಪುಂಜದ ದಿವ್ಯ ಕೃಪಾದೃಷ್ಟಿಯ ಮೂಲಕ ಒಂದು ನಿಮಿಷ ನೋಡಿ ತಮ್ಮ ಜೋಳಿಗೆಯಲ್ಲಿದ್ದ ಭಸ್ಮವನ್ನು ತೆಗೆದು ಅಮೃತ ಹಸ್ತದಿಂದ ಅರಸನ ಹಣೆಗೆ ಧರಿಸಿ ಮೃತ್ಯುಂಜಯ ಜಪಗೈದು

ಬಾಯಿಯೊಳಗೆ ಪಾದೋದಕ ಹಾಕಿ ಶಂಕರನು ನಿಮ್ಮನ್ನು ಈ ರೋಗದಿಂದ ಪಾರುಮಾಡಿದ್ದಾನೆಂದು ಆಶೀರ್ವದಿಸಿದರು, ಅರಸನು ಗುರುಗಳ ಪಾದಕ್ಕೆರಗಿ ವಿನಯದಿಂದ ಮೇಲುಧ್ವನಿಯಲ್ಲಿ "ನಿಮ್ಮ ನಾಮವಾವುದು"? ಎಂದನು "ಮಹಾಂತಯೋಗಿ" ಎಂದು ಹೇಳಿದರು, ರಾಜನಿಗೆ ಈ ಅರಮನೆಯ ಈ ಕೊಠಡಿಯಲ್ಲಿ ವಾಸ್ತವ್ಯವನ್ನು ಮಾಡದಿರು, ಕಾರಣ ಮುಂದೆ ಕೆಲವೇ ದಿನಗಳಲ್ಲಿ ಈ ಭಾಗಕ್ಕೆ ಸಿಡಿಲು ಅಪ್ಪಳಿಸುವುದು, ಮುಕ್ಕಾಲು ಭಾಗ ಅರಮನೆ ಸುಡುವುದು" ಎಂದು ಭವಿಷ್ಯವನ್ನು ನುಡಿದು ಹರಸಿ ಅರಮನೆಯಿಂದ ಹೊರಟರು ಹೀಗೆ ಇನ್ನು ಅನೇಕ ಪ್ರತ್ಯಕ್ಷ ಪವಾಡ ಸದೃಶ್ಯಗಳನ್ನು ಈ ಮಹಾಂತ ಶಿವಯೋಗಿಗಳಿಗೆ ಸಂಬಂಧಿಸಿದಂತೆ ಹೇಳಲಾಗಿದೆ.

ಅಧ್ಯಾಯ ೬

ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಶಿವಯೋಗಿಗಳ ಸ್ಥಾನ

ಅಧ್ಯಾಯ-6

ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಶಿವಯೋಗಿಗಳ ಸ್ಥಾನ

ಹಲ್ಮಿಡಿ ಶಾಸನದಿಂದಿಡಿದು ಇಂದಿನವರೆಗೆ ಅವ್ಯಾಹತವಾಗಿ ಬೆಳೆದಿರುವ ಕನ್ನಡ ಸಾಹಿತ್ಯ ತನ್ನದೇ ಆ ಚರಿತ್ರೆಯನ್ನು ಒಳಗೊಂಡಿದೆ ಹಲವಾರು ಸಾಹಿತ್ಯ ಪ್ರಕಾರಗಳು ನಮ್ಮ ಕನ್ನಡ ಸಾಹಿತ್ಯದ ವಿಪುಲತೆಯನ್ನು ವೈವಿಧ್ಯತೆಯನ್ನು ಸಾರಿ ಹೇಳುತ್ತವೆ. ಹೀಗಿರುವ ಪ್ರಾಚೀನ ಹಾಗೂ ಅರ್ವಾಚೀನ ಕವಿಗಳ ಪ್ರಬುದ್ಧ ಸಾಹಿತ್ಯದಲ್ಲಿ ಶರಣಸಾಹಿತ್ಯಕ್ಕೆ ಒಂದು ವಿಶಿಷ್ಟಸ್ಥಾನವಿದೆ. ಅದರಲ್ಲಿ ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಸ್ಥಾನವೇನೆಂದು ನೋಡುವುದು ಅವಶ್ಯವಾಗಿದೆ.

ಮುಳಗುಂದದ ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳ ಅಧ್ಯಯನದಲ್ಲಿ ಅವರ ಹೆಸರಿನ ತೊಡಕೇನು ಇಲ್ಲ. ಆದರೆ ಗುರುಪರಂಪರೆಯಿಂದಲೇ ಚಿರಪರಿಚಿತವಾದ ಮಹಾಂತ ಶಿವಯೋಗಿಗಳ ಪೂರ್ವಶ್ರಮದ ಯಾವುದೇ ಸಂಗತಿಗಳು ಸ್ಪಷ್ಟವಾಗಿ ತೋರುವುದಿಲ್ಲ. ಅವರಿಂದ ರಚಿತವಾದ "ಕೈವಲ್ಯದರ್ಪಣ"ದ ಆಂತರಿಕ ಸುಳಿವುಗಳ ಮೂಲಕ ವ್ಯಕ್ತವಾದ ಅವರ ಬದುಕಿನ ಎತ್ತರವನ್ನು ಆಧ್ಯಾತ್ಮದ ನಿಲುವುಗಳನ್ನು ಅರಿತುಕೊಂಡು ಆ ಮೂಲಕ ಅವರ ಸ್ಥಾನವನ್ನು ಮನವರಿಕೆ ಮಾಡಿಕೊಳ್ಳಬಹುದು.

ಶಿವಯೋಗಿಗಳು ಅವತರಿಸಿದಾಗ ಮತೀಯ ಘರ್ಷಣೆಗಳು ರಾಜಕೀಯ ತಿಕ್ಕಾಟ, ಧಾರ್ಮಿಕ ವಿನಾಶ, ಮೌಲ್ಯಗಳ ಕಳಪೆತನ ಸಮಾಜದಲ್ಲಿ ತಲೆಯೆತ್ತಿ ನಿಂತಾಗ, ಶರಣ ಸಂಪ್ರದಾಯದ ಮಹಾಂತರಿಗೆ ಯಾವುದೇ ರೀತಿಯ ಅನುಕೂಲಕರ ವಾತಾವರಣವಿದ್ದಿಲ್ಲ. ಇದ್ದುದರಲ್ಲಿಯೇ ತನ್ನಂತರಂಗದ ಹಂಬಲಕ್ಕನ್ನುಗುಣವಾಗಿ ಇಡೀ ಸಮಾಜವನ್ನೇ ದಿಕ್ಕರಿಸಿ ನಿಂತವರು. ಬಸವಣ್ಣನ ಬಂಡಾಯ ಮನೋಭಾವನೆಯನ್ನು ಸೂಕ್ಷ್ಮವಾಗಿ ರಕ್ತಗತ ಮಾಡಿಕೊಂಡ ಬಿನ್ನವಾಗಿ ಬೆಳೆದು ನಿಂತವರು. ಶಿವಯೋಗಿಗಳಿಂದಲೇ ರಚಿತವಾದ " **ಕೈವಲ್ಯದರ್ಪಣ"** ಮತ್ತು ಶಿವಯೋಗಿಗಳನ್ನು ಕುರಿತು ರಚಿತವಾದ ಶ್ರೀ ಬಾಲಲೀಲಾ ಮಹಾಂತೇಶ್ವರ ಪುರಾಣ" ಗಳಲ್ಲಿ ಅವರ ವ್ಯಕ್ತಿತ್ವ ರೂಪಪಡೆದು ನಿಂತಿದೆ.

ಪುರಾಣದಲ್ಲಿ ಶಿವಯೋಗಿಗಳ ಬಹಿರಂಗದ ವ್ಯಕ್ತಿತ್ವ ಚಿತ್ರಿತವಾಗಿದ್ದರೆ "ಕೈವಲ್ಯ ದರ್ಪಣ" ಅವರ ಅಂತರಂಗದ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವ ಸ್ಪರ್ಶದರ್ಪಣವೇ ಆಗಿದೆ. ಅವರ **"ಕೈವಲ್ಯ ದರ್ಪಣ"** ಕೃತಿಯಲ್ಲಿ ಬಹಿರಂಗದ ಎಷ್ಟೋ ಸಂಗತಿಗಳು ಕಾಣಿಸಿಕೊಂಡರು ಅಂತರಂಗದ ದಿವ್ಯವಿಲಾಸವೇ ಮುಖ್ಯ ವಸ್ತುವಾಗಿ ಬದುಕಿನ ದರ್ಪಣವಾಗಿದೆ, ಎಂದು ಹೇಳಬಹುದು, ಶಿವಯೋಗಿಗಳೆಂದೊಡನೆ, ಭಕ್ತಿಯ ಮೌಢ್ಯತೆಗೊಳಗಾಗಿ ಕಾಲಿಗೆ ಬಿದ್ದು ನಮಸ್ಕರಿಸುವ ಮುಗ್ಧ ಸಂಪ್ರದಾಯದಿಂದ ಜನರ ಮನದಲ್ಲಿ ಅನೇಕ ದಂತಕಥೆಯಾಗಿ ಉಳಿದುಕೊಂಡಿರುವ ಶಿವಯೋಗಿಗಳು ಪುರಾಣದ ಭವ್ಯತೆಗೇರುವುದು ಸಹಜವಿದೆ.

ಪವಾಡ ಮಾನವನ ಮನವನ್ನು ಬಿರುಗುಗೊಳಿಸಬಹುದು, ಕಣ್ಣಿಗೆ ಕಾಣುವ ಈ ಪವಾಡಗಳಿಗೆ ತಲೆಬಾಗುವದು ಲೌಕಿಕ ಭಕ್ತಿಯ ಲಕ್ಷಣ, ಆದರೆ ಸಾವಿರಾರು ಪವಾಡಗಳನ್ನು ಇಕ್ಕಿ ಮೆಟ್ಟುವ ಪರಮಾಧ್ಭುತವಾದ ಪವಾಡ ಮಾನವ ಶಿಶು "ಮಹಾಂತಲಿಂಗ" ವಾಗಿ ನಿಲ್ಲುವ ದಿವ್ಯಾದ್ಭುತ ಲಿಂಗಕ್ಕೆ ಲಿಂಗಯೋಗವಾಗಿ ಜೀವಾತ್ಮನಿಗೆ ಪರಮಾತ್ಮನ ಸಂಗವಾಗಿ ಮರವೆಯ ಕತ್ತಲೆಯಳಿದು ನಿಜದರುವಿನ ಬೆಳಗಿನಲ್ಲಿ ಅಂತರಂಗ ಬಹಿರಂಗವೆಲ್ಲಾ ಪ್ರಜ್ವಲಿಸಿ ಜೀವನೆಲಾ ಸದಾನಂದ ಲೀಲೆಯಾಗಿ 'ಪರಬ್ರಹ್ಮ ಶಿಶು' ವಿನ ಲೋಕವಿಲಕ್ಷಣವಾದ ವಿಚಿತ್ರ ಕ್ರೀಡೆಯಾಗಿನಿಂದ ನಿಜವಾದ ಪವಾಡ ಸ್ಥೂಲದೃಷ್ಟಿ ಸ್ಥೂಲಬುದ್ಧಿ, ಭೇದಿಸಬಾರದ ಪವಾಡವೆ ಆಗಿದೆ. ಆದ್ದರಿಂದ ಅಂತರಂಗ-ಬಹಿರಂಗವನ್ನು ಒಂದಾಗಿಸದ ಶರಣರು ಜನರ ಮೆಚ್ಚುಗೆಯನ್ನು ಮಾತ್ರ ಸಂಪಾದಿಸಿ ಆಡಂಬರದ ಜೀವನದಿಂದ ಜಗದ್ಗುರುಗಳೆಂದು ಮೆರೆದು ಹಲವಾರು ಸಮಯಗಳನ್ನೇ ಸೃಷ್ಟಿಸುತ್ತಾ ಧಾರ್ಮಿಕ ಐಕ್ಯತೆಗೆ ದಕ್ಕೆತರುವ ಕಾರ್ಯಚಟುವಟಿಕೆಗಳಿಗೆ ಆಹಾರವನ್ನು ಒದಗಿಸಿ ಧರ್ಮತತ್ವಗಳ ವ್ಯವಸ್ಥೆಯನ್ನೇ ತಿರುಚಿ ಜನಸಾಮಾನ್ಯರು ಕಂಗಾಲಾಗುವಂತೆ ಮಾಡುತ್ತಾರೆ ಅವರ ಹಾಡುಗಳಲ್ಲಿ ಒಂದು ಕಡೆಗೆ ಹೀಗೆ ಹೇಳುತ್ತಾರೆ.

ನರನಿರ್ಮಿತದುಪಾದಿಯ ಷಟ್ಪದಿ

ವರ ಜಗದ್ಗುರು ನೀವಾದಿರಯ್ಯ॥

ಹರ ನಿರ್ಮಿಥ ಶರಣಗಣಂಗಳ

ನಿರುಪಾದಿಕ ದೊರೆಪಟ್ಟದಿಂದೆ ನಾನು ಜಾಗತ್ಪತ್ರಾದೆ 124

ಕೆಲವು ಮಠಾಧಿಪತಿಗಳು ಜನ ಮೆಚ್ಚುಗೆಯಂತೆ ಧರ್ಮದ ಆಚಾರ-ವಿಚಾರಗಳನ್ನು

ಬದಲಿಸಿ ಅವರು ನಿರ್ಮಿಸಿದ ಪಟ್ಟಕ್ಕೆ ಜಗದ್ಗುರುವಾಗಿ ಮೆರೆಯುತ್ತಾರೆ. ಅಂಥವರನ್ನು ಮೇಲಿನ ಪದ್ಯದಿಂದ ಅಲ್ಲಗಳೆದೂ ಹರನಿರ್ಮಿತ ಪಟ್ಟಕ್ಕೆ ಅಧಿಕಾರಿಯಾಗಿ ಜಗದೊದ್ಧಾರದಲ್ಲಿ ತೊಡಗಿದರೆ ಮಾತ್ರ ನಿಜವಾದ ಜಗದ್ಗುರುಗಳಾಗುತ್ತಾರೆ. ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ಇಂತಹ ವ್ಯಕ್ತಿತ್ವವನ್ನು ಪಡೆದ ಶ್ರೀಗಳು ಬಸವಣ್ಣನಂತೆ ಸಮಾಜದ ತಿರಸ್ಕಾರಕ್ಕೊಳಗಾಗಿ ಅಷ್ಟೇ ಏಕೆ ತನ್ನ ಮನೆಯವರಿಂದಲೇ ಬಹಿಷ್ಕೃತವಾದ ಬಸವಣ್ಣನವರು ಹೀಗೆ ಹಾಡುತ್ತಾರೆ.

" ಅರಿಗಾರು ಇಲ್ಲ ಕೆಟ್ಟವಂಗೆ ಕಳೆಯಿಲ್ಲ.

ಜಗದ ನಂಟ ನೀನೇ ಅಯ್ಯ ಕೂಡಲಸಂಗಮದೇವಾ....

ಎಂದು ಹೇಳುತ್ತಾರೆ. ಅದರಂತೆ ಶಿವಯೋಗಿಗಳು ಸಹಿತ ಹೀಗೆ ಹಾಡುತ್ತಾರೆ.

ಯಾರು ಬಂದರೆ ಏನು ಯಾರು ಹೋದರೆ ಏನು ।

ಪೂರ ನಿಜಧ್ಯಾಸನವ ಸೇರಿ ನಿಂದರಿಗೆ॥ಪ॥ 67

ಹುಟ್ಟು ವೈರಾಗ್ಯಪರರಾದ ಶ್ರೀಗಳೂ ಕೊನೆಯವರೆಗೂ ಪರಮ ವೈರಾಗ್ಯವನ್ನೇ ಮೆರೆದರು ಅನೇಕ ಸಂದರ್ಭಗಳಲ್ಲಿ ಧನಕನಕಾದಿಗಳು ಇವರನ್ನರಸಿ ಬಂದರೂ ಚಂಚಲರಾಗದೇ ಘನ ವ್ಯಕ್ತಿತ್ವವನ್ನು ಮೆರೆದವರು. ಮೈಸೂರು ಮಹಾರಾಜರಿಗೆ ದರ್ಶನ ನೀಡಿದಾಗ ಸಂಪ್ರೀತರಾದ ಮಹಾರಾಜರು ಮುತ್ತು ರತ್ನಗಳನ್ನು ಕಾಣಿಕೆಯಾಗಿ ಸಲ್ಲಿಸಿದರು. ಅವುಗಳನ್ನು ತಿರಸ್ಕರಿಸಿ ಭಕ್ತರ ಮನಕ್ಕೆ ನೋವಾದೀತೆಂದು ಕುಂಬಳ ಬುರಡೇ (ಸೋರೆ)ಯೊಂದನ್ನೇ ಸ್ವೀಕರಿಸಿ ತಮ್ಮ ಘನತರವಾದ ವಿರಕ್ತಿಯನ್ನು ಮೆರೆದವರು.

ಅರಮನೆಯ ಅತಿಥ್ಯಕ್ಕೊಳಗಾದಾಗ ಅರಮನೆಯ ಹಲವು ಸ್ತ್ರೀಯರು ಶಿವಯೋಗಿಗಳ ಸೇವೆಯಲ್ಲಿ ನಿರತರಾದರು ಅದರಿಂದ ಸ್ಪರ್ಶ ಜ್ಞಾನದಿಂದ ಚಂಚಲತೆಗೊಳಗಾಗದಂತೆ,

ಜ್ಯೋಕೆ ಕಂಡ್ಯಾ । ಆತ್ಮಾ । ಜ್ಯೋಕೆ ಕಂಡ್ಯಾ ॥ 12

ಎಂದು ಹಾಡಿಕೊಂಡು ತಮ್ಮನ್ನು ತಾವು ಎಚ್ಚರಿಸಿಕೊಂಡಿದ್ದಾರೆ ಇಲ್ಲಿಯ ಅವರ ಪರಮವೈರಾಗ್ಯ ವ್ಯಕ್ತಿತ್ವ ಗುರುತರವಾದದ್ದು ಎಂಬುದು ಸ್ಪಷ್ಟವಾಗುತ್ತದೆ.

ಪರಮ ಶಿವಾನಂದದಲ್ಲಿರುವ ಶಿವಯೋಗಿಗಳು ನಡೆಸಿದ ಭಕ್ತಿಯೂ ವಿನೂತನವಾದುದು, ಶಿವನನ್ನೇ ಶಿಶುವನ್ನಾಗಿ ಮಾಡಿಕೊಂಡು ಪೂಜಿಸಿದರು ಲಾಲಿ

ಹಾಡಿದರು ಶಿವತಾಯಿಯಾಗಿ ಮಂಗಳಾರತಿಯನ್ನು ಹಾಡಿದರು. ಮತ್ತೊಮ್ಮೆ ತಾವೇ ಶಿಶುವಾಗಿ ಮಲಗಿ ಜೋಗುಳ ಕೇಳಿದ್ದಾರೆ. ಹೀಗೆ ಬಾಲಭಾವದಲ್ಲಿ ಸರ್ವವನ್ನು ಅರಿತು ಏನು ಅರಿಯದ ಮುಗ್ದರಂತೆ ಈ ಜಗತ್ತನ್ನು ನೋಡಿದರು. ದಿನದ ಬಹುಸಮಯವನ್ನು ಬಾಲಭಾವದಲ್ಲಿಯೇ ಕಳೆಯುತ್ತಿದ್ದರಂತೆ, ತಾಯಿ ಬಸಮ್ಮನ ಆರೈಕೆಯಲ್ಲಿ ಬಾಲ ಚೇಷ್ಟೆಗಳನ್ನು ಮಾಡತ್ತ ಜಗದ ಕಣ್ಣಿಗೆ ಬಾಲನಾಗಿ ಅಂತರಂಗದಲ್ಲಿ ಶಿವನೇ ತಾನಾಗಿ ಶಿವಯೋಗದ ಸಿರಿಯನ್ನು ಕಂಡವರು ಇಂತಹ ವಿಲಕ್ಷಣ ವ್ಯಕ್ತಿತ್ವವು ಭಕ್ತಿ ಪರಂಪರೆಯಲ್ಲಿ ವಿರಳದಲ್ಲಿ ವಿರಳವಾಗಿದೆ.

ಶಿವಯೋಗಿಗಳು ಸಾಮಾಜಿಕವಾಗಿ ತನ್ನದೇ ಆದ ಘಟ್ಟ ವ್ಯಕ್ತಿತ್ವವೊಂದನ್ನು ಪಡೆದುಕೊಂಡಿದ್ದರು, ಲಿಂಗನಾಯಕನಹಳ್ಳಿಯ ಶಿವಯೋಗಾಭ್ಯಾಸ ಪೂರ್ತಿಯಾದಾಗ ಅಲ್ಲಿಯ ಕೆಲವು ಸಹಪಾಠಿಗಳೆಲ್ಲ ಮೊದಲೇ ನಿಯೋಜಿತಗೊಂಡಿದ್ದ ಮಠವೊಂದಕ್ಕೆ ಅಧಿಪತಿಗಳಾಗಿ ಹೋದರು, ಬಾಲಲೀಲಾ ಮಹಂತರಿಗೆ ಯಾವುದೇ ರೀತಿಯ ನಿರ್ದಿಷ್ಟ ಮಠವೊಂದು ಇಲ್ಲದೆ ಲೋಕವೇ ನನ್ನ ಮನೆ" ಎಂಬ ವೈಶಾಲ್ಯತೆಯಿಂದ ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡುತ್ತ.

ಚರಜಂಗಮರಾಗಿ ಸಾಗಿದರು ದೈವಪ್ರೇರಣೆಯಂತೆ ಅವರನ್ನು ಮುಳಗುಂದಕ್ಕೆ ಕರೆತಂದಾಗ ಭಕ್ತರ ಪೇಕ್ಷೆಯಂತೆ ಗವಿಮಠದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಶಿವಯೋಗಿಗಳ ಹಾಡುಗಳ ಕಾವ್ಯನಂದಕ್ಕಾಗಿ ಇಲ್ಲದೆ ಧರ್ಮಶಾಸ್ತ್ರದ ಪ್ರಚಾರಕ್ಕಾಗಲಿ ರಚಿತವಾಗಿಲ್ಲ ಸಂದರ್ಭ ಬಂದಾಗ ಅನುಭವದ ಒತ್ತಾಸೆಯಲ್ಲಿ ಹೊರಹೊಮ್ಮಿದವುಗಳು ವಿನೂತನತೆಯ ದೃಷ್ಟಿಯಿಂದ ನಿಜಗುಣರಿಗೆ ಬಿನ್ನವಾದ ಸ್ಥಾನಗೌರವನ್ನು ಪಡೆದಿದ್ದಾರೆ ಕೈವಲ್ಯ ಪರಂಪರೆಯನ್ನು ಮುಂದುವರೆಸಿದರೂ ವಸ್ತುವಿನ ಆಯ್ಕೆಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತಂದಿದ್ದಾರೆ.

ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳು ಎಲ್ಲಂದದ ಹೊಸತನದಿಂದ ಹಾಡುಬರೆದು ಸಾಹಿತ್ಯದ ಸತ್ವವನ್ನು ಹೆಚ್ಚುಗೊಳಿಸಿದ್ದಾರೆ. ಹಾಗೆಯೇ ಗತಿಗತಿಕವಾದ ದೇಶಿಯ ಛಂದೋನಿಯಮಗಳಿಗೆ ಜೀವಧಾನ ಮಾಡಿದ ಶ್ರೇಯಸ್ಸು ಇವರದಾಗಿದೆ. ಈ ಕಾರಣದಿಂದ ಸಾಹಿತ್ಯಕವಾಗಿಯೂ ಶಿವಯೋಗಿಗಳ ಸ್ಥಾನ ವಿಶೇಷ ಮಟ್ಟದ್ದಾಗಿದೆ.

ಶಿವಯೋಗಿಗಳು ಶ್ರೇಷ್ಠಮಟ್ಟದ ಕಾವ್ಯಗುಣವನ್ನು ಹೊಂದಿದ್ದಾರೆ. ಭಾವತೀವ್ರತೆ ಭಕ್ತಿಯ ಆವೇಶ ವರ್ಣನೆ ತಕ್ಕ ಮಟ್ಟಿಗೆ ಇದ್ದು ಸರಸಾವೇಶದ ಸವಿಗಂಪನ್ನು ಮರೆತಿಲ್ಲ ಪ್ರಶಾಂತ ತೆರೆಗಳಿಂದ ಸೂಸಿ ಬರುವ ನಿರ್ಮಲವಾದ ಗಂಗೆಯಂತೆ ಇವರ ಧಾರ್ಮಿಕ ವಿಚಾರಗಳ ಓಟವಿದೆ, ಅಲ್ಲಿ ಮಿಂದವರು ಮಡಿಯಾಗುತ್ತಾರೆ, ಶುಚಿಯಾದ ಭಾವಸಮಕಾಲೀನ ಆಲೋಚನೆಗೆ ಒಲಿದ ಶರಣ ಕವಿಯು ತನ್ನದೇ ಆದ ಪದ ಸಂಪತ್ತು, ಅರ್ಥ ಸಂಪತ್ತು ವಸ್ತುವಿನ ಔಚಿತ್ಯ ಅರಿತುಕೊಂಡ ಕವಿಯಾಗಿ ಪ್ರತಿಭೆಯ ಸಹಜತೆ ಪ್ರಸನ್ನತೆಯ ಚಿತ್ರವನ್ನೆ ಪಡೆದು ಶ್ರೇಷ್ಠ ಹಂತಕ್ಕೇರಿದ್ದಾರೆ ಅಂತೆಯೇ ಅವರ ಸ್ಥಾನ ಕೈವಲ್ಯ ಸಾಹಿತ್ಯದಲ್ಲಿ ಮೇರು ಸ್ಥಾನವಾಗಿದೆ.

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಅತ್ಯಂತ ಕಡಿಮೆ ಕಾಲ ಬದುಕಿದ್ದರೂ ಶಾಶ್ವತವಾದ ಶಿವಯೋಗದೈಸಿರಿಯನ್ನು ಕಂಡುಂಡು ಜಗದೋದ್ದಾರಕ್ಕಾಗಿ ವಿನಿಯೋಗಿಸಿದರು ಪರಮ ವೈರಾಗ್ಯ ಮೂರ್ತಿಗಳಾದ ಶ್ರೀಗಳು ಬ್ರಹ್ಮ ವಿಷ್ಣುಗಳಿಗೆ ವೇದಗಳಿಗೆ ಅರಿಯಲಾರದು. ಪುರಾಣಿಕರಿಗೆ ಶಾಸ್ತ್ರಿಗಳಿಗೆ ನಿಲುಕಲಾರದು ಅಗಮ್ಯ ಆಗೋಚರರು, ಬಡವ-ಬಲ್ಲಿದರ ಭಕ್ತಿಯನ್ನು ಕೈಕೊಂಡು ಹೆಣ್ಣು ಹೊನ್ನಿನಾಸೆಯನ್ನು ಬಿಟ್ಟವರು ಪುಷ್ಪವನ್ನು ನೋಯಿಸದೇ ಗಂಧದ ಸ್ವೀಕರಿಸುವ ಬೃಂಗದಂತೆ ಭಕ್ತರ ನೋಯಿಸದೆ ಅವರಿಂದ ತಾ ನೋಯದೆ ತನ್ನ ಬ್ರಹ್ಮಾನಂದಕ್ಕೆ ಕೊರತೆಯಾಗದಂತಿರುವನು. ಆ ನಿಶ್ಚಿಂತ ಮಹಾಪುರಷನ ದರುಶನಕ್ಕೆ ಹೋದ ಪ್ರಾಪಂಚಿಕರು ತಮ್ಮ ಅಳಲನ್ನು ತೋಡಿಕೊಂಡರೆ ಮಹಾಪಾಪ ಬರುತ್ತದೆ. ದರುಶನದ ಲಾಭ ಹಾನಿಯಾಗುತ್ತದೆ. ಆತನು ನಿಶ್ಚಿಂತನು. ನಿರಾಳ ಲಿಂಗೈಕ್ಯನು. ಹೀಗಿರುವ ಶಿವಯೋಗಿಯ ದರ್ಶನಕ್ಕೆ ಹೋದ ಜನ ತಮ್ಮ ಪ್ರಾಪಂಚಿಕ ಅಂತಸ್ತಿನಿಂದ ಇಲ್ಲದ ಮಾತಾಡಿ ಅವರ ಯೋಗದ ಭಂಗಿಗೆ ತೊಡಕುಂಟಾಗದೇ ಸುಮ್ಮನೆ ನಿಂತುಕೊಳ್ಳಬೇಕು.

ಅವರೇ ಸಂಪ್ರೀತರಾಗಿ ನುಡಿದರೆ "ಮಹಾಭಕ್ತಿಯಿಂದ ಕಿವಿಕೊಟ್ಟುಕೊಳ್ಳುವುದು ಇಲ್ಲದಿದ್ದರೆ ಸುಮ್ಮನೆ ದರುಶನ ತಕ್ಕೊಂಡು ಹೋಗುವುದು. ತಿರುಗಿ ಮಾತಾನಾಡಿದರೆ. ಮಹಾಪ್ರಸಾದವೆಂದು ತಿಳಿಯುವರು ಇವತ್ತಿನ ಆಧುನಿಕ ಮಠಗಳು ಬಡವ ಬಲ್ಲಿದರ ಕ್ಷೇಮಾಪನೆಯ ಉಸಿರಾಗಿ ನಿಂತುಕೊಂಡಿವೆ. ಪ್ರಾಚೀನ ಕಾಲದಿಂದಲೂ ಸಮಾಜದ ಹಿರಿಒಡೆತನವನ್ನು ಹೊಂದಿದ ಇತರ ನಾಯಕರೊಂದಿಗೆ ರಹಸ್ಯವಾಗಿ ಹೊಂದಾಣಿಕೆಯನ್ನು ಮಾಡಿಕೊಂಡು ಪ್ರತಿಷ್ಠೆಯ ಗುಂಗಿನಲ್ಲಿರುತ್ತಾರೆ.

ಸಾಮಾನ್ಯರ ಸಮ್ಮುಖದಲ್ಲಿ ಜನಪರ ಕಾರ್ಯಕ್ರಮಗಳ ಸಂವಿಧಾನವನ್ನು ರೂಪಿಸಿ ಸಾಮಾಜಿಕ ಪ್ರತಿಷ್ಠೆಯನ್ನು ಹೊಂದುತ್ತಾರೆ ಇದರಿಂದ ಸಾತ್ವಿಕ ಸ್ಥಿತಿಯಲ್ಲಿರುವ ಕೆಲವು ಮಠಗಳು ಸಾರ್ವಜನಿಕ ಮನ್ನಣೆಯಿಂದ ದೂರುಳಿಯುತ್ತವೆ. ಆದರೆ ಮಠಾಧಿಕಾರಿಗಳ ಸಾತ್ವಿಕ ಸಾಧನೆಯ ಮೂಲಕ ತನ್ನ ನಿಜದರಿನಿಂದ ಯಾವುದೇ ಅಲ್ಪತೆಗೊಳಗಾಗದೇ ಜನರ ಹೃದಯ ಪೀಠದಲ್ಲಿ ಶಾಶ್ವತವಾಗಿ ನೆಲೆಯೂರುತ್ತಾರೆ. ಆ ಕಾರಣಕ್ಕಾಗಿ ಅವರ ಕೀರ್ತಿ ಕಾಲಾತೀತವಾಗಿ ಬೆಳೆದು ಪೀಳಿಗೆಯಿಂದ ಪೀಳಿಗೆಯವರೆಗೂ ಪ್ರಸಾರ ಹೊಂದುತ್ತಲೇ ನಡೆಯುತ್ತದೆ. ಅಂತಹ ಮಠಗಳ ಸಾಲಿನಲ್ಲಿ ಮುಳಗುಂದದ ಮಠವೂ ಒಂದಾಗಿದೆ.

ಭಕ್ತಿ ಜ್ಞಾನ ವೈರಾಗ್ಯದ ತವರೂರಾದ ಗವಿಮಠವು ಯಾವತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸುತ್ತಲ ಜನರಿಗೆ ಧಾರ್ಮಿಕ ಮನೋಭಾವನೆಯನ್ನು ಮೂಡಿಸಿದೆ. ಅದರ ಫಲವೇ ಎಂಬಂತೆ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಹೆಸರಿನಿಂದ 1942 ರಲ್ಲಿ ಬಾಲಲೀಲಾ ಮಹಾಂತ ಶಿವಯೋಗಿ ಶಿಕ್ಷಣ ಸಮಿತಿಯ ಎಸ್.ಜೆ.ಜೆ.ಎಂ. ವಿದ್ಯಾಸಂಸ್ಥೆಯು ಆರಂಭಗೊಂಡಿದೆ. ಸದ್ಭಕ್ತರ ತನುಮನ ಧನಗಳಿಂದ ಈ ಸಂಸ್ಥೆಯು ಇಂದು ಪದವಿಪೂರ್ವ ಮಹಾವಿದ್ಯಾಲಯವನ್ನು ಹೊಂದಿ 1993 ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿದ ಹಿರಿಮೆಯ ಹೆಗ್ಗಳಿಕೆಯನ್ನು ಹೊತ್ತು ನಿಂತಿದೆ.

ಈ ಶಾಲೆಯಲ್ಲಿ ವಿದ್ಯಾಭ್ಯಾಸಗೈದ ವಿದ್ಯಾರ್ಥಿಗಳು ನಾಡಿನ ಪ್ರಜ್ಞಾವಂತ ನಾಗರೀಕರಾಗಿ ಸರಕಾರ, ಸರಕಾರೇತರ ಸಂಘ-ಸಂಸ್ಥೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ನಾಡಿನ ಹಲವಾರು ಪ್ರತಿಷ್ಠಿತ ವೀರಶೈವ ಮಠಗಳಲ್ಲಿ ಮುಳಗುಂದದ ಗವಿಮಠವು ಒಂದು. ತನ್ನದೇ ಆದ ಗಟ್ಟಿಯಾದ ಧಾರ್ಮಿಕ ಜಾಗ್ರತಿಯನ್ನುಂಟು ಮಾಡುವಲ್ಲಿ ಈ ಮಠವು ಹೆಸರುವಾಸಿಯಾಗಿದೆ.

ಶಿವಯೋಗಿಗಳ ಪ್ರಭಾವವು ಅನೇಕ ಸಾಮಾಜಿಕ ಪರಿವರ್ತನೆಗೆ ಕಾರಣೀಭೂತವಾಗಿವೆ. ತಮ್ಮ ಮಕ್ಕಳಿಗೆ ಮಹಾಂತೇಶನ ಹೆಸರಿಟ್ಟು ಆತನ ಧ್ಯಾನ ಸದಾ ಆಗುವಂತೆ ಮಾಡಿದ್ದಾರೆ. ಅಲ್ಲದೇ ತಮ್ಮ ಮನೆಯ ಹೆಸರು, ಅಂಗಡಿಯ ಹೆಸರು, ಅದೂ ಅಲ್ಲದೇ ತಮ್ಮ ರೈತಾಪಿ ಉಪಕರಣಗಳಾದ ಚಕ್ಕಡಿ, ಟ್ರಾಕ್ಟರ ಇತ್ಯಾದಿಗಳಿಗೆ ಮಹೆಂತೇಶನ ಹೆಸರಿಟ್ಟಿರುವುದನ್ನು ಕಂಡರೆ ಆ ಪರಿಸರದಲ್ಲಿರುವ ಅವರ ಪ್ರಭಾವ ಅರಿಯಬಹುದು. ಸಾರ್ವಜನಿಕವಾಗಿ ವ್ಯವಸಾಯ ಸೇವಾ ಸಂಘದ ಹೆಸರು, ಮಹಾಂತೇಶ ಕ್ಲಿನಕ್ ,ಮಹಾಂತೇಶ ತರುಣ ಸಂಘ ಇತ್ಯಾಧಿಗಳು ತಲೆಎತ್ತಿ ಭಾವನಾತ್ಮಕ ಬದುಕನ್ನು ಪ್ರಸಾರಗೊಳಿಸುತ್ತವೆ.

ಒಟ್ಟಿನಲ್ಲಿ ಹಲವಾರು ಮಾಧ್ಯಮಗಳ ಮೂಲಕ ಶಿವಯೋಗಿಗಳ, ಪ್ರಸಾರ ಆಗಿರುವುದನ್ನು ನೋಡಿದರೆ ಇವತ್ತಿಗೂ ಅವರ ವ್ಯಕ್ತಿತ್ವ ಎಷ್ಟರ ಮಟ್ಟಿನ ಉದಾತ್ತೆಯನ್ನು ಪಡೆದಿದೆ ಎಂಬುದು ಅರಿವಾಗುತ್ತದೆ.

ಶಿವಯೋಗಿಗಳ ಸ್ಥಾನ ಸಾಹಿತ್ಯಕವಾಗಿಯಾಗಲಿ ಸಾಮಾಜಿಕವಾಗಿಯಾಗಲಿ ಗುರುತರವಾದದ್ದು ಎಂಬುದರಲ್ಲಿ ಸಂಶಯವಿಲ್ಲ, ನಾಡಿನ ಹಲವಾರು ಜನ, ಸಂತರು, ಶಿವಶರಣರು, ಶಿವಯೋಗಿಗಳು, ವೀರಶೈವ ಮಠದ ಸ್ವಾಮಿಗಳು ಆಗಿಹೋಗಿದ್ದಾರೆ. ಅವರಲ್ಲಿ ಕೆಲವರು ಕೇವಲ ಸಾಧನೆಯನ್ನು ಮಾಡಿದರೆ ಮತ್ತೆ ಕೆಲವರು ತಮ್ಮ ಸಾಧನೆಯ ಜತೆಗೆ ಬರಹವನ್ನು ಸೃಷ್ಟಿಸಿ ತಮ್ಮ ಹೆಸರನ್ನು ಶಾಶ್ವತಗೊಳಿಸಿದ್ದಾರೆ.

ಅಂತಹವರಲ್ಲಿ ಮುಳಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಸ್ಥಾನ, ಶಾಶ್ವತವೂ, ವಿಶಿಷ್ಟವುವೆಂದು ಹೇಳಬೇಕು ಇವರು ಸಾಹಿತ್ಯದಲ್ಲಿ ಪ್ರೌಡಿಮೆಗಿಂತ ಸುಲಭತೆಮಾರ್ಗಿಯಕ್ಕೆ ಬಿನ್ನವಾದ ದೇಶಿಯ ಗುಣ, ಸ್ವತಂತ್ರ ಪ್ರವೃತ್ತಿ, ಛಂದೋ ವೈವಿಧ್ಯವಸ್ತುವಿನ ವಿನೂತನತೆಯ ಶೈಲಿಯ ನಿರರ್ಗಳತೆ, ಸಾಮಾನ್ಯತೆ, ಹಾಡುಗಳ ನಿರ್ಮಾಣ ಸಂಗೀತದ ಪ್ರಾಧ್ಯಾನತೆ ಇತ್ಯಾದಿ ಗುಣಗಳನ್ನೇ ಇಟ್ಟುಕೊಂಡು ಶ್ರೀಸಾಮಾನ್ಯರ ಉದ್ದಾರ ಅಭೀಪ್ಸೆಯನ್ನು ಹೊಂದಿದ ಸ್ವರವಚನ ಸಾಹಿತ್ಯ ಪರಂಪರೆಯಲ್ಲಿ (ಕನ್ನಡ ಸಾಹಿತ್ಯದಲ್ಲಿ) ಕಾಣಿಸಿಕೊಂಡಿದ್ದಾರೆ.

ಅಧ್ಯಾಯ ೭

ಸಮಾರೋಪ

ಅಧ್ಯಾಯ–7

ಸಮಾರೋಪ

19ನೇ ಶತಮಾನದ ಪ್ರಾರಂಭದಲ್ಲಿ ಪರದೇಶಿಯರ ವಸಾಹತು ಸ್ಥಾಪನೆಯ ಬೀಸಲಾರಂಭಿಸಿತು ಕರ್ನಾಟಕದ ಮಠಮಾನ್ಯಗಳ ಆಡಳಿತವೂ ಶಿಥಿಲವಾಗಿ ಜೊಳ್ಳು ಧಾರ್ಮಿಕಾಚರಣೆಯಿಂದ ವೀರಶೈವ ಧರ್ಮದ ಮಾನ್ಯತೆ ಕಡಿಮೆಯಾಗಿ ಬೇರೆ ಧರ್ಮಿಯರ ಪ್ರಭಾವ ಹೆಚ್ಚಾಗುತಿದ್ದಿತ್ತು. ಇಂತಹ ಸಂದಿಗ್ಧ ವಾತಾವರಣದಲ್ಲಿ ಮಹಾಂತ ಶಿವಯೋಗಿಗಳು ಮುಳಗುಂದ ಮಠಾಧ್ಯಕ್ಷರಾಗಿ ಸಾಹಿತ್ಯದ ಗೀಳನ್ನು ಅಂಟಿಸಿಕೊಂಡವರು ಹಾಗೆ ನೋಡಿದರೆ ಉದ್ದೇಶಪೂರ್ವಕವಾಗಿ ರಚನೆ ಮಾಡಬೇಕೆಂದವರಲ್ಲ, ಬಸವಾದಿ ಪ್ರಮಥರಂತೆ ಸಮಾಜ ಸುಧಾರಣೆಯ ಜವಾಬ್ದಾರಿಯನ್ನು ಅಂಟಿಸಿಕೊಂಡು ಶಿವಯೋಗಿಗಳು ಸಂದರ್ಭಾನುಸಾರವಾಗಿ ಗೀತೆಗಳನ್ನು ಬರೆಯುತ್ತ ಬಂದರು, ಅವೇ ಹಾಡುಗಳು ಕೈವಲ್ಯ ದರ್ಪಣ ಎಂಬ ಹೆಸರಿನಲ್ಲಿ ಸಂಗ್ರಹಗೊಂಡಿವೆ, ಕೈವಲ್ಯಕಾರರಾಗಿ ಕೈವಲ್ಯ ಪರಂಪರೆಯ ಮಹತ್ವದ ಕೊನೆಯ ಕೊಂಡಿಯಾದ ಶ್ರೀಬಾಲೀಲಾ ಮಹಾಂತ ಶಿವಯೋಗಿಗಳ ಸಾಹಿತ್ಯ ಆ ಕಾಲದ ಬರಡುತನವನ್ನೇ ಹೋಗಲಾಡಿಸಿದರೆ 18 ಮತ್ತು 19ನೇ ಶತಮಾನದಲ್ಲಿ ಸಾಹಿತ್ಯ ಕೊಡುಗೆಯಾಗಬಲ್ಲ ಉತ್ಕೃಷ್ಟತೆಯನ್ನು ಪಡೆದ ರಚನೆಗಳೇ ಇಲ್ಲ ಎಂಬವರ ಪ್ರಶ್ನೆಗೆ ಕೈವಲ್ಯಕಾರರ ಹಾಡುಗಳು ಉತ್ತರವಾಗಿ ನಿಲ್ಲಬಲ್ಲವು.

ಕನ್ನಡ ಸಾಹಿತ್ಯವು ಚರಿತ್ರೆ ಯುದ್ದಕ್ಕೂ ಹಲವಾರು ಶ್ರೀಮಂತ ಮಜಲುಗಳನ್ನು ಕಂಡಿದೆ, ಪಂಪ, ರನ್ನಾದಿಗಳ ಕಾಲಕ್ಕೆ ಚಂಪೂ ತನ್ನ ಉನ್ನತಿಯನ್ನು ಮೆರೆದರೆ ನಂತರ 12ನೇ ಶತಮಾನದ ಶಿವಶರಣರ ಕಾಲಕ್ಕೂ ವಚರ ರೂಪದಲ್ಲಿ ಕನ್ನಡ ಸಾಹಿತ್ಯದ ಉನ್ನತ ಪರಂಪರೆಯೊಂದು ರೂಪ ಪಡೆಯಿತು, ಈ ಶರಣ ಸಾಹಿತ್ಯ ಹರಿಹರ – ರಾಘವಾಂಕರಲ್ಲಿ ಕಾವ್ಯಮಾಧ್ಯಮದಲ್ಲಿಯೂ ಪ್ರವಹಿಸಿ ಹಲವಾರು ಹೊಸ ಛಂದಸ್ಸುಗಳನ್ನೇ ದುಡಿಸಿಕೊಂಡು ಶತ ಶತಮಾನಗಳ ವೈಭವವನ್ನೆ ಅನುಭವಿಸಿದೆ. ಮುಂದೆ ದಾಸಸಾಹಿತ್ಯದಲ್ಲಿ ಕೀರ್ತನೆಗಳು ಹುಟ್ಟಿ ಭಾಷೆಯನ್ನು ಬೇರೊಂದು ನಿಟ್ಟಿನಲ್ಲಿ ದುಡಿಸಿಕೊಂಡು ಹರಿದಾಸ ಪರಂಪರೆಯನ್ನು ಹುಟ್ಟುಹಾಕಿದರು. ಈ ಹರಿದಾಸ ಪರಂಪರೆಗೆ ಪ್ರೇರಣೆಯಾಗಿ ನಿಂತಿರುವ ಕನ್ನಡ ಶಿವದಾಸ ಪರಂಪರೆಯೊಂದು 12ನೇಯ ಶತಮಾನದಿಂದಲೇ ಶಿವಶರಣರ

ಕುಲುವೆಯಲ್ಲಿ 'ಕೈವಲ್ಯ' ಎಂಬ ಹೊಸರೂಪದಲ್ಲಿ ಪ್ರವಹಿಸಿ ಸಣ್ಣ ಜರಿಯಾಗಿ ಹರಿದು 15ನೇ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಲ್ಲಿ ಗಟ್ಟಿ ತೆರೆಯಾಗಿ ಪ್ರವಾಹವಾಗಿ ತುಂಬಿ ಹರಿದು ಕೈವಲ್ಯ ಪರಂಪರೆ ಬೆಳೆಯಿತು. ಕೈವಲ್ಯಕಾರರಲ್ಲಿಯೇ ಪ್ರಮುಖ ವ್ಯಕ್ತಿಗಳಾಗಿ ಅವರು ಹಾಕಿಕೊಟ್ಟ ರಾಜಮಾರ್ಗದಲ್ಲಿ ಭಕ್ತಿಜ್ಞಾನ ವೈರಾಗ್ಯಪರವಾಗಿ ನಿಂತು ಗೀತೆಗಳನ್ನು ರಚಿಸಿದರು.

ಮುಂದೆ ಶರೀಫ ಸಾಹೇಬರು ಕಡಕೋಳ ಮಡಿವಾಳಪ್ಪ ತಿಂಥಿಣಿ ಮೋನಪ್ಪ ನಾಗಲಿಂಗ ಮುಂತಾದ ತತ್ವಪದಕಾರರ ಮೂಲಕ ಈ ಪರಂಪರೆ ಇವತ್ತಿಗೂ ಜೀವಂತವಾಗಿದ್ದು ಕನ್ನಡ ಸಾಹಿತ್ಯ ವಚನ ಸಾಹಿತ್ಯದ ಜತೆಜತೆಗೆ ನಿಂತು ಅಷ್ಟೇ ಮೌಲ್ಯವಾದ ಸ್ವರವಚನ ಪರಂಪರೆಯೂ ಬಂದಿದೆ. ಒಂದು ಮಠದ ಸ್ವಾಮಿಗಳಾಗಿ ಸಾಮಾಜಿಕವಾಗಿ, ಸಾಹಿತ್ಯಕವಾಗಿ ಅದಕ್ಕೂ ಹೆಚ್ಚಾಗಿ ವೈಯಕ್ತಿಕ ಸಾಧನೆಗೈದ ವೈರಾಗ್ಯದ ತುತ್ತ ತುದಿಯವರಗೇರಿದ ಪರಮ ಪಾವನ ಮೂರ್ತಿಗಳ ಬದುಕು ಬರಹದ ಸಮೀಕರಣವನ್ನು ಕನ್ನಡ ಜನತೆಗೆ ತಿಳಿಸಿಕೊಡುವದಕ್ಕಾಗಿ ಅವರನ್ನು ಕುರಿತು ಸಂಪೂರ್ಣ ಅಧ್ಯಯನ ಮಾಡಲಾಗಿದೆ.

ಇಲ್ಲಿ ಒಟ್ಟು 7 ಅಧ್ಯಾಯಗಳಿವೆ.

ಮೊದಲನೆಯ ಅಧ್ಯಾಯದಲ್ಲಿ – ಉದ್ದೇಶ, ಸ್ವರೂಪ, ವ್ಯಾಪ್ತಿಯನ್ನು ಕುರಿತು ಬರೆಯಲಾಗಿದೆ.

2ನೇ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೈವಲ್ಯ ಸಾಹಿತ್ಯದ ಚಾರಿತ್ರಿಕ ಹಿನ್ನಲೆಯನ್ನು ಕುರಿತು ಅದರ ಪರಂಪರೆಯನ್ನು ಹೇಳುತ್ತಾ ಇತ್ತೀಚಿನ ಕುರಿತು ಅದರ ಪರಂಪರೆಯನ್ನು ಹೇಳುತ್ತಾ ಇತ್ತೀಚಿನ ದಿನಮಾನಗಳವರೆಗೂ ಕಂಡುಬಂದ ಬೆಳವಣಿಗೆಯ ಕುರಿತು ಚರ್ಚಿಸಲಾಗಿದೆ.

ನಂತರದ ಅಧ್ಯಾಯದಲ್ಲಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಬದುಕನ್ನು ಪರಿಚಯಿಸಲಾಗಿದೆ. ಅವರ ಕಾಲ, ಸ್ಥಳ, ಗುರುಪಂಪರೆ, ಇತ್ಯಾದಿಗಳನ್ನು ಚರ್ಚಿಸಿ ಅವರು ಸಂಚಾರಾರ್ಥವಾಗಿ ನಡೆದ ಲೋಕ ಸುಧಾರಣೆ, ಮುಳಗುಂದದ ಮಠಾಧ್ಯಕ್ಷತೆಯನ್ನು ಹೊಂದಿ ತತ್ವಪದಗಳ ರಚನೆಯನ್ನು ಮಾಡುತ್ತ ಶಿವಯೋಗದ ದಿವ್ಯಾನುಭದಲ್ಲಿ ನಿಂತು

ತಾನೇ ಶಿವನಾಗಿ ಮೆರೆದ ಅವರ ಜೀವನ ಪರಿಚಯವನ್ನು ಮಾಡಿಕೊಡಲಾಗಿದೆ.

ನಾಲ್ಕನೆಯ ಅಧ್ಯಾಯ ಕೈವಲ್ಯದರ್ಪಣ ಅಂತರಂಗದಲ್ಲಿ, ಶಿವಯೋಗಿಗಳ ಕೈವಲ್ಯ ಪದಗಳ ರಚನಾ ವಿಧಾನವನ್ನು ಕುರಿತು ಸುಧೀರ್ಘವಾಗಿ ಚರ್ಚಿಸಲಾಗಿದೆ ಅವರ ಪದಗಳಲ್ಲಿ ಕಂತು ಬರುವ ಆಧ್ಯಾತ್ಮಿಕ, ಸಮಾಜ ಚಿಂತನೆ, ಮನುಕಲ್ಯಾಣ, ಸಾಹಿತ್ಯಕ ವಿವೇಚನೆಯನ್ನು ಮಾಡಲಾಗಿದೆ, ಶಿವಯೋಗಿಗಳು ಕನ್ನಡ ಸಾಹಿತ್ಯಕ್ಕೊಂದು ಹೊಸತನವನ್ನು ತಂದು ಕೊಟ್ಟಿದ್ದಾರೆ. ಛಂದಸ್ಸು ಅಂಶನಿಷ್ಠೆ, ಷಟ್ಪದಿಯ ಪ್ರಭಾವದಲ್ಲಿ ನಿಂತು ರಾಗ ತಾಳಗಳನ್ನು ಹೊಂದಿ ಹೊಸಗನ್ನಡ ಮಾತ್ರ ನಿಷ್ಪ ಷಟ್ಪದಿಯ ಬಲವನ್ನು ಪಡೆದು ರಚಿತವಾಗಿವೆ, ಆದ್ದರಿಂದ ಒಂದು ಮಟ್ಟದಿಂದ ಮತ್ತೊಂದು ಮಟ್ಟಕ್ಕೆ ಬದಲಾವಣೆಯಾಗುವ ಪ್ರಯೋಗಶೀಲ ಹಂತದಲ್ಲಿ ಹಲವಾರು ಛಂದೋನಿಯಮಗಳ ಶಿಥಿಲತೆಯನ್ನು ಅನುಭವಿಸಬೇಕಾಗುತ್ತದೆ.

ಇಲ್ಲಿ ಮಿಶ್ರ ಧೋರಣೆಯನ್ನು ಹೊಂದಿದ ಇವರ ಹಾಡುಗಳು ನಿರ್ದಿಷ್ಟವಾಗಿ ಇದೇ ಛಂದಸ್ಸನ್ನು ಪಡೆದವು ಎಂದು ಹೇಳಬರುವುದಿಲ್ಲ, ಈ ಎಲ್ಲ ಸಂಗತಿಗಳನ್ನು ಇಟ್ಟುಕೊಂಡು ಸವಿವರವಾಗಿ ಚರ್ಚಿಸಲಾಗಿದೆ. 5ನೇ ಅಧ್ಯಾಯದಲ್ಲಿ ಶಿವಯೋಗಿಗಳ ಪವಾಡಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಧ್ಯಾಯ–6 ರಲ್ಲಿ ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಶಿವಯೋಗಿಗಳ ಸ್ಥಾನ ಕುರಿತು ಚರ್ಚಿಸಲಾಗಿದೆ.

ಮೂಲತಃ ವೈರಾಗ್ಯ ಪರವಾದ ಶಿವಯೋಗಿಗಳು ಸದಾ, ಧ್ಯಾನ ಮಗ್ನರಾಗಿದ್ದು ಹೆಚ್ಚು ವೇಳೆ ಜನಸಂಪರ್ಕದಲ್ಲಿ ಉಳಿಯದೇ ಬೇಗನೇ ಬಾಲಭಾವನೆಯನ್ನು ಹೊಂದಿ ತೊಟ್ಟಿಲಲ್ಲಿ ಕುಳಿತು ತೂಗಿಸಿಕೊಳ್ಳುವ, ಬಾಲಚೇಷ್ಟೆಗಳಿಂದ ಪರಿಪರಿಯಾಗಿ ಕಾಡುವದರಲ್ಲಿ ಕಾಲ ಕಳೆಯುತ್ತಿದ್ದರಂತೆ ಒಟ್ಟಾರೆ ಜೀವನದ ಏಳು ಬೀಳುಗಳನ್ನು ಕುರಿತು ಅವರ ಹಾಡುಗಳ ಐತಿಹ್ಯಗಳ ಮೂಲಕ ವಿವರಣೆ ಮಾಡಲಾಗಿದೆ.

ಅವರು ಪದಗಳಿಗೆ ಬಳಿಸಿದ ಭಾಷೆ, ಅಲಂಕಾರ, ದೇಶೀಯ ಪದಗಳು ಅಮರವಾಣಿಗಳು ಅತ್ಯಂತ ಹೇರಳವಾಗಿ ಸುಂದರವಾಗಿ ಪ್ರಯೋಗಗೊಂಡಿವೆ.

ಒಟ್ಟಾರೆಯಾಗಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಬದುಕಿನ ಕೆಲವು ವಿಶೇಷತೆಗಳನ್ನು ಹೀಗೆ ಗುರುತಿಸಬಹುದೇನೋ?

1) ಕೈವಲ್ಯಕಾರರಲ್ಲಿ ಒಬ್ಬರು

2) ಭಕ್ತಿಜ್ಞಾನ, ವೈರಾಗ್ಯ ಪರವಾಗಿ ನಿಂತು ಜಾನಪದೀಯ ಸೊಗಡಿನಲ್ಲಿ ಜನಸಾಮಾನ್ಯರ

ಭಾಷೆಯನ್ನು ಬಳಸಿಕೊಂಡು 142 ಪದಗಳನ್ನು ರಚಿಸಿದ್ದಾರೆ.

3) ಅರಮನೆ-ಗುರುಮನೆಯ ದಿಕ್ಕರಿಸಿ ತಮ್ಮ ಅಂತರಂಗದ ಅರಿವಿನೊಂದಿಗೆ ಬಾಳಿದ ಒಬ್ಬ ಅಪ್ಪಟ ಶಿವಯೋಗಿ.

4) ಪ್ರಪ್ರಥಮವಾಗಿ ದೇಶಿ ಛಂದಸ್ಸುಗಳನ್ನು ಎತ್ತಿಕೊಂಡು ಅವುಗಳಿಗೆ ಧಾರ್ಮಿಕ ವಸ್ತುವನ್ನು ತುಂಬಿ ವಿನೂತನ ರೀತಿಯಲ್ಲಿ ರಚಿಸಿ ಅವುಗಳ ಸಾಹಿತ್ಯಕ ಗುಣವನ್ನು ಹೆಚ್ಚಿಸಿದರು.

5) ಜನ ಬದುಕುವ ಭಾಷೆಯನ್ನೇ ಬಳಸಿಕೊಂಡು ಅವರಿಗೆ ತಿಳಿಯುವಂತೆ ಸರಳವಾಗಿ ತತ್ವವನ್ನು ಹೇಳಿದರು.

6) ಪಂಡಿತ ಮಾನ್ಯರಿಂದ ಅಶ್ಲೀಲ ಸಾಹಿತ್ಯವೆಂದು ಕೀಳ್ದೆಸೆಗಿಳಿದಿದ್ದ ಅನೇಕ ಛಂದಸ್ಸುಗಳಿಗೆ ಜೀವದಾನ ಮಾಡಿ ಶ್ಲೀಲತೆಯನ್ನು ತಂದುಕೊಟ್ಟರು.

7) ಛಂದೋನಿಯಮಗಳ ಕಡೆಗೆ ಗಮನ ಹರಿಸದೇ ಹೃದಯ ಸ್ಪರ್ಶತ್ವವೊಂದನ್ನು ಪ್ರಧಾನವಾಗಿಟ್ಟು ಹಾಡು ಹೇಳಿದರು, ಇನ್ನು ಹಲವಾರು ವಿಶೇಷತೆಗಳಿಂದ.

ಶ್ರೀ ಶಿವಯೋಗಿಗಳ ಸಾಹಿತ್ಯವು ತನ್ನದೇ ಆದ ಶ್ರೇಷ್ಠತೆಯನ್ನು ಮೆರೆದಿದೆ.

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಕೃತಿ 'ಕೈವಲ್ಯ ದರ್ಪಣ' ಒಂದೇ ಆಗಿದ್ದರೂ ಹಲವು ರೀತಿಯಲ್ಲಿ ಪರಿಚಯಿಸಿದ ತೃಪ್ತಿ ನನಗಿದೆ, ಆದರೂ ವಿಮರ್ಶೆ ಒಬ್ಬರ ಸೊತ್ತಲ್ಲ ಅದು ನಿತ್ಯನಿತ್ಯ ನವೋನ್ಮೇಷಶಾಲಿನಿಯಾದುದು, ವಿಮರ್ಶಕನ ಪ್ರತಿಭಾ ಕಣ್ಣು ನೋಡಿದಷ್ಟು ವಿಸ್ತಾರದಲ್ಲಿ ಬೆಳೆದು ನಿಲ್ಲುವ ವಿಷಯ ವ್ಯಾಪಕತೆ ಇಲ್ಲಿದೆ.

ಒಟ್ಟಾರೆ ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳು ವಿರಕ್ತರಾಗಿ ಮಠದ ಸ್ವಾಮಿಯಾಗಿ ಕೈವಲ್ಯಕಾರರಾಗಿ, ಸಮಾಜ ಸುಧಾರಕರಾಗಿ, ನಂಬಿದ ಭಕ್ತರ ಬೆಂಗಾವಲಾಗಿ, ತಪೋನಿಷ್ಠರಾಗಿ ಬಾಲಲೀಲಾ ವಿನೋದಶೀಲರಾಗಿ, ವಿಶೇಷ ಸ್ಥಾನಗೌರವಕ್ಕೇರಿದ ಅನುಭಾವಿ ಕವಿಗಳಾದ ಇಂತಹ ಶಿವಶರಣರಿಂದ ಕನ್ನಡ ನಾಡು-ನುಡಿ ಧನ್ಯವಾಗಿದೆ.

ಅನುಬಂಧಗಳು

ಗ್ರಂಥಋಣ

1) ಶ್ರೀಬಾಲಲೀಲಾ ಮಹಾಂತ ಶಿವಯೋಗಿಗಳು ರಚಿಸಿದ ಗ್ರಂಥಗಳು

1) ಪ್ರೊ.ಶಿ.ಶಿ. ಬಸವನಾಳ (ಸಂ) : ಕೈವಲ್ಯ ದರ್ಪಣ
ಮುರುಘಾಮಠ, ಧಾರವಾಡ–1990

2) ಶ್ರೀಬಾಲೀಲಾ ಮಹಾಂತ ಶಿವಯೋಗಿಗಳನ್ನು ಕುರಿತು ರಚಿತವಾದ ಗ್ರಂಥಗಳು:

1) ಡಾ.ಎಸ್.ಸಿ. ನಂದಿಮಠ : ವೈರಾಗ್ಯದಲರು
ಎಂ.ಎಸ್.ಸುಂಕಾಪುರ (ಸಂ) : ಶತಮಾನೋತ್ಸವ ಗ್ರಂಥಮಾಲೆ
ಧಾರವಾಡ – 1959

2) ಟಿ.ಆರ್. ಮಹದೇವಯ್ಯ : ಬಾಲಮಹಾಂತ
ಗವಿಮಠ, ಮುಳಗುಂದ, 1993

3) ಚಂದ್ರಶೇಖರ ವಸ್ತ್ರದ (ಸಂ) : ದ್ಯಾಂಪುರ ಚೆನ್ನವೀರ ಕೃತ
ಶ್ರೀಬಾಲಲೀಲಾ
ಮಹಾಂತ ಶಿವಯೋಗಿಗಳ ಪುರಾಣ
2006

3) ಕಾವ್ಯ ಹಾಗೂ ವಿಮರ್ಶನ ಗ್ರಂಥಗಳು : ಪತ್ರಿಕೆಗಳು

1. ಡಾ.ಜಿ.ಎಸ್. ಸಿದ್ದಲಿಂಗಯ್ಯ (ಸಂ) 'ಕೈವಲ್ಯ' ಬೆಂಗಳೂರು – 1995
2. ಡಾ.ಎಚ್. ತಿಪ್ಪೇರುದ್ರಸ್ವಾಮಿ (ಸಂ) 'ಕೈವಲ್ಯ' ಕೌಸ್ತುಬ, ನಿಜಗುಣನುಭಮಂಟಪ – ಚಿಲಕವಾಡಿ – 1994
3. ಡಾ.ಎಂ.ಎಸ್.ಸುಂಕಾಪುರ : ಹಿಂದುಸ್ತಾನಿ ಸಂಗೀತ,
ಕ.ವಿ.ವಿ. ಧಾರವಾಡ–1977
4. ಡಾ.ಎಮ್.ಎಮ್. ಕಲಬುರ್ಗಿ : ಮಾರ್ಗಸಂಪುಟ
1 ಮತ್ತು 2 ಕ.ವಿ.ವಿ.
ಧಾರವಾಡ,1978

5. ಮಹಾಂತೇಶ ಶಾಸ್ತ್ರಿ : ಕೈವಲ್ಯ ಪದ್ಧತಿ (ಸಂ)
ಶಾಬಾದಿಮಠ ಗದಗ – 1990

6. ಪ್ರೊ ಡಿ.ಲಿಂಗಯ್ಯ : ಶಿಶುನಾಳ ಶರೀಫ್
ಚರಿತ್ರೆ, ಬೆಂಗಳೂರು

7. ಚನ್ನಪ್ಪ ಕೆರಿಮನಿ (ಸಂ) : ವೀರಶೈವ ಸಾಹಿತ್ಯ ಸಮೀಕ್ಷೆ
ಧಾರವಾಡ

4) ವಿಶ್ವಕೋಶಗಳು ಮತ್ತು ಛಂದೋಗ್ರಂಥಗಳು

1. ಡಾ.ಎಚ್. ತಿಪ್ಪೆರುದ್ರಸ್ವಾಮಿ (ಸಂ) : ಕನ್ನಡ ವಿಶ್ವಕೋಶ
ಮೈಸೂರು ವಿಶ್ವವಿದ್ಯಾಲಯ

2. ಡಾ.ಡಿ.ಎಸ್.ಕರ್ಕಿ : ಕನ್ನಡ ಛಂದೋವಿಕಾಸ
ಭಾರತ ಬುಕ್‌ಡಿಸೊ, ಧಾರವಾಡ
1977

3. ಎಂ.ಮರಿಯಪ್ಪಭಟ್ಟ : ಕನ್ನಡ ನಿಘಂಟು, ಕ.ಸಾ.ಪ .1976

4. ಡಾ.ಹಾ.ಮಾ.ನಾಯಕ : ಕನ್ನಡ ರತ್ನಕೋಶ
ಕನ್ನಡ ಅಭಿವೃದ್ಧಿಪ್ರಾಧಿಕಾರ
ಬೆಂಗಳೂರು 1994

5) ಸಂಶೋಧನಾ ಗ್ರಂಥಗಳು :–

1. ಡಾ.ಎಸ್.ವ್ಹಿ . ಅಯ್ಯನಗೌಡರ : ಮೈಲಾರ ಬಸವಲಿಂಗ ಶಿವಶರಣರು
ಕ.ವಿ.ಧಾರವಾಡ 1982

6) ಅಭಿನಂದನ ಗ್ರಂಥಗಳು :–

1. ಡಾ.ಸಂಗಮೇಶ ಸವದತ್ತಿಮಠ (ಸಂ): ಘನಶ್ರೀ 1986